prajavani.net prajavani | ಸೋಮವಾರ, ಡಿಸೆಂಬರ್ 8, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 338 | ಪುಟ 12 | www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಅಮ್ಮನ ಮಡಿಲಲ್ಲಿ
ಕಲಬುರಗಿಯಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆ(ಟಿಇಟಿ) ಬರೆಯಲು ಅಭ್ಯರ್ಥಿಯೊಬ್ಬರು ತನ್ನ ಮಗುವಿನೊಂದಿಗೆ ಬಂದಿದ್ದರು



ಹಸ್ತಾಕ್ಷರ
ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಭಾಗವಹಿಸಿದ್ದ ಬ್ರಿಟನ್ ಲೇಖಕಿ ಕ್ಲೇರ್ ಮ್ಯಾಕಿಂತೋಷ್ ಅವರು ತಮ್ಮ ಪುಸ್ತಕಗಳಿಗೆ ಹಸ್ತಾಕ್ಷರ ಹಾಕಿ ಓದುಗರಿಗೆ ನೀಡಿದರು

ಎಂಟು ಮಂದಿ ಹುದ್ದೆಗೆ ಕುತ್ತು 6 | 18ನೇ ಗೇಟ್‌ನ ಒಂದು ಭಾಗ ತೆರವು 5

‘ಉತ್ತರ’ಕ್ಕೆ ವೆಚ್ಚ ₹31,198 ಕೋಟಿ

ಎಸ್‌ಡಿಪಿಯಿಂದ ₹17,710 ಕೋಟಿ, ಕೆಕೆಆರ್‌ಡಿಬಿ: ₹13,488 ಕೋಟಿ ವೆಚ್ಚ

• ರಾಜೇಶ್ ರೈ ಚಟ್ಲ

ಬೆಂಗಳೂರು: ಉತ್ತರ ಕರ್ನಾಟಕ ಭಾಗದಲ್ಲಿ ಅಸಮತೋಲನ ನಿವಾರಣೆ, ಶಿಕ್ಷಣ, ಆರೋಗ್ಯ, ಕೈಗಾರಿಕೆ, ಮೂಲಸೌಕರ್ಯ ಸೇರಿದಂತೆ ವಿವಿಧ ವಲಯಗಳಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ‘ವಿಶೇಷ ಅಭಿವೃದ್ಧಿ ಯೋಜನೆ’ (ಎಸ್‌ಡಿಪಿ) ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಮೂಲಕ ರಾಜ್ಯ ಸರ್ಕಾರ ₹31,198 ಕೋಟಿ ಸುರಿದಿದೆ.

ಇಷ್ಟು ಹಣ ಸುರಿದರೂ ಈ ಭಾಗದಲ್ಲಿನ ಜ್ವಲಂತ ಸಮಸ್ಯೆಗಳಿಗೆ ನಿರೀಕ್ಷಿತ ಪರಿಹಾರ ಸಿಕ್ಕಿಲ್ಲ ಎನ್ನುವುದು ಈ ಭಾಗದ ಜನಪ್ರತಿನಿಧಿಗಳ ಒಕ್ಕೊರಲ ಕೊರಗು. ಪ್ರತಿ ಬಾರಿಯಂತೆ ಈ ಬಾರಿಯೂ ಬೆಳಗಾವಿ ಅಧಿವೇಶನದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿ, ಬೇಡಿಕೆಗಳ ಪಟ್ಟಿ ಮುಂದಿಡಲು ನಿರ್ಧರಿಸಿದ್ದಾರೆ.

ನೀರಾವರಿ ಯೋಜನೆಗಳು, ಕೈಗಾರಿಕೆಗಳ ಸ್ಥಾಪನೆ, ಉದ್ಯೋಗ ಸೃಷ್ಟಿ, ಕನ್ನಡ ಶಾಲೆಗಳ ಶಿಥಿಲಾವಸ್ಥೆ, ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳು, ಮೂಲಸೌಕರ್ಯ, ಪ್ರವಾಸೋದ್ಯಮ ಹೀಗೆ ವಿವಿಧ ವಿಚಾರಗಳಲ್ಲಿ ಈ ಭಾಗ ಹಿಂದುಳಿದಿರುವುದನ್ನು ಪ್ರಸ್ತಾಪಿಸಿ, ಅನುದಾನ–ಅಭಿವೃದ್ಧಿಗೆ ಒತ್ತು ನೀಡುವಂತೆ ಪಕ್ಷಾತೀತವಾಗಿ ಪಟ್ಟು ಹಿಡಿಯಲು ಮುಂದಾಗಿದ್ದಾರೆ.

‘ಉತ್ತರ ಕರ್ನಾಟಕ ಭಾಗಕ್ಕೆ ಡಿ.ಎಂ. ನಂಜುಂಡಪ್ಪ ವರದಿಯ ಅನ್ವಯ 2008–09ರಿಂದ 2024–25ರ ಅವಧಿಯಲ್ಲಿ ‘ವಿಶೇಷ ಅಭಿವೃದ್ಧಿ ಯೋಜನೆ’ಯಡಿ (ಎಸ್‌ಡಿಪಿ) ₹17,710.28 ಕೋಟಿ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಮೂಲಕ 2013–14ರಿಂದ ಈವರೆಗೆ ₹13,488.45 ಕೋಟಿ ಸೇರಿ ಒಟ್ಟು ₹31,198 ಕೋಟಿ ವೆಚ್ಚ ಮಾಡಲಾಗಿದೆ’ ಎಂದು ಆರ್ಥಿಕ ಇಲಾಖೆಯ ಮೂಲಗಳು ಮಾಹಿತಿ ನೀಡಿವೆ.



ಉತ್ತರ ಮತ್ತು ದಕ್ಷಿಣ ಕರ್ನಾಟಕ ನಡುವಿನ ಅಸಮಾನತೆಯನ್ನು ಅಧ್ಯಯನ ಮಾಡಿ, ಆ ಅಸಮಾನತೆಯನ್ನು ತಗ್ಗಿಸಲು ಸೂಕ್ತ ಅಭಿವೃದ್ಧಿ ವಿಧಾನಗಳನ್ನು ಶಿಫಾರಸು ಮಾಡಲು 2000ದ ಅಕ್ಟೋಬರ್‌ನಲ್ಲಿ ಡಿ.ಎಂ. ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿಯನ್ನು ಅಂದಿನ ಸರ್ಕಾರ ರಚಿಸಿತ್ತು.

6



ಪ್ರಾದೇಶಿಕ ಅಸಮತೋಲನಕ್ಕೆ ಸಂಬಂಧಿಸಿದಂತೆ ಎಲ್ಲ ವಿಭಾಗ, ಜಿಲ್ಲೆಗಳಲ್ಲಿ ಸಭೆ ನಡೆಸಿದ್ದು, ಈ ತಿಂಗಳಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು

ಪ್ರೊ. ಎಂ. ಗೋವಿಂದರಾವ್, ಅಧ್ಯಕ್ಷರು, ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ

ಇಂದಿನಿಂದ ಬೆಳಗಾವಿ ಅಧಿವೇಶನ

ಬೆಂಗಳೂರು: ಆಡಳಿತಾರೂಢ ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರ ಹಂಚಿಕೆ ಕುರಿತು ಉಂಟಾಗಿರುವ ಗೊಂದಲದ ಮಧ್ಯೆಯೇ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸೋಮವಾರದಿಂದ ವಿಧಾನಮಂಡಲ ಅಧಿವೇಶನದ ಆರಂಭವಾಗಲಿದ್ದು, ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳು, ರೈತರ ಸಂಕಷ್ಟ ಮತ್ತು ಬೆಲೆ ಏರಿಕೆ ವಿಷಯವನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ಕಟ್ಟಿಹಾಕಲು ವಿರೋಧ ಪಕ್ಷಗಳು ತೋಳೇರಿಸಿ ನಿಂತಿವೆ.

ಅಧಿಕಾರ ಹಂಚಿಕೆಯ ವಿಚಾರದಿಂದ ಉಂಟಾಗಬಹುದಾದ ಮುಜುಗರವನ್ನು ತಪ್ಪಿಸಿಕೊಳ್ಳಲು ಉಪಾಹಾರ ಕೂಟದ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗೊಂದಲವನ್ನು ಬದಿಗೆ ಸರಿಸಿ ಒಗ್ಗಟ್ಟಿನ ಮಂತ್ರ ಜಪಿಸಿದ್ದಾರೆ. ಈ ಮೂಲಕ ಕಲಾಪವನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಇಬ್ಬರು ನಾಯಕರೂ ಸಿದ್ಧರಾಗಿದ್ದಾರೆ.

6



ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂಭಾಗ ಮಹಿಳಾ ಕಾರ್ಮಿಕರು ಕಳೆ ತೆಗೆಯುತ್ತಿರುವ ದೃಶ್ಯ ಭಾನುವಾರ ಕಂಡುಬಂತು ಚಿತ್ರ: ರಂಜು ಪಿ

₹48,866.52 ಕೋಟಿ — ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಎಸ್‌ಡಿಪಿ ಅಡಿ 2007–08ರಿಂದ 2024–25ರವರೆಗೆ (ಮಾರ್ಚ್) ನಿಗದಿಯಾಗಿದ್ದ ಒಟ್ಟು ಅನುದಾನ

₹40,159.42 ಕೋಟಿ ಬಿಡುಗಡೆಯಾದ ಮೊತ್ತ	**₹36,866.56 ಕೋಟಿ** ವೆಚ್ಚವಾದ ಒಟ್ಟು ಮೊತ್ತ
₹17,710.28 ಕೋಟಿ ಉತ್ತರ ಕರ್ನಾಟಕ ಭಾಗಕ್ಕೆ ಎಸ್‌ಡಿಪಿಯಿಂದ ವೆಚ್ಚವಾದ ಮೊತ್ತ	**₹13,488.95 ಕೋಟಿ** ಕೆಕೆಆರ್‌ಡಿಬಿಯಿಂದ ವೆಚ್ಚವಾದ ಅನುದಾನ

ಕೆಕೆಆರ್‌ಡಿಬಿ: ವೆಚ್ಚದಲ್ಲಿ ಹಿಂದೆ

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ಪ್ರತಿ ವರ್ಷ ಸರ್ಕಾರ ಕೋಟ್ಯಂತರ ರೂಪಾಯಿ ಅನುದಾನ ನೀಡುತ್ತಿದ್ದರೂ, ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆ, ಅಂದಾಜು ಪಟ್ಟಿ ತಯಾರಿ ಮತ್ತು ಟೆಂಡರ್ ಪ್ರಕ್ರಿಯೆ ವಿಳಂಬವೂ ಸೇರಿದಂತೆ ನಾನಾ ಕಾರಣಗಳಿಂದ ನಿರೀಕ್ಷೆಯಂತೆ ವೆಚ್ಚ ಆಗಿಲ್ಲ.

ರಾಜ್ಯ ಸರ್ಕಾರ 2013–14ನೇ ಸಾಲಿನಿಂದ ಈವರೆಗೆ ಕೆಕೆಆರ್‌ಡಿಬಿಗೆ ₹26 ಸಾವಿರ ಕೋಟಿ ಅನುದಾನ ನಿಗದಿಪಡಿಸಿದೆ. 2024–25 ಮತ್ತು 2025–26ನೇ ಸಾಲಿನಲ್ಲಿ ಮಂಡಳಿಗೆ ತಲಾ ₹5 ಸಾವಿರ ಕೋಟಿ ನಿಗದಿಪಡಿಸಿದ್ದು, ಆ ಮೊತ್ತಕ್ಕೆ ಕ್ರಿಯಾಯೋಜನೆ ರೂಪಿಸಿ, ₹3 ಸಾವಿರ ಕೋಟಿಗೆ ಸೀಮಿತಗೊಳಿಸಿ ವೆಚ್ಚ ಭರಿಸಲು ಮತ್ತು ಉಳಿದ ಕಾಮಗಾರಿಗಳನ್ನು ಮುಂದುವರಿದ ಕಾಮಗಾರಿಯಾಗಿ ಮುಂದಿನ ವರ್ಷದಲ್ಲಿ ಅನುಷ್ಠಾನಗೊಳಿಸಲು ಆರ್ಥಿಕ ಇಲಾಖೆ ಸೂಚಿಸಿದೆ.

ಈ ಮಧ್ಯೆ, ಕೆಕೆಆರ್‌ಡಿಬಿ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ತೀರಾ ಕಳಪೆಯಾಗಿದ್ದು, ಸರ್ಕಾರದ ಹಣ ಲೂಟಿ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಇತ್ತೀಚೆಗೆ ವಿವಿಧ ಸಂಘಟನೆಗಳು ಕಲಬುರಗಿಯಲ್ಲಿರುವ ಕೆಕೆಆರ್‌ಡಿಬಿ ಕಚೇರಿ ಎದುರು ಧರಣಿಯನ್ನೂ ನಡೆಸಿವೆ.



ಗೋವಾದ ಅರ್ಪೋರಾ ಗ್ರಾಮದಲ್ಲಿನ ನೈಟ್‌ಕ್ಲಬ್ ‘ಬರ್ಚ್ ಬೈ ರೋಮಿಯೊ ಲೇನ್’ನಲ್ಲಿ ಶನಿವಾರ ರಾತ್ರಿ ಸಂಭವಿಸಿದ ಬೆಂಕಿ ದುರಂತದ ಬಳಿಕ ಕಂಡುಬಂದ ಅವಶೇಷಗಳು ಎಎಫ್‌ಪಿ ಚಿತ್ರ

ನೈಟ್‌ಕ್ಲಬ್‌ನಲ್ಲಿ ಬೆಂಕಿ, 25 ಸಾವು

ಪಣಜಿ (ಪಿಟಿಐ): ಉತ್ತರ ಗೋವಾದ ಅರ್ಪೋರಾದಲ್ಲಿರುವ ನೈಟ್‌ಕ್ಲಬ್ ‘ಬರ್ಚ್ ಬೈ ರೋಮಿಯೊ ಲೇನ್’ನಲ್ಲಿ ಶನಿವಾರ ರಾತ್ರಿ ಸಂಭವಿಸಿದ ಭಾರಿ ಅಗ್ನಿ ಅವಘಡದಲ್ಲಿ 25 ಮಂದಿ ಸಜೀವ ದಹನವಾಗಿದ್ದು, ಆರು ಜನರು ಗಾಯಗೊಂಡಿದ್ದಾರೆ.

ಮೃತಪಟ್ಟವರ ಪೈಕಿ 20 ಜನರು ಕ್ಲಬ್‌ನ ಸಿಬ್ಬಂದಿ ಹಾಗೂ ಐವರು ಪ್ರವಾಸಿಗರು ಎಂದು ಗುರುತಿಸಲಾಗಿದೆ. ಮೃತಪಟ್ಟಿರುವ ನಾಲ್ವರು ಪ್ರವಾಸಿಗರು ದೆಹಲಿಯವರು. ಮೃತ ಸಿಬ್ಬಂದಿ ಪೈಕಿ ಉತ್ತರಾಖಂಡದ ಐವರು, ನೇಪಾಳದ ನಾಲ್ವರು, ಜಾರ್ಖಂಡ್ ಮತ್ತು ಅಸ್ಸಾಂನ ತಲಾ ಮೂವರು, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ ತಲಾ ಇಬ್ಬರು ಹಾಗೂ ಪಶ್ಚಿಮ ಬಂಗಾಳದ ಒಬ್ಬರು ಸೇರಿದ್ದಾರೆ.

‘ಈ ದುರ್ಘಟನೆ ರಾತ್ರಿ 11.45ಕ್ಕೆ ಸಂಭವಿಸಿದೆ. ಎಲೆಕ್ಟ್ರಿಕ್ ಪಟಾಕಿ’ಗಳನ್ನು ಸಿಡಿಸಿದ್ದರಿಂದ ಬೆಂಕಿ ಹೊತ್ತಿಕೊಂಡಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಎಂದೂ ಹೇಳಿದ್ದಾರೆ.

11

‘ವಾರದೊಳಗೆ ವರದಿ’

‘ಘಟನೆ ಕುರಿತು ತನಿಖೆ ನಡೆಸುವುದಕ್ಕೆ ದಕ್ಷಿಣ ಗೋವಾ ಜಿಲ್ಲಾಧಿಕಾರಿ, ಅಗ್ನಿ ಮತ್ತು ತುರ್ತುಸೇವೆಗಳ ಉಪನಿರ್ದೇಶಕ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯ ನಿರ್ದೇಶಕರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ’ ಎಂದು ಪ್ರಮೋದ್ ಸಾವಂತ್ ತಿಳಿಸಿದ್ದಾರೆ.

‘ಈ ಸಮಿತಿಯು ವಾರದೊಳಗೆ ತನ್ನ ವರದಿ ಸಲ್ಲಿಸಲಿದೆ. ಈ ವಿಚಾರದಲ್ಲಿ ತಪ್ಪೆಸಗಿರುವ ಸರ್ಕಾರಿ ಅಧಿಕಾರಿಗಳನ್ನು ಪತ್ತೆ ಹಚ್ಚಿ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ರಾಜ್ಯದ ಮುಖ್ಯ ಕಾರ್ಯದರ್ಶಿ ಡಾ.ವಿ.ಕಂದವೇಲು ಹಾಗೂ ಡಿಜಿಪಿ ಅಲೋಕ್ ಕುಮಾರ್ ಅವರಿಗೆ ಆದೇಶಿಸಲಾಗಿದೆ’ ಎಂದಿದ್ದಾರೆ.

ಥಣಿಸಂದ್ರ ನಿವಾಸಿ ಸಾವು

ಬೆಂಗಳೂರು: ನೈಟ್‌ಕ್ಲಬ್ ‘ಬರ್ಚ್ ಬೈ ರೋಮಿಯೊ ಲೇನ್’ನಲ್ಲಿ ಶನಿವಾರ ರಾತ್ರಿ ಸಂಭವಿಸಿದ ಅಗ್ನಿ ಅವಘಡದಲ್ಲಿ ನಗರದ ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಥಣಿಸಂದ್ರ ನಿವಾಸಿ ಇಶಾಕ್ ಎಂಬವರು ಮೃತಪಟ್ಟಿದ್ದಾರೆ. ಸ್ನೇಹಿತರೊಂದಿಗೆ ಗೋವಾಕ್ಕೆ ತೆರಳಿದ್ದ ಇಶಾಖ್, ರಾತ್ರಿ ಕ್ಲಬ್‌ಗೆ ಹೋಗಿದ್ದರು. ಈ ವೇಳೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಸಿಲುಕಿ ಸಾವಿಗೀಡಾಗಿದ್ದು, ಉಳಿದ ನಾಲ್ವರು ಪಾರಾಗಿದ್ದಾರೆ. ಇಶಾಕ್ ಶವವನ್ನು ಅವರ ತಂದೆ ಎಂ.ಡಿ.ಹುಸೇನ್ ಗುರುತಿಸಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಹಸ್ತಾಂತರಿಸಲಾಗುತ್ತದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರೆಪೊ ಕಡಿತ: ಎಷ್ಟು ತಗ್ಗುತ್ತದೆ ಇಎಂಐ?

ವಿವರ 10

ಎಲ್‌ಎಲ್‌ಆರ್‌ಗೆ ಅರ್ಜಿ ಸಲ್ಲಿಸಿದ 7 ದಿನದಲ್ಲಿ ಕಲಿಕಾ ಪರೀಕ್ಷೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ಚಾಲನಾ ಕಲಿಕಾ ಪರವಾನಗಿ (ಎಲ್‌ಎಲ್‌ಆರ್) ಪಡೆಯಲು ಅರ್ಜಿ ಸಲ್ಲಿಸಿದವರು ಏಳು ದಿನಗಳ ಒಳಗೆ ಆನ್‌ಲೈನ್ ಮೂಲಕ ಕಲಿಕಾ ಪರೀಕ್ಷೆ ಕಡ್ಡಾಯವಾಗಿ ತೆಗೆದುಕೊಳ್ಳುವ ನಿಯಮ ಜನವರಿ 1ರಿಂದ ಜಾರಿಗೆ ಬರಲಿದೆ ಎಂದು ಸಾರಿಗೆ ಇಲಾಖೆ ತಿಳಿಸಿದೆ.

ಎಲ್‌ಎಲ್‌ಆರ್‌ಗೆ ಅರ್ಜಿ ಹಾಕಿದವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿದ್ದಾರೆಯೇ ಎಂಬುದನ್ನು ಈ ಪರೀಕ್ಷೆ ಮೂಲಕ ಪತ್ತೆ ಹಚ್ಚಲಾಗುತ್ತದೆ. ಯಾವುದೇ ಸಮಸ್ಯೆ ಇಲ್ಲದವರಿಗೆ ವಾಹನ ಚಾಲನಾ ಕಲಿಕೆಗೆ ಪರವಾನಗಿ ಸಿಗಲಿದೆ.

ಎನ್‌ಐಸಿ ಅಭಿವೃದ್ಧಿ ಪಡಿಸಿರುವ ಕೇಂದ್ರೀಕೃತ ವೆಬ್ ಆಧಾರಿತ ಸಾರಥಿ ತಂತ್ರಾಂಶದ ಮೂಲಕ ಆಧಾರ್/ಮೊಬೈಲ್ ಒಟಿಪಿ ಬಳಸಿಕೊಂಡು ಅರ್ಜಿ ಸಲ್ಲಿಸಬೇಕು. ನಿಗದಿತ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಶುಲ್ಕ ಪಾವತಿಸಬೇಕು. ಪರವಾನಗಿ ಪ್ರಾಧಿಕಾರದವರಿಂದ ಅರ್ಜಿ ಪರಿಶೀಲನೆ ನಡೆಸಿದ ಬಳಿಕ ಏಳು ದಿನಗಳ ಒಳಗೆ ಆನ್‌ಲೈನ್ ಮೂಲಕ ಪರೀಕ್ಷೆ ತೆಗೆದುಕೊಳ್ಳಬೇಕು. ಏಳು ದಿನಗಳ ಒಳಗೆ ಪರೀಕ್ಷೆ ತೆಗೆದುಕೊಳ್ಳದೇ ಇದ್ದರೆ ತಂತ್ರಾಂಶದಲ್ಲಿ ಅರ್ಜಿಯು ಸ್ವಯಂ ರದ್ದಾಗುತ್ತದೆ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ಈಗಾಗಲೇ ಅರ್ಜಿ ಸಲ್ಲಿಸಿದವರಿಗೆ ಡಿ.31ರ ಒಳಗೆ ಕಲಿಕಾ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ರೈತರಿಗೆ ತಲುಪದ ಪೂರ್ಣ ಪರಿಹಾರ

• ವಿಶ್ವರಾಧ್ಯ ಎಸ್.ಹಂಗನಳ್ಳಿ

ಕಲಬುರಗಿ: ಅತಿವೃಷ್ಟಿ ಮತ್ತು ನೆರೆಯಿಂದ ಮುಂಗಾರು ಹಂಗಾಮಿನಲ್ಲಿ ಬೆಳೆಹಾನಿ ಅನುಭವಿಸಿದ ರೈತರಿಗೆ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮಾರ್ಗಸೂಚಿ ಜೊತೆಗೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಘೋಷಣೆ ಮಾಡಿದಂತೆ ಪೂರ್ಣ ಪ್ರಮಾಣದಲ್ಲಿ ಪರಿಹಾರ ಸಿಕ್ಕಿಲ್ಲ.

ಸಂಪೂರ್ಣ ಬೆಳೆಹಾನಿ ಸಂಭವಿಸಿದ್ದರೂ ಕಡಿಮೆ ಪ್ರಮಾಣದಲ್ಲಿ ಹಾನಿ ತೋರಿಸಿ ಪರಿಹಾರ ಮೊತ್ತದಲ್ಲಿ ಕಡಿತ ಮಾಡಲಾಗಿದೆ ಎಂದು ಹಲವು ರೈತರು ದೂರುತ್ತಿದ್ದಾರೆ.

‘ರೈತರಿಗೆ ಮಾಡಿದ ಮೋಸ’

‘ಮುಖ್ಯಮಂತ್ರಿ ಅವರೇ ಶೇ 80ರಷ್ಟು ಬೆಳೆಹಾನಿ ಆಗಿದೆ ಎಂದಿದ್ದರು. ಆದರೆ, ಕೃಷಿ ಅಧಿಕಾರಿಗಳು ವಾಸ್ತವ ಅರಿಯದೇ ಒಂದು, ಒಂದೂವರೆ ಎಕರೆ ಬೆಳೆಹಾನಿ ತೋರಿಸಿದ್ದಾರೆ. ಇದರಿಂದ ಯಾವ ರೈತರಿಗೂ ಪೂರ್ಣ ಪರಿಹಾರ ಸಿಕ್ಕಿಲ್ಲ. ಇದು ರೈತರಿಗೆ ಮಾಡಿದ ಮೋಸ’ ಎಂದು ರೈತ ಹೋರಾಟ ಸಮಿತಿ ಮುಖಂಡ ಅವ್ವಣ್ಣ ಮ್ಯಾಕೇರಿ ಆರೋಪಿಸುತ್ತಾರೆ.



ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಸೆ.30ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವೈಮಾನಿಕ ಸಮೀಕ್ಷೆ ನಡೆಸಿದ್ದರು. ಮಳೆಯಾಶ್ರಿತ ಪ್ರತಿ ಹೆಕ್ಟೇರ್‌ಗೆ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ₹8,500 ಜೊತೆಗೆ ರಾಜ್ಯ ಸರ್ಕಾರದಿಂದ ಪ್ರತ್ಯೇಕವಾಗಿ ಹೆಚ್ಚುವರಿಯಾಗಿ ₹8,500 ಸೇರಿ ₹17,000, ನೀರಾವರಿ ಬೆಳೆಗಳಿಗೆ ₹17,000 + ₹8,500 ಸೇರಿ ₹25,500 ಹಾಗೂ ಬಹು ವಾರ್ಷಿಕ ಬೆಳೆಗಳಿಗೆ ₹22,500 + ₹8,500 ಸೇರಿ ₹31,000 ಪರಿಹಾರ ನೀಡ ಲಾಗುವುದು ಎಂದು ಮುಖ್ಯಮಂತ್ರಿ ಕಲಬುರಗಿಯಲ್ಲಿ ಘೋಷಿಸಿದ್ದರು.

ರಾಜ್ಯದಲ್ಲಿ 12.11 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶಗಳಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆಹಾನಿಯಾಗಿದೆ.

6

ಇಂಡಿಗೊ: ₹610 ಕೋಟಿ ಮರುಪಾವತಿಗೆ ಕ್ರಮ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ವಿಮಾನಗಳ ಹಾರಾಟ ರದ್ದತಿ ಹಾಗೂ ಪ್ರಯಾಣಿಕರ ಆಕ್ರೋಶಕ್ಕೆ ತುತ್ತಾಗಿ ವ್ಯಾಪಕ ಟೀಕೆಗೆ ಗುರಿಯಾಗಿರುವ ಇಂಡಿಗೊ ವಿಮಾನಸಂಸ್ಥೆಯು ಪ್ರಯಾಣಿಕರಿಗೆ ಈವರೆಗೆ ₹610 ಕೋಟಿ ಮರುಪಾವತಿ ಮಾಡುವುದಕ್ಕೆ ಕ್ರಮ ಕೈಗೊಂಡಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ಭಾನುವಾರ ಹೇಳಿದೆ.

ಶನಿವಾರಕ್ಕೆ ಅಂತ್ಯಗೊಂಡ ಅವಧಿಗೆ, 3 ಸಾವಿರದಷ್ಟು ಸಾಮಾನು ಸರಂಜಾಮುಗಳನ್ನು ಪ್ರಯಾಣಿಕರಿಗೆ ತಲುಪಿಸಿದೆ. ಜೊತೆಗೆ, ವಿಮಾನಗಳ ಸಂಚಾರವೂ ನಿಧಾನಕ್ಕೆ ಸಹಜ ಸ್ಥಿತಿಯತ್ತ ಮರಳುತ್ತಿದೆ ಎಂದು ತಿಳಿಸಿದೆ.

ವಿಮಾನಗಳ ಸಂಚಾರ ರದ್ದಾಗಿದ್ದಲ್ಲಿ ಅಥವಾ ವಿಪರೀತ ವಿಳಂಬವಾಗಿದ್ದ ಸಂದರ್ಭದಲ್ಲಿ, ಪ್ರಯಾಣಿಕರಿಗೆ ಭಾನುವಾರ ರಾತ್ರಿ 8ರ ಒಳಗಾಗಿ ಹಣ ಮರುಪಾವತಿ ಮಾಡುವಂತೆ ಸೂಚನೆ ನೀಡಲಾಗಿತ್ತು ಎಂದು ಸಚಿವಾಲಯ ತಿಳಿಸಿದೆ.

ವಿಮಾನಗಳ ಸಂಚಾರ ರದ್ದಾದ ಬಳಿಕ ವಿವಿಧ ವಿಮಾನ ನಿಲ್ದಾಣಗಳಲ್ಲಿ ಗದ್ದಲ, ಗೊಂದಲ ಉಂಟಾಗಿತ್ತು.

11



‘ಡಿ.10ರ ವೇಳೆಗೆ ಸ್ಥಿರತೆ’

‘ಸಂಸ್ಥೆಯ ವಿಮಾನಗಳ ಹಾರಾಟದಲ್ಲಿ ಡಿಸೆಂಬರ್ 10ರ ಒಳಗಾಗಿ ಸ್ಥಿರತೆ ಕಂಡುಬರುವ ನಿರೀಕ್ಷೆ ಇದೆ. ಈ ಮೊದಲು ಡಿ.10ರಿಂದ 15ರ ನಡುವೆ ಇದು ಕಾರ್ಯಗತಗೊಳ್ಳುವ ನಿರೀಕ್ಷೆ ಹೊಂದಲಾಗಿತ್ತು’ ಎಂದು ಇಂಡಿಗೊ ತಿಳಿಸಿದೆ.

ಸಂಸ್ಥೆ 2,300 ವಿಮಾನಗಳನ್ನು ಹೊಂದಿದ್ದು, ಈ ಪೈಕಿ ಭಾನುವಾರ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರ್ಗಗಳಲ್ಲಿ ಒಟ್ಟು 1650 ವಿಮಾನಗಳು ಕಾರ್ಯಾಚರಣೆ ನಡೆಸಿವೆ. 650 ವಿಮಾನಗಳ ಸಂಚಾರವನ್ನು ದಿನದ ಮಟ್ಟಿಗೆ ರದ್ದು ಮಾಡಲಾಗಿತ್ತು ಎಂದು ಇಂಡಿಗೊ ತಿಳಿಸಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಮೆಕ್ಕೆಜೋಳ ಖರೀದಿ ಮಿತಿ 50 ಕ್ವಿಂಟಲ್

ಬೆಂಗಳೂರು: ಪ್ರತಿ ರೈತರಿಂದ ಮೆಕ್ಕೆಜೋಳ ಖರೀದಿಸಲು ವಿಧಿಸಿದ್ದ ಗರಿಷ್ಠ 20 ಕ್ವಿಂಟಲ್ ಮಿತಿಯನ್ನು ರಾಜ್ಯ ಸರ್ಕಾರವು 50 ಕ್ವಿಂಟಲ್‌ಗೆ ಹೆಚ್ಚಿಸಿದೆ.

ಪ್ರತಿ ಕ್ವಿಂಟಲ್‌ಗೆ ₹2,400 ಬೆಂಬಲ ಬೆಲೆಯಲ್ಲಿ, ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿರುವ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಲ್ ಮೆಕ್ಕೆಜೋಳ ಖರೀದಿಸಿ ಎಂದು ಸಹಕಾರ ಇಲಾಖೆಯು ಇದೇ 2ರಂದು ಆದೇಶ ಹೊರಡಿಸಿತ್ತು.

ಇಲಾಖೆಯು ಹೇರಿದ್ದ ಈ ಮಿತಿಗೆ ರೈತರಿಂದ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಇದರ ಬೆನ್ನಲ್ಲೇ ಇಲಾಖೆಯು ಭಾನುವಾರ ಆದೇಶ ಹೊರಡಿಸಿದ್ದು, ಮಿತಿಯನ್ನು 50 ಕ್ವಿಂಟಲ್‌ಗೆ ಹೆಚ್ಚಿಸಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

ದೊಡ್ಡಜಾಲ ಗ್ರಾ.ಪಂ: ಗೌರಮ್ಮ ಅಧ್ಯಕ್ಷೆ



ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ದೊಡ್ಡಜಾಲ ಗ್ರಾಮ ಪಂಚಾಯಿತಿಯ ಪ್ರಭಾರ ಅಧ್ಯಕ್ಷರಾಗಿ ಎ.ಸಿ.ಗೌರಮ್ಮ ಕೃಷ್ಣಪ್ಪ ಆಯ್ಕೆಯಾಗಿದ್ದಾರೆ.

ಆರ್.ಬೈರೇಗೌಡ ರಾಜೀನಾಮೆಯಿಂದ ಸ್ಥಾನ ತೆರವಾಗಿತ್ತು. ಎ.ಸಿ.ಗೌರಮ್ಮ ಒಟ್ಟು 14 ಸದಸ್ಯರನ್ನು ಪಂಚಾಯಿತಿ ಹೊಂದಿದೆ.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಎನ್.ಕೆ.ಮಹೇಶ್‌ಕುಮಾರ್, ಹಂಸವೇಣಿ ಮಂಜುನಾಥ್, ಸದಸ್ಯರಾದ ಎಂ.ಚೇತನ್, ನಾಗರಾಜು.ಎ, ಹರಿಪ್ರಕಾಶ್, ಪ್ರಕಾಶ್, ನರಸಿಂಹಯ್ಯ, ಸೌಭಾಗ್ಯಮ್ಮ, ರತ್ನಮ್ಮ, ಮಾಲಾ, ಶ್ರುತಿ ಉಪಸ್ಥಿತರಿದ್ದರು.

ವಿರಳ ಕಾಯಿಲೆ ಪತ್ತೆಗೆ ತಪಾಸಣೆ

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಪ್ರಸವಪೂರ್ವ ಪರೀಕ್ಷೆ

• ವರುಣ ಹೆಗಡೆ

450
ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿರುವ ಹಾಸಿಗೆಗಳು

500 ರಿಂದ 600
ಸಂಸ್ಥೆಗೆ ಪ್ರತಿನಿತ್ಯ ಭೇಟಿ ನೀಡುವ ಹೊರರೋಗಿಗಳು

ಬೆಂಗಳೂರು: ವಿರಳ ಕಾಯಿಲೆ ಪತ್ತೆಯ ಜತೆಗೆ ಭ್ರೂಣದ ಆರೋಗ್ಯ ವೃದ್ಧಿಗೆ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಪ್ರಸವಪೂರ್ವ ತಪಾಸಣೆ ಪ್ರಾರಂಭಿಸಲಾಗಿದೆ.

ವಂಶವಾಹಿ ಸಮಸ್ಯೆಗಳಿಂದಾಗಿ ಸಿಕಲ್‌–ಸೆಲ್, ಅನೀಮಿಯಾ, ತಲಸ್ಸೇಮಿಯಾ, ಹಿಮೋಫೀಲಿಯಾ, ಪೊಂಪೆ, ಗೌಚರ್ ಸೇರಿ ವಿವಿಧ ವಿರಳ ಕಾಯಿಲೆಗಳಿಗೆ ಬಾಧಿತರಾಗುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಈ ರೀತಿಯ ವಿರಳ ಕಾಯಿಲೆ ಎದುರಿಸುತ್ತಿರುವವರಿಗೆ ನಿರಂತರ ಚಿಕಿತ್ಸೆ ಹಾಗೂ ಔಷಧ ಅಗತ್ಯ. ಆದರೆ, ಈ ಕಾಯಿಲೆಗಳಿಗೆ ಔಷಧ ವೆಚ್ಚವೂ ದುಬಾರಿ ಆಗಿರುವುದರಿಂದ ಬಹುತೇಕ ಮಕ್ಕಳ ಪಾಲಕರು ಚಿಕಿತ್ಸೆಯನ್ನೇ ಸ್ಥಗಿತ ಮಾಡುತ್ತಿದ್ದಾರೆ. ಹೀಗಾಗಿ, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯು 'ಫೀಟಲ್ ಮೆಡಿಸಿನ್' ವಿಭಾಗವನ್ನು (ಎಫ್‌ಎಂಸಿ) ಪ್ರಾರಂಭಿಸಿದೆ. ಈಗಾಗಲೇ 68 ಗರ್ಭಿಣಿಯರಿಗೆ ಸಂಸ್ಥೆಯ ಈ ಕೇಂದ್ರದಲ್ಲಿ ತಪಾಸಣೆ ನಡೆಸಲಾಗಿದೆ.

ಸರ್ಕಾರಿ ವ್ಯವಸ್ಥೆಯಡಿ ಕಾರ್ಯಾರಂಭಿಸಲಾದ ಪ್ರಥಮ ಕೇಂದ್ರ ಇದಾಗಿದೆ. ಭ್ರೂಣದ ಬೆಳವಣಿಗೆ ಮತ್ತು ಆರೋಗ್ಯದ ಮೌಲ್ಯಮಾಪನ, ಭ್ರೂಣ ಕಾಯಿಲೆಗಳ ಪತ್ತೆ, ನಿರ್ವಹಣೆ ಹಾಗೂ ಚಿಕಿತ್ಸೆಗೆ ಈ ಕೇಂದ್ರ ಸಹಕಾರಿಯಾಗಲಿದೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕೆಪಿಟಿಸಿಎಲ್) ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ಈ ಕೇಂದ್ರ ನಿರ್ಮಾಣಕ್ಕೆ ನೆರವು ನೀಡಿದ್ದು, ಒಟ್ಟು ₹1.5 ಕೋಟಿ ವೆಚ್ಚದಲ್ಲಿ ಕೇಂದ್ರ ನಿರ್ಮಾಣವಾಗಿದೆ. ಒಟ್ಟು 120 ಸ್ಕ್ಯಾನ್‌ಗಳನ್ನು ಈ ಕೇಂದ್ರದಲ್ಲಿ ನಡೆಸಲಾಗಿದ್ದು, ನೋಂದಾಯಿತರಲ್ಲಿ ಬಹತೇಕ ಗರ್ಭಿಣಿಯರಿಗೆ ಮತ್ತೊಮ್ಮೆ ಸ್ಕ್ಯಾನಿಂಗ್ ಮಾಡಲಾಗಿದೆ.

ಆರೋಗ್ಯಯುತ ಮಗು: ಅಂಗ ನ್ಯೂನತೆ, ಬುದ್ಧಿಮಾಂದ್ಯ, ದೃಷ್ಟಿ ಮತ್ತು ಶ್ರವಣ ದೋಷ, ಮಿದುಳಿನ ಸಮಸ್ಯೆ, ರಕ್ತ ಕಣಗಳ ಸಮಸ್ಯೆ, ಶ್ವಾಸಕೋಶದ ಸಮಸ್ಯೆ ಸೇರಿ ನವಜಾತ ಶಿಶುಗಳಲ್ಲಿ ಕಾಣಿಸಿಕೊಳ್ಳುವ ವಿವಿಧ ಸಮಸ್ಯೆಗಳನ್ನು ತಡೆಯಲು ಈ ಕೇಂದ್ರ ನೆರವಾಗಲಿದೆ. ಕೇಂದ್ರಕ್ಕೆ ಬರುವವರಿಗೆ ಆಪ್ತ ಸಮಾಲೋಚನೆಯನ್ನೂ ಒದಗಿಸ ಲಾಗುತ್ತದೆ. ಈಗಾಗಲೇ ಮೊದಲ ಮಗು ಆನುವಂಶಿಕ ಸಮಸ್ಯೆಗೆ ಒಳಗಾಗಿದ್ದಲ್ಲಿ, ಎರಡನೇ ಮಗು ಈ ಸಮಸ್ಯೆಗೆ ಒಳಗಾಗದಂತೆ ತಡೆಯಲು ಕೇಂದ್ರ ನೆರವಾಗುತ್ತದೆ.

'ಗರ್ಭಾವಸ್ಥೆಯ ಮೊದಲ ಮೂರು ತಿಂಗಳ ಒಳಗೆ ಭ್ರೂಣದ ಅಸಹಜತೆ, ಅಂಗ ನ್ಯೂನತೆ, ರಚನಾತ್ಮಕ ಹಾಗೂ ಆನುವಂಶಿಕ ಸಮಸ್ಯೆಗಳು ಸೇರಿ ಒಟ್ಟಾರೆ ಆರೋಗ್ಯವನ್ನು ನಿರ್ಣಯಿಸಲಾಗುತ್ತದೆ. ತಪಾಸಣೆ ಬಳಿಕ ಸಮಸ್ಯೆ ದೃಢಪಟ್ಟಲ್ಲಿ ಭ್ರೂಣಾವಸ್ಥೆಯಲ್ಲಿಯೇ ಚಿಕಿತ್ಸೆ ನೀಡಿ, ಸಮಸ್ಯೆ ಪರಿಹರಿಸಲಾಗುವುದು. ವಿವಿಧ ಸರ್ಕಾರಿ ಆರೋಗ್ಯ ವಿಮೆಯಡಿ ಬಿಪಿಎಲ್ ಕುಟುಂಬದವರಿಗೆ ಕೇಂದ್ರದಲ್ಲಿ ದುಬಾರಿ ವೈದ್ಯಕೀಯ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಲಾಗುತ್ತದೆ' ಎಂದು ಸಂಸ್ಥೆಯ ನಿರ್ದೇಶಕ ಡಾ. ಸಂಜಯ್ ಕೆ.ಎಸ್. ತಿಳಿಸಿದರು.



ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ



ಆನುವಂಶಿಕ ಕಾಯಿಲೆಗಳ ಪತ್ತೆಗೆ ಎಫ್‌ಎಂಸಿ ಕೇಂದ್ರದಲ್ಲಿ ತಪಾಸಣೆ ಪ್ರಾರಂಭಿಸಲಾಗಿದೆ. ಜನನಪೂರ್ವದಲ್ಲೇ ಸಮಸ್ಯೆ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಲು ಕೇಂದ್ರ ನೆರವಾಗುತ್ತಿದೆ
ಡಾ. ಸಂಜಯ್ ಕೆ.ಎಸ್,
ನಿರ್ದೇಶಕ, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ

ಆಯ್ದ ಪ್ರಕರಣಗಳಲ್ಲಿ ಮಾತ್ರ ಪರೀಕ್ಷೆ

ತಜ್ಞ ವೈದ್ಯರನ್ನು ಒಳಗೊಂಡ ಈ ಕೇಂದ್ರವು ಎಲ್ಲ ಗರ್ಭಿಣಿಯರನ್ನು ಪರೀಕ್ಷೆಗೆ ಒಳಪಡಿಸುವುದಿಲ್ಲ. ಆನುವಂಶಿಕ ಕಾಯಿಲೆಯ ಕೌಟುಂಬಿಕ ಇತಿಹಾಸ ಹೊಂದಿರುವ ಗರ್ಭಿಣಿಯರು, ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಮತ್ತು ರಕ್ತ ಪರೀಕ್ಷೆ ವೇಳೆ ಅಪರೂಪದ ಕಾಯಿಲೆಯ ಅಪಾಯ ಗೋಚರಿಸಿದಲ್ಲಿ, ಅಸಹಜತೆ ಕಂಡುಬಂದಲ್ಲಿ ಅಂತಹವರನ್ನು ನೋಂದಾಯಿಸಿಕೊಂಡು, ಈ ಕೇಂದ್ರದಲ್ಲಿ 'ಕೋರಿಯಾನಿಕ್ ವಿಲ್ಲಸ್ ಬಯಾಪ್ಸಿ' ಸೇರಿ ವಿವಿಧ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಇದಕ್ಕೂ ಮೊದಲು ಸಮಾಲೋಚನೆ ನಡೆಸಲಾಗುತ್ತದೆ. ಭ್ರೂಣದಲ್ಲಿ ಸರಿಪಡಿಸಲಾಗದ ಗಂಭೀರ ಸ್ವರೂಪದ ಸಮಸ್ಯೆ ಕಂಡುಬಂದಲ್ಲಿ, ಕಾನೂನಿನಂತೆ ನಿಗದಿತ ಅವಧಿಯೊಳಗೆ ಗರ್ಭಪಾತಕ್ಕೆ ಕೇಂದ್ರ ನೆರವಾಗಲಿದೆ.

ನಗರದಲ್ಲಿ ಇಂದು

ವಿಶ್ವಸಂಭ್ರಮ: ನ್ಯಾಯಸುಧಾ ಪರೀಕ್ಷೆ, ಭಾಗವತ ಪಾರಾಯಣ, ವಿಶ್ವೇಶತೀರ್ಥ ಸ್ವಾಮೀಜಿ ಅವರ 6ನೇ ಮಹಾಸಮಾರಾಧನೆ, ಬೆಳಿಗ್ಗೆ 8ರಿಂದ ಭಜನೆ, ಬೆಳಿಗ್ಗೆ 9ರಿಂದ ನ್ಯಾಯಸುಧಾ ಪರೀಕ್ಷೆ, ಉಪಸ್ಥಿತಿ: ವಿಶ್ವತೀರ್ಥಪ್ರಸನ್ನ ಸ್ವಾಮೀಜಿ, ವಿಶ್ವವಲ್ಲಭತೀರ್ಥ ಸ್ವಾಮೀಜಿ, ಸಂಜೆ 6.30ಕ್ಕೆ ಪಂಡಿತರ ಉಪನ್ಯಾಸ, ಸಂಜೆ 7.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ ಹಾಗೂ ಸ್ಥಳ: ಪೂರ್ಣಪ್ರಜ್ಞಾ ವಿದ್ಯಾಪೀಠ

ಸ್ಮಾರ್ಟ್ ಕೃಷಿಯ ಬಗ್ಗೆ ಸಲಹೆ: ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧರಿಸಿ ಬೆಳೆ ವಿಶ್ಲೇಷಣೆ ನಡೆಸುವ ಬಗ್ಗೆ ಕೃಷಿ ವಿಜ್ಞಾನಿಗಳಿಗೆ ತರಬೇತಿ, ಉದ್ಘಾಟನೆ: ಎಸ್.ವಿ. ಸುರೇಶ್, ಮುಖ್ಯ ಅತಿಥಿ: ಕರುಣಾಕರ್ ಜೆ., ಸುಮಾ, ಅಧ್ಯಕ್ಷತೆ: ವೈ.ಎನ್. ಶಿವಲಿಂಗಯ್ಯ, ಆಯೋಜನೆ ಹಾಗೂ ಸ್ಥಳ: ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಳಿಗ್ಗೆ 11

'ಭಾಗವತ ಸಾರೋದ್ಧಾರ' ಧಾರ್ಮಿಕ ಪ್ರವಚನ: ಹೊಳವನಹಳ್ಳಿ ಶ್ರೀನಿವಾಸಾಚಾರ್ಯ, ಆಯೋಜನೆ ಹಾಗೂ ಸ್ಥಳ: ಸೀತಾರಾಮ ಮಂದಿರ (ರಾಘವೇಂದ್ರ ಸ್ವಾಮಿಗಳ ಮಠದ ಪಕ್ಕ), ಬೆಮೆಲ್ ಬಡಾವಣೆ, ರಾಜರಾಜೇಶ್ವರಿನಗರ, ಸಂಜೆ 6.45

ಸಿಜಿಕೆ 75: ರಂಗಭೂಮಿಯ ಒಡಲಾಳ ನಾಟಕೋತ್ಸವ, ಚಾಲನೆ: ಎನ್. ಮಂಗಳಾ, ಅಧ್ಯಕ್ಷತೆ: ಶ್ರೀನಿವಾಸ ಜಿ. ಕಪ್ಪಣ್ಣ, ಉಪಸ್ಥಿತಿ: ಸಾಂಬಶಿವ ದಳವಾಯಿ, ಸಂಸ ಸುರೇಶ್, ರಂಗಗೌರವ: ಜನಾರ್ದನ (ಜನ್ನಿ), ನಾಟಕ ಪ್ರದರ್ಶನ: ನವರಸಂ ರಂಗತಂಡದಿಂದ 'ಬೆರಳ್ಗೆ ಕೊರಳ್' ನಾಟಕ ಪ್ರದರ್ಶನ, ಆಯೋಜನೆ: ಕರ್ನಾಟಕ ಬೀದಿನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 6.45

***

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಪ್ರಜಾವಾಣಿ' ವಲಯ ಮಟ್ಟದ ಕ್ವಿಜ್ 15ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಲಯ ಮಟ್ಟದ 'ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್' ಡಿಸೆಂಬರ್ 15ರಂದು ಜಯನಗರದಲ್ಲಿರುವ ರಾಷ್ಟ್ರೀಯ ವಿದ್ಯಾಲಯದ ಆರ್.ವಿ. ಆಡಿಟೋರಿಯಂನಲ್ಲಿ ನಡೆಯಲಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಹೆಸರು ನೋಂದಾಯಿಸಿಕೊಳ್ಳಬಹುದು.

ಬೆಂಗಳೂರು ನಗರ, ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳ 7ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು.

ಇದು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ವಿದ್ಯಾರ್ಥಿಗಳು ಶಾಲೆಗಳ ಮೂಲಕ ತಂಡವಾಗಿ ನೋಂದಾಯಿಸಿಕೊಳ್ಳಬೇಕು. ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ವಿದ್ಯಾರ್ಥಿಗಳು ಇರಬೇಕು. ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳೂ ತಂಡವಾಗಿ ಭಾಗವಹಿಸಬಹುದು. ಒಂದು ಶಾಲೆಯಿಂದ ಎಷ್ಟು ತಂಡಗಳು ಬೇಕಾದರೂ ಇರಬಹುದು.

ಕ್ವಿಜ್‌ಗೆ ಎಲ್ಲರಿಗೂ ಉಚಿತ ಪ್ರವೇಶವಿದೆ. ಸ್ಪರ್ಧೆ ನಡೆಯುವ ಸ್ಥಳದಲ್ಲೂ ಹೆಸರನ್ನು ನೋಂದಾಯಿಸಲು ಅವಕಾಶವಿದೆ. ಈ ವಲಯದಲ್ಲಿ ವಿಜೇತರಾದವರು ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅರ್ಹರಾಗುತ್ತಾರೆ. ತಂಡಗಳಿಗೆ ಪ್ರಾಥಮಿಕ ಹಂತದ ಪರೀಕ್ಷೆ ನಡೆಯುತ್ತದೆ.

ಹೆಚ್ಚಿನ ಮಾಹಿತಿಗೆ ಬೆಳಿಗ್ಗೆ 10ರಿಂದ ಸಂಜೆ 5ರೊಳಗೆ ಸಂಪರ್ಕಿಸಬೇಕಾದ ದೂರವಾಣಿ: 7338018541.

ಕ್ಯೂ ಆರ್ ಕೋಡ್

ORCHIDS The International School Presents ಪ್ರಜಾವಾಣಿ QUIZ CHAMPIONSHIP 2025

ಐಎಲ್‌ಯು

'ನಾರಾಯಣಗುರು ಚಿಂತನೆಗಳ ಅರಿವು ಮೂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾರಾಯಣಗುರು ಅವರ ಚಿಂತನೆಗಳ ಅರಿವನ್ನು ಯುವ ಸಮುದಾಯದಲ್ಲಿ ಮೂಡಿಸಬೇಕು. ಈಡಿಗ, ಬಿಲ್ಲವ ಸಮುದಾಯಗಳಲ್ಲಿ ಒಗ್ಗಟ್ಟು ತರಲು ಸಾಂಸ್ಕೃತಿಕ ಚಟುವಟಿಕೆಗಳನ್ನು ಹೆಚ್ಚಾಗಿ ಆಯೋಜಿಸಬೇಕು' ಎಂದು ಸೋಲೂರಿನ ಆರ್ಯ ಈಡಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ ಹೇಳಿದರು.

ಯುವ ವಾಹಿನಿ ಬೆಂಗಳೂರು ಘಟಕವು ನಗರದ ಶಿಕ್ಷಕರ ಸದನದಲ್ಲಿ ಆಯೋಜಿಸಿದ್ದ ಯುವ ವೈಭವ–2025 ಉದ್ಘಾಟಿಸಿ ಮಾತನಾಡಿದರು.

'ಸಹಬಾಳ್ವೆ, ಅನ್ಯೋನ್ಯತೆ, ಏಕತೆ ಜತೆಗೆ ನಾವೆಲ್ಲರೂ ಒಂದೇ ಕರುಳು ಬಳ್ಳಿಗಳು ಎನ್ನುವ ಸಂದೇಶ ಸಾರಬೇಕು. ನಮ್ಮ ಸಮಾಜದ ಪ್ರತಿಭೆಗಳಿಗೆ ವೇದಿಕೆ ಸಿಗಬೇಕು ಎನ್ನುವ ಕಾರಣದಿಂದ ಸಂಘಟನೆ ಆಯೋಜಿಸಿರುವ ಯುವ ವೈಭವಕ್ಕೆ ಸಹಕಾರ ನೀಡಿದ್ದೇವೆ. ಮುಂದಿನ ವರ್ಷ ರಾಜ್ಯದ ಎಲ್ಲಾ ಭಾಗಗಳಲ್ಲೂ ಯುವ ವೈಭವ ಆಯೋಜಿಸಿ ಇನ್ನಷ್ಟು ಪ್ರತಿಭೆಗಳಿಗೆ ವೇದಿಕೆ ಸಿಗುವಂತಾಗಬೇಕು' ಎಂದು ಸಲಹೆ ನೀಡಿದರು.

ಉದ್ಯಮಿ ಗೋವಿಂದಬಾಬು ಪೂಜಾರಿ ಮಾತನಾಡಿ, 'ಈಡಿಗ, ಬಿಲ್ಲವ ಸಹಿತ ಸಮುದಾಯದ ಉಪಪಂಗಡಗಳನ್ನು ಒಟ್ಟುಗೂಡಿಸುವ ಪ್ರಯತ್ನಗಳು ನಡೆದರೂ ಕೆಲವರು ಬಳ್ಳಿಯನ್ನೇ ಕತ್ತರಿಸುವ ಪ್ರಯತ್ನ ಮಾಡುತ್ತಾರೆ. ಅದಕ್ಕೆ ಅವಕಾಶ ಮಾಡಿಕೊಡದೇ ಯುವ ಸಮುದಾಯ ಒಂದುಗೂಡಬೇಕು. ಸಮುದಾಯದಲ್ಲಿ ಯಾರಾದರೂ ಕಷ್ಟದಲ್ಲಿದ್ದರೆ ಕೈಹಿಡಿಯುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು' ಎಂದರು.

ನಾರಾಯಣಗುರು ವಿಚಾರ ವೇದಿಕೆಯ ಸತ್ಯಜಿತ್ ಸುರತ್ಕಲ್ ಮಾತನಾಡಿ, 'ಈಡಿಗ, ಬಿಲ್ಲವ ಸಮಾಜದ ಉಪಜಾತಿಗಳ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳು ಲಭ್ಯವಾಗುವಂತೆ ಮಾಡಬೇಕು. 26 ಉಪ ಪಂಗಡಗಳನ್ನು ಮೇಲೆತ್ತುವ ಕಾರ್ಯ ಎಲ್ಲರಿಂದಲೂ ಆಗಬೇಕು' ಎಂದು ತಿಳಿಸಿದರು.

ಉಡುಪಿಯ ಗೀತಾಂಜಲಿ ಸುವರ್ಣ, ಕಲಾವಿದೆ ದೀಕ್ಷಾ, ಯುವ ವಾಹಿನಿ ಬೆಂಗಳೂರು ಅಧ್ಯಕ್ಷ ಶಶಿಧರ ಕೋಟ್ಯಾನ್, ಕಾರ್ಯದರ್ಶಿ ಸಂತೋಷ್ ಪೂಜಾರಿ ಪಣಪಿಲ, ನಟಿ ಭವ್ಯಶ್ರೀ ಪೂಜಾರಿ, ಸುಧೀರ್‌ಕುಮಾರ್ ಪೆರಾಡಿ, ಭಾವನಾ, ಕಾರ್ತಿ ಉಪಸ್ಥಿತರಿದ್ದರು.



ಬೆಂಗಳೂರಿನ ಶಿಕ್ಷಕರ ಸದನದಲ್ಲಿ ಭಾನುವಾರ ಯುವವಾಹಿನಿ ಆಯೋಜಿಸಿದ್ದ ಯುವ ವೈಭವ–2025 ಉದ್ಘಾಟನೆ ಕಾರ್ಯಕ್ರಮದಲ್ಲಿ ಗೀತಾಂಜಲಿ ಸುವರ್ಣ, ಗೋವಿಂದ ಬಾಬು ಪೂಜಾರಿ, ಸತ್ಯಜಿತ್ ಸುರತ್ಕಲ್, ವಿಖ್ಯಾತಾನಂದಸ್ವಾಮಿ, ಶಶಿಧರ್ ಕೋಟ್ಯಾನ್ ಮತ್ತು ಲೋಕೇಶ್ ಕೋಟ್ಯಾನ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ.

ಯುವ ಪ್ರತಿಭೆಗಳ ಕಲರವ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಯುವ ಕಲಾವಿದರು ಪ್ರತಿಭೆ ಅನಾವರಣಗೊಳಿಸಿದರು. ರಂಗಿನ ರಂಗೋಲಿ, ಗೀತ ಗಾಯನ, ಜ್ಞಾನರಂಗ ರಸಪ್ರಶ್ನೆ, ಗುರುಸ್ಮೃತಿ ಭಾಷಣ, ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗಿಯಾಗಿ ಬಹುಮಾನ ಪಡೆದರು.

ಅಪರೂಪದ ಕ್ಯಾನ್ಸರ್: ಬಾಲಕನಿಗೆ ಅಸ್ಥಿಮಜ್ಜೆ ಕಸಿ

ಬೆಂಗಳೂರು: 'ವಿಲ್ಮ್ಸ್ ಟ್ಯೂಮರ್' (ನೆಫ್ರೋಬ್ಲಾಸ್ಟೋಮಾ) ಎಂಬ ಅಪರೂಪದ ಮೂತ್ರಪಿಂಡ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಒಂಬತ್ತು ವರ್ಷದ ಬಾಲಕನಿಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಅಸ್ಥಿಮಜ್ಜೆ ಕಸಿ ನಡೆಸಲಾಗಿದೆ. ಇದು ಮಗುವಿನ ಚೇತರಿಕೆಗೆ ನೆರವಾಗಿದೆ.

'2022ರ ಡಿಸೆಂಬರ್‌ನಲ್ಲಿ ಈ ಕ್ಯಾನ್ಸರ್ ಬಾಲಕನಲ್ಲಿ ಪತ್ತೆಯಾಗಿತ್ತು. ಕಿಮೋಥೆರಪಿ ಚಿಕಿತ್ಸೆ ನೀಡಿ ಎಡ ಮೂತ್ರಪಿಂಡಕ್ಕೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ನಂತರ ರೇಡಿಯೇಷನ್ ಚಿಕಿತ್ಸೆ ಒದಗಿಸಲಾಗಿತ್ತು. ದುರದೃಷ್ಟವಶಾತ್ 2025ರ ಏಪ್ರಿಲ್‌ನಲ್ಲಿ ರೋಗ ಮರುಕಳಿಸಿತು. ಬಾಲಕ ಬದುಕುಳಿಯುವುದು ಕಷ್ಟಸಾಧ್ಯವಾಗಿತ್ತು. ಆ ಸಂದರ್ಭದಲ್ಲಿ ಕಿಮೋಥೆರಪಿ ಮತ್ತು ಅಸ್ಥಿಮಜ್ಜೆ ಕಸಿಯ ಆಯ್ಕೆ ನಮ್ಮ ಮುಂದಿದ್ದವು. ಅದರಂತೆ ಅಸ್ಥಿಮಜ್ಜೆ ಕಸಿ ನಡೆಸಲಾಯಿತು' ಎಂದು ಸಂಸ್ಥೆಯ ವೈದ್ಯರು ತಿಳಿಸಿದ್ದಾರೆ.

ಸಂಸ್ಥೆಯ ಅಸ್ಥಿಮಜ್ಜೆ ಕಸಿ ಘಟಕದ ಸಹ ಪ್ರಾಧ್ಯಾಪಕಿ ಡಾ. ವಸುಂಧರಾ ಕೈಲಾಸನಾಥ್, 'ಚಿಕ್ಕ ವಯಸ್ಸಿನಲ್ಲಿಯೇ ಕಿಮೋಥೆರಪಿ ಚಿಕಿತ್ಸೆ, ಹೆಚ್ಚಿನ ಪ್ರಮಾಣದ ಬಿಎಂಟಿ ಔಷಧಗಳ ಅಗತ್ಯತೆ ಮತ್ತು ಕಾಯಿಲೆಯ ತೀವ್ರತೆಯು ಬಾಲಕನ ಜೀವಕ್ಕೆ ಅಪಾಯಕಾರಿಯಾಗಿತ್ತು. ಈ ಪ್ರಕರಣದ ನಿರ್ವಹಣೆ ಸವಾಲಿನಿಂದ ಕೂಡಿತ್ತು' ಎಂದು ಹೇಳಿದ್ದಾರೆ.

ಸಂಸ್ಥೆಯ ನಿರ್ದೇಶಕ ಡಾ. ನವೀನ್ ಟಿ., 'ಮೂರು ವರ್ಷಗಳ ಅವಧಿಯಲ್ಲಿ 130 ಅಸ್ಥಿಮಜ್ಜೆ ಕಸಿ ಚಿಕಿತ್ಸೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ' ಎಂದು ತಿಳಿಸಿದ್ದಾರೆ.

ಬಾಲಕನಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಿದ ವೈದ್ಯರ ತಂಡವನ್ನು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಆರ್. ಪಾಟೀಲ ಅಭಿನಂದಿಸಿದರು.



ಅಸ್ಥಿಮಜ್ಜೆ ಕಸಿಗೆ ಒಳಗಾದ ಬಾಲಕನನ್ನು ಶರಣಪ್ರಕಾಶ್ ಆರ್. ಪಾಟೀಲ ಅಭಿನಂದಿಸಿದರು. ಡಾ. ವಸುಂಧರಾ ಕೈಲಾಸನಾಥ್ ಉಪಸ್ಥಿತರಿದ್ದರು

ಕಬ್ಬನ್ ಪಾರ್ಕ್ ಹೂಗಳ ಹಬ್ಬಕ್ಕೆ ತೆರೆ

11 ದಿನಗಳ ಪುಷ್ಪ ಪ್ರದರ್ಶನಕ್ಕೆ ಮೆರುಗು ನೀಡಿದ ಸಾಂಸ್ಕೃತಿಕ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆಯ ಅಂಗವಾಗಿ ತೋಟಗಾರಿಕೆ ಇಲಾಖೆ ಮೊದಲ ಬಾರಿಗೆ ಕಬ್ಬನ್ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಹೂಗಳ ಹಬ್ಬಕ್ಕೆ ಭಾನುವಾರ ತೆರೆಬಿದ್ದಿದೆ. ಕೊನೇ ದಿನ ಹೂಗಳನ್ನು ಕಣ್ತುಂಬಿಕೊಳ್ಳಲು 1.25 ಲಕ್ಷಕ್ಕೂ ಅಧಿಕ ಜನರು ಭಾಗವಹಿಸಿದ್ದರು.

ಹೂಗಳ ಹಬ್ಬವು ಕಬ್ಬನ್ ಉದ್ಯಾನದಲ್ಲಿ ಕಲರವ ಸೃಷ್ಟಿಯಾಗಿತ್ತು. ಸಾಂಸ್ಕೃತಿಕ ಕಲೆಗಳು, ಶಾಸ್ತ್ರೀಯ ನೃತ್ಯ ಪ್ರದರ್ಶನ, ಶಾಸ್ತ್ರೀಯ ಸಂಗೀತ ಕಛೇರಿಗಳು, ಜಾನಪದ ಹಾಡು, ನೃತ್ಯ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು 11 ದಿನಗಳ ಪುಷ್ಪ ಪ್ರದರ್ಶನಕ್ಕೆ ಮೆರುಗು ನೀಡಿದ್ದವು.

ಹೂಗಳ ಹಬ್ಬದ ಸಮಾರೋಪ ಸಮಾರಂಭವನ್ನು ಶನಿವಾರವೇ ಮಾಡಲಾಗಿತ್ತು. ಭಾನುವಾರ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ರಜಾ ದಿನ ಆಗಿರುವುದರಿಂದ ಬೆಳಿಗ್ಗೆಯೇ ಮಕ್ಕಳು, ಹಿರಿಯರು ಎನ್ನದೇ ಜನರು ತಂಡ ತಂಡವಾಗಿ ಬರತೊಡಗಿದರು. ಸಂಜೆಯ ಹೊತ್ತಿಗೆ ಕಾಲು ಇಡಲೂ ಜಾಗ ಇಲ್ಲದಂತಾಗಿತ್ತು.

ಅಂಕಿ ಅಂಶ

1.25 ಲಕ್ಷ — ಭಾನುವಾರ ಭೇಟಿ ನೀಡಿದವರು

₹12.50 ಲಕ್ಷ — ಭಾನುವಾರ ಸಂಗ್ರಹವಾದ ಟಿಕೆಟ್ ಶುಲ್ಕ

6.30 ಲಕ್ಷ — 11 ದಿನಗಳಲ್ಲಿ ಹೂಗಳ ಹಬ್ಬಕ್ಕೆ ಬಂದವರು

₹61 ಲಕ್ಷ — ಒಟ್ಟು ಸಂಗ್ರಹವಾದ ಟಿಕೆಟ್ ಶುಲ್ಕ

ಹೂವುಗಳಲ್ಲಿ ಅರಳಿದ ಹಂಪಿಯ ಕಲ್ಲಿನ ರಥ, ಹೂವು, ಹಾಗಲಕಾಯಿ ಹಾಗೂ ಕ್ಯಾಪ್ಸಿಕಮ್‌ನಲ್ಲಿ ರಚಿಸಿದ ಆನೆಯ ಕಲಾಕೃತಿಗಳು, ಹಳದಿ ಮತ್ತು ಕೆಂಪು ಬಣ್ಣದ ಹೂವುಗಳಲ್ಲಿ ಮೂಡಿಬಂದಿರುವ ಕರ್ನಾಟಕದ ನಕ್ಷೆಯ ಮಾದರಿ, ಅಲ್ಲಲ್ಲಿ ಜೋಡಿಸಿ ಇಟ್ಟಿರುವ ಹೂವಿನ ಕುಂಡಗಳನ್ನು ನೋಡಿ ಮಕ್ಕಳು, ಹಿರಿಯರು ಸಂಭ್ರಮಿಸಿದರು.

ಹೂವುಗಳಲ್ಲೇ ಮೂಡಿದ ಜಿಂಕೆ, ಅನಾನಸ್, ಸೇಬು ಹಣ್ಣು, ಸೂರ್ಯಕಾಂತಿ ಹೂವಿನ ದೊಡ್ಡ ಮಾದರಿಗಳ ಮುಂದೆ ನಿಂತು ಫೋಟೊ ತೆಗೆಸಿಕೊಂಡು, ಸೆಲ್ಫಿ ತೆಗೆದುಕೊಂಡು ಖುಷಿಪಟ್ಟರು. ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿರುವ ಕಾರಂಜಿಯಲ್ಲಿ ಹೂವಿನ ಡಾಲ್ಫಿನ್, ಟ್ರ್ಯಾಕ್ಟರ್, ಕೋಳಿಗಳ ಮುಂದೆಯೂ ಫೋಟೊ ಕ್ಲಿಕ್ಕಿಸಿಕೊಂಡರು.

‘ಭಾನುವಾರ ಕೊನೆಯ ದಿನವಾಗಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸುವ ನಿರೀಕ್ಷೆ ಇತ್ತು. ಅದಕ್ಕಾಗಿ ಹೆಚ್ಚುವರಿಯಾಗಿ ಸಂಚಾರಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೆವು. ಟಿಕೆಟ್ ಕೌಂಟರ್‌ಗಳ ಸಂಖ್ಯೆಯನ್ನು ಕೂಡ ಹೆಚ್ಚಿಸಿದ್ದೆವು. ಜನರು ಬರುತ್ತಲೇ ಇದ್ದರು. ಆದರೂ ಟಿಕೆಟ್ ಕೌಂಟರ್‌ಗಳನ್ನು ಸಂಜೆ 6ಕ್ಕೆ ಮುಚ್ಚಬೇಕಾಯಿತು. ಆನಂತರ ಒಳಗಿದ್ದವರು ಹೊರಗೆ ಹೋಗಲು ಸುಮಾರು ಒಂದು ಗಂಟೆ ತೆಗೆದುಕೊಂಡರು’ ಎಂದು ತೋಟಗಾರಿಕೆ ಇಲಾಖೆಯ ಕುಸುಮಾ ಅವರು ಮಾಹಿತಿ ನೀಡಿದರು.



ತೋಟಗಾರಿಕೆ ಇಲಾಖೆಯಿಂದ ನಗರದ ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನದಲ್ಲಿ ಏರ್ಪಡಿಸಿದ್ದ ‘ಹೂಗಳ ಹಬ್ಬ’ವನ್ನು ಭಾನುವಾರ ಭಾರಿ ಸಂಖ್ಯೆಯಲ್ಲಿ ಜನರು ವೀಕ್ಷಿಸಿದರು ಚಿತ್ರ: ಎಂ.ಎಸ್.ಮಂಜುನಾಥ್

ಬೆಟ್ಟಿಂಗ್: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಗ್ರೌಂಡ್ಸ್ ಸಂಚಾರ ಪೊಲೀಸ್ ಠಾಣೆಯ ಹಳೆಯ ಕಟ್ಟಡದ ಪಕ್ಕದಲ್ಲಿರುವ ರೇಸ್‌ಕೋರ್ಸ್ ಪಾರ್ಕಿಂಗ್ ಶೆಡ್‌ನಲ್ಲಿನ ಬೆಟ್ಟಿಂಗ್ ಅಡ್ಡೆ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ವಿಜಯನಗರ ನಿವಾಸಿ ಯೋಗೇಶ್, ಕಮಲ್ ನಗರದ ಮಂಜುನಾಥ್ ಮತ್ತು ವಸಂತ್ ಎಂಬುವರನ್ನು ಬಂಧಿಸಿ, ₹2 ಲಕ್ಷ ನಗದು ಹಾಗೂ ಮೂರು ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ.

‘ನವೆಂಬರ್ 29ರಂದು ಆರೋಪಿಗಳು ಸಾರ್ವಜನಿಕರಿಂದ ಹಣ ಕಟ್ಟಿಸಿಕೊಂಡು ಬೆಟ್ಟಿಂಗ್ ಆಡಿಸುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದಾಗ ಜೂಜಾಟದಲ್ಲಿ ತೊಡಗಿದ್ದ ಆರೋಪಿಗಳನ್ನು ಬಂಧಿಸಿ, ನಗದು, ಮೊಬೈಲ್, ರೇಸ್ ಪುಸ್ತಕಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆರೋಪಿಗಳು ಪರವಾನಗಿ ಇಲ್ಲದೆ ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಟರ್ಫ್ ಕ್ಲಬ್ ಅವರ ಗಮನಕ್ಕೆ ಬಾರದಂತೆ ಬೆಟ್ಟಿಂಗ್ ನಡೆಸುತ್ತಿದ್ದರು. ಆರೋಪಿಗಳ ಪೈಕಿ ಮಂಜುನಾಥ್ ಅವರ ಬ್ಯಾಂಕ್ ಖಾತೆಯಲ್ಲಿರುವ ಹಣವನ್ನು ಫ್ರೀಜ್ ಮಾಡಲು ಕೋರಲಾಗಿದೆ’ ಎಂದು ಹೇಳಿದ್ದಾರೆ.

ಪತ್ರಿಕಾ ವಿತರಕರ ಸಂಘ ಉದ್ಘಾಟನೆ



ಬಸವೇಶ್ವರನಗರ ದಿನಪತ್ರಿಕೆ ವಿತರಕರ ಸಂಘವನ್ನು ಉದ್ಘಾಟಿಸಿ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ಬಿಜೆಪಿ ಜಿಲ್ಲಾಧ್ಯಕ್ಷ ಎಸ್. ಹರೀಶ್, ಮಹಾಲಕ್ಷ್ಮಿಪುರ ವಿಧಾನಸಭಾ ಕ್ಷೇತ್ರ ಬಿಜೆಪಿ ಅಧ್ಯಕ್ಷ ರಾಘವೇಂದ್ರ ಶೆಟ್ಟಿ, ಶಕ್ತಿ ಗಣಪತಿ ನಗರ ವಾರ್ಡ್ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗೋವಿಂದಯ್ಯ, ಐಎಫ್‌ಡಬ್ಲ್ಯುಜೆ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ, ಬಸವೇಶ್ವರನಗರ ದಿನಪತ್ರಿಕೆ ವಿತರಕರ ಸಂಘದ ಅಧ್ಯಕ್ಷ ಎನ್. ಮಂಜುನಾಥ್ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು

ವಿದ್ಯಾರ್ಥಿ ಕಪಾಳಕ್ಕೆ ಹೊಡೆದ ಶಿಕ್ಷಕನ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ಶಾಲೆಯೊಂದರ ವಿದ್ಯಾರ್ಥಿಯ ಕಪಾಳಕ್ಕೆ ಶಿಕ್ಷಕ ಹೊಡೆದಿರುವ ಘಟನೆ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ವಿದ್ಯಾರ್ಥಿಯ ತಂದೆ ನೀಡಿದ ದೂರಿನ ಮೇಲೆ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರನ್ನು ಬಂಧಿಸಲಾಗಿದೆ. ‘ಠಾಣಾ ವ್ಯಾಪ್ತಿಯ ಶಾಲೆಯಲ್ಲಿ ಏಳನೇ ತರಗತಿ ಓದುತ್ತಿರುವ ನನ್ನ ಮಗನ ಕಪಾಳಕ್ಕೆ ಶಿಕ್ಷಕ ಬಾರಿಸಿದ್ದರಿಂದ ಕೆನ್ನೆ ಊದಿಕೊಂಡಿದೆ. ಹಾಗಾಗಿ ಸಂಜೆ 5.30ರವರೆಗೂ ಅಲ್ಲಿಯೇ ಇರಿಸಿಕೊಂಡು ನಂತರ ಕಳುಹಿಸಿದರು. ಮನೆಗೆ ಬಂದ ಬಳಿಕ ಮಗನನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದೇನೆ’ ಎಂದು ವಿದ್ಯಾರ್ಥಿ ತಂದೆ ದೂರಿನಲ್ಲಿ ತಿಳಿಸಿದ್ದಾರೆ.

‘ಸಣ್ಣ ತಪ್ಪು ಮಾಡಿದ ಮಗನ ಮೇಲೆ ಹಲ್ಲೆ ಮಾಡಿದ ಶಿಕ್ಷಕನ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಕೋರಿದ್ದಾರೆ.

‘ಊಟದ ವೇಳೆ ವಿದ್ಯಾರ್ಥಿ ತನ್ನ ಸಹಪಾಠಿಯ ಕುರ್ಚಿಯನ್ನು ಎಳೆದಿದ್ದ. ತರಗತಿಯಲ್ಲೂ ಇದೇ ರೀತಿ ಕುರ್ಚಿ ಎಳೆದ ಪರಿಣಾಮ ವಿದ್ಯಾರ್ಥಿಯೊಬ್ಬ ಕೆಳಗೆ ಬಿದ್ದಿದ್ದ. ಕೆಳಗೆ ಬಿದ್ದ ವಿದ್ಯಾರ್ಥಿ ಶಿಕ್ಷಕರಿಗೆ ದೂರು ನೀಡಿದ್ದ. ಹಾಗಾಗಿ ತಪ್ಪು ಮಾಡಿದ ವಿದ್ಯಾರ್ಥಿಯನ್ನು ಸಿಬ್ಬಂದಿ ಕೊಠಡಿಗೆ ಕರೆದು, ಶಿಕ್ಷಕರ ಎದುರೇ ಕಪಾಳಕ್ಕೆ ಹೊಡೆದಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಎಂಟಿಸಿ ಚಾಲಕನ ಮೇಲೆ ಹಲ್ಲೆ: ಬೈಕ್ ಸವಾರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಲ್ದಾಣದಲ್ಲಿ ಬಸ್ ನಿಲ್ಲಿಸದ ಕಾರಣಕ್ಕೆ ಬಿಎಂಟಿಸಿ ಚಾಲಕನ ಮೇಲೆ ದ್ವಿಚಕ್ರ ವಾಹನ ಸವಾರ ಹಲ್ಲೆ ನಡೆಸಿರುವ ಘಟನೆ ಸಂಪಿಗೆಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬಿಎಂಟಿಸಿ ಚಾಲಕ ಸಂತೋಷ್ ಹಲ್ಲೆಗೆ ಒಳಗಾದವರು. ಸಂತೋಷ್ ಅವರ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಹೆಗಡೆ ನಗರ ಸಮೀಪದ ನೂರ್ ನಗರದ ನಿವಾಸಿ ಅಪ್ಸಲ್ ಎಂಬುವವರನ್ನು ಬಂಧಿಸಿದ್ದಾರೆ.

ಡಿಪೋ ನಂಬರ್ 11ರಲ್ಲಿ ಕಾರ್ಯ ನಿರ್ವಹಿಸುವ ಚಾಲಕ ಕಂ ನಿರ್ವಾಹಕ ಸಂತೋಷ್ ಶುಕ್ರವಾರ ರಾತ್ರಿ 8.30ರ ವೇಳೆ ಹೆಗಡೆ ನಗರ ಮಾರ್ಗವಾಗಿ ಬಸ್ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ಆದರೆ ಸಮೀಪದ ನಿಲ್ದಾಣದಲ್ಲಿ ಬಸ್ ನಿಲುಗಡೆ ಮಾಡದೆ ಮುಂದೆ ಹೋಗಿ ನಿಲ್ಲಿಸಿದ್ದಾರೆ. ಭಾರತಿ ಸಿಟಿ ಸಿಗ್ನಲ್ ಬಳಿ ಬಸ್ ಅನ್ನು ಅಡ್ಡಗಟ್ಟಿದ ಆರೋಪಿ, ಬಸ್ ನಿಲ್ದಾಣದಲ್ಲಿ ಏಕೆ ನಿಲ್ಲಿಸಲಿಲ್ಲ ಎಂದು ಜಗಳವಾಡಿದ್ದು, ಇಬ್ಬರ ಮಧ್ಯೆ ಮಾತಿನ ಚಕಮಕಿ ನಡೆದಿದೆ.

ಈ ವೇಳೆ ಆಕ್ರೋಶಗೊಂಡ ಅಪ್ಸಲ್, ಕರ್ತವ್ಯನಿರತ ಚಾಲಕನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದಾರೆ. ಚಾಲಕ ಬಸ್ ಸಮೇತ ಠಾಣೆಗೆ ತೆರಳಿ ದೂರು ನೀಡಿದ್ದರು.

‘ಆರೋಪಿ ತಾನು ಮದುವೆಯಾಗುವ ಹುಡುಗಿಯನ್ನು ಬಸ್ ಹತ್ತಿಸಲು ಬೈಕ್‌ನಲ್ಲಿ ಕರೆದುಕೊಂಡು ಬಂದಿದ್ದ, ಆದರೆ, ಚಾಲಕ ಬಸ್ ನಿಲ್ಲಿಸದ ಕಾರಣ ಆಕ್ರೋಶಗೊಂಡು ಹಲ್ಲೆ ನಡೆಸಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಚಟಿಕೆ ಸುದ್ದಿ

ಅದಿತಿ ಭರತನಾಟ್ಯ ರಂಗ ಪ್ರವೇಶ

ಬೆಂಗಳೂರು: ಮಲ್ಲೇಶ್ವರಂನ ಸೇವಾ ಸದನ ಆಡಿಟೋರಿಯಂನಲ್ಲಿ ಸೋಮವಾರ (ಡಿ.8) ಸಂಜೆ 5.30ಕ್ಕೆ ಜಿ.ಸಿ.ಅದಿತಿ ಅವರ ರಂಗಪ್ರವೇಶ ಕಾರ್ಯಕ್ರಮ ನಡೆಯಲಿದೆ.



ಅದಿತಿ

ಹಿಮ್ಮೇಳದಲ್ಲಿ ಹಾಡುಗಾರಿಕೆ ಡಿ.ಎಸ್. ಶ್ರೀವತ್ಸ, ಮೃದಂಗ ಜಿ.ಎಸ್.ನಾಗರಾಜ್, ವೀಣೆ ಗೋಪಾಲ್ ಹಾಗೂ ಕೊಳಲು ವೆಂಕಟರಮಣ, ಶುಭಾ ಬಾಲಸುಬ್ರಹ್ಮಣ್ಯ ನಟವಾಂಗದಲ್ಲಿ ಸಹಕರಿಸಲಿದ್ದಾರೆ.

ಚಿಂತಕಿ ಡಾ.ವಿ.ಬಿ.ಆರತಿ ಹಾಗೂ ಭರತನಾಟ್ಯ ಕಲಾವಿದ ಪಿ.ಪ್ರವೀಣ್ ಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ನಗರದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವ ವಿದ್ಯಾಲಯವು (ಯುವಿಸಿಇ) 2025-26ನೇ ಸಾಲಿಗೆ ದೈಹಿಕ ಮತ್ತು ಯೋಗ ಶಿಕ್ಷಕ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಎಐಸಿಟಿಇ/ಯುಜಿಸಿ ನಿಯಮಾನುಸಾರ ಎಂಪಿಇಡಿ /ಪಿಎಚ್.ಡಿ ಮತ್ತು ಯೋಗ ಶಿಕ್ಷಣದಲ್ಲಿ ಸರ್ಟಿಫಿಕೇಟ್ ಕೋರ್ಸ್ ಮುಗಿಸಿರುವ ಅಭ್ಯರ್ಥಿಗಳು www.uvce.karnataka.gov.in ನಿಂದ ಅರ್ಜಿ ಡೌನ್‌ಲೋಡ್ ಮಾಡಿಕೊಂಡು ಸೂಕ್ತ ದಾಖಲೆಗಳೊಂದಿಗೆ ಡಿ.10ರೊಳಗೆ ಕುಲಸಚಿವರು, ಯುವಿಸಿಇ, ಕೆ. ಆರ್. ಸರ್ಕಲ್, ಬೆಂಗಳೂರು, ಇಲ್ಲಿಗೆ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಷ ಕುಡಿದು ದಂಪತಿ ಆತ್ಮಹತ್ಯೆ

ಶ್ರೀನಿವಾಸಪುರ: ತಾಲ್ಲೂಕಿನ ರಾಯಲ್ಪಾಡು ಬಳಿ ಉಪ್ಪಾರಪಲ್ಲಿ ಹೊರವಲಯದ ಕೋಳಿಫಾರಂನಲ್ಲಿ ಏಳು ದಿನಗಳ ಹೆಣ್ಣು ಕೂಸು ಪಕ್ಕದಲ್ಲಿ ಮಲಗಿರುವಾಗಲೇ ದಂಪತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.

ಅಸ್ಸಾಂ ಮೂಲದ ಮಹಬೂಬ್ ರೆಹಮಾನ್ (30) ಹಾಗೂ ಫರೀದಾ ಖುರಮ್ (20) ಆತ್ಮಹತ್ಯೆ ಮಾಡಿಕೊಂಡವರು. ಇವರು 15 ದಿನಗಳ ಹಿಂದೆಯಷ್ಟೇ ಕೋಳಿಫಾರಂಗೆ ಕೂಲಿಗೆಂದು ಬಂದಿದ್ದರು. ಕೋಳಿಫಾರಂ ಆವರಣದಲ್ಲಿ ಇರುವ ಮನೆ ಬಾಗಿಲಿನ ಚಿಲುಕವನ್ನು ಒಳಗಡೆಯಿಂದ ಹಾಕಿಕೊಂಡು ಈ ಕೃತ್ಯ ಎಸಗಿಕೊಂಡಿದ್ದಾರೆ.

ಏಳು ದಿನಗಳ ಮಗುವನ್ನು ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ. ಹಸುಗೂಸು ಆರೋಗ್ಯ ವಾಗಿರುವ ಬಗ್ಗೆ ವೈದ್ಯರು ಮಾಹಿತಿ ನೀಡಿದ್ದಾರೆ. ಪೊಲೀಸರು ಮೃತರ ಕುಟುಂಬಕ್ಕೆ ಮಾಹಿತಿ ನೀಡಿದ್ದಾರೆ.





ಬೆಂಗಳೂರು ಸಾಹಿತ್ಯ ಉತ್ಸವಕ್ಕೆ ಬಂದವರು ಪುಸ್ತಕ ಮಳಿಗೆಗಳಲ್ಲಿ ವಿಹರಿಸಿದರು (ಎಡ) ಉತ್ಸವದಲ್ಲಿ ಪರಸ್ಪರ ವಿಚಾರ ವಿನಿಮಯದಲ್ಲಿ ನಿರತರಾದ ಸಾಹಿತ್ಯಪ್ರಿಯರು ಚಿತ್ರಗಳು: ಪ್ರಶಾಂತ್ ಎಚ್‌.ಜಿ.

ಬಹುಭಾಷಿಕ ಜಗತ್ತು ಅನಾವರಣ

ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಬೆಂಗಳೂರು ಸಾಹಿತ್ಯ ಉತ್ಸವ ಸಂಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾರಾಂತ್ಯದಲ್ಲಿ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಸ್ವಾತಂತ್ರ್ಯ ಉದ್ಯಾನಕ್ಕೆ ಬಂದಿದ್ದ ಸಾಹಿತ್ಯ ಪ್ರೇಮಿಗಳಿಗೆ 'ಬೆಂಗಳೂರು ಸಾಹಿತ್ಯ ಉತ್ಸವ'ವು ಬಹುಭಾಷಿಕ ಜಗತ್ತನ್ನು ಪರಿಚಯಿಸುವ ಪ್ರಯತ್ನ ಮಾಡಿತು.

ಪ್ರಸ್ತುತ ವಿದ್ಯಮಾನಗಳು, ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕಲೆ, ಸಂಗೀತ, ಸಿನಿಮಾ, ಆಹಾರ, ಆರ್ಥಿಕತೆ, ನವೋದ್ಯಮ... ಹೀಗೆ ವೈವಿಧ್ಯಮಯ ವಿಷಯಗಳ ಬಗ್ಗೆ ಒಳನೋಟಗಳಿಂದ ಕೂಡಿದ ಚರ್ಚೆ–ಸಂವಾದಗಳಿಗೆ ವೇದಿಕೆಯಾದ ಉತ್ಸವದ 14ನೇ ಆವೃತ್ತಿ, ಭಾನುವಾರ ಸಂಪನ್ನವಾಯಿತು.

ಎರಡನೇ ದಿನವೂ ಉತ್ಸಾಹದಿಂದ ಪಾಲ್ಗೊಂಡಿದ್ದ ಸಾಹಿತ್ಯ ಪ್ರೇಮಿಗಳು ಗೋಷ್ಠಿಗಳ ಮಾಹಿತಿ ಒಳಗೊಂಡ ಕರಪತ್ರ ಹಿಡಿದು, ವೇದಿಕೆಗಳನ್ನು ಬದಲಿಸುತ್ತಾ ಚರ್ಚೆಗಳಿಗೆ ಕಿವಿಯಾದರು.

ಇಂಡಿಗೊ ಏರ್‌ಲೈನ್ಸ್‌ಗೆ ಸೇರಿದ ವಿಮಾನಗಳ ಹಾರಾಟದಲ್ಲಿನ ವ್ಯತ್ಯಯದಿಂದಾಗಿ ಭಾನುವಾರವೂ ವಿಷಯ ತಜ್ಞರಲ್ಲಿ ಕೆಲವರು ಗೈರಾಗಿದ್ದರು. ಪೂರ್ವನಿಗದಿಯಾಗಿದ್ದ ಗೋಷ್ಠಿಗಳ ಬದಲು ಬೇರೆ ಗೋಷ್ಠಿಗಳು ನಡೆದವು. ಗೋಷ್ಠಿಗಳಲ್ಲಿ ವಿಷಯ ಮಂಡಿಸಿದ ಬರಹಗಾರರು ಪ್ರೇಕ್ಷಕರೊಂದಿಗೆ ಸಂವಾದ ನಡೆಸುವ ಜತೆಗೆ, ಅವರ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡುವ ಪ್ರಯತ್ನ ಮಾಡಿದರು.

ಉತ್ಸವದ ಎರಡನೇ ದಿನವೂ ವಿಚಾರಸಂಕಿರಣಗಳು ಮತ್ತು ಸಂವಾದಗಳು ಬೆಳಿಗ್ಗೆ 9ರಿಂದ ಸಂಜೆ 7.30ರವರೆಗೆ ನಡೆದವು. ಮಧ್ಯಾಹ್ನ ಆಗುತ್ತಿದ್ದಂತೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರಿಂದ ಕೆಲವರು ನಿಂತೇ ಗೋಷ್ಠಿಗಳನ್ನು ಆಲಿಸಿದರು. ಲೇಖಕರ ಹಸ್ತಾಕ್ಷರಕ್ಕೆ ಪ್ರತ್ಯೇಕ ವೇದಿಕೆ ನಿರ್ಮಿಸಿದ್ದರಿಂದ ಪುಸ್ತಕಗಳನ್ನು ಖರೀದಿಸಿದವರು ಸರದಿಯಲ್ಲಿ ಹಸ್ತಾಕ್ಷರ ಪಡೆದರು.

ಎರಡು ದಿನಗಳಿಂದ 108 ಗೋಷ್ಠಿಗಳು ನಡೆದವು. ನಾಡಿನ ಜತಗೆ ಹೊರ ರಾಜ್ಯ, ಹೊರದೇಶದ ಬರಹಗಾರರೂ ತಮ್ಮ ವಿಚಾರಧಾರೆಗಳನ್ನು ಹಂಚಿಕೊಂಡರು. ಪುಸ್ತಕ ಮಳಿಗೆಗಳು, ಆಹಾರ ಮಳಿಗೆಗಳು, ಮಕ್ಕಳಿಗಾಗಿ ರೂಪಿಸಲಾಗಿದ್ದ ಪ್ರತ್ಯೇಕ ವೇದಿಕೆಗಳು ಉತ್ಸವದ ಮೆರಗು ಹೆಚ್ಚಿಸಿದವು.

'ಅಳಿವಿನಂಚಿಗೆ ಸಣ್ಣ ಭಾಷೆಗಳು'

'ಭಾಷೆಯ ಬಗೆಗಿನ ಕೀಳರಿಮೆ, ಭಯದಿಂದಾಗಿ ನಾಡಿನಲ್ಲಿರುವ ಸಣ್ಣ ಸಣ್ಣ ಸಮುದಾಯಗಳು ತಮ್ಮ ಮಾತೃಭಾಷೆಯಿಂದ ದೂರವಾಗುತ್ತಿವೆ. ಆ ಭಾಷೆಗಳ ಉಳಿವಿಗೆ ಸರ್ಕಾರವು ಸೂಕ್ತ ಪ್ರೋತ್ಸಾಹ ನೀಡುವ ಜತೆಗೆ, ನಿಗದಿತ ಭಾಷೆಯನ್ನು ಮಾತನಾಡುವ ಜನರ ಬಗ್ಗೆ ತಿಳಿಯಲು ಭಾಷಾ ಸಮೀಕ್ಷೆ ನಡೆಸಬೇಕು' ಎಂಬ ಅಭಿಪ್ರಾಯ 'ಕೊರಚ ಮತ್ತು ಸಿದ್ದಿ ಭಾಷೆಗಳು' ಗೋಷ್ಠಿಯಲ್ಲಿ ವ್ಯಕ್ತವಾಯಿತು.

ಈ ಗೋಷ್ಠಿಯನ್ನು ಶಿಕ್ಷಣ ತಜ್ಞ ನಿರಂಜನಾರಾಧ್ಯ ವಿ.ಪಿ. ನಿರ್ವಹಿಸಿದರು. ಕೊರಚ ಸಮುದಾಯದವರೂ ಆದ ನಾಟಕಕಾರ ಎಚ್.ಆರ್. ಸ್ವಾಮಿ ಹಾಗೂ ಸಿದ್ದಿ ಜನಾಂಗದ ಲಕ್ಷ್ಮಿ ಆರ್. ಸಿದ್ದಿ ಅಭಿಪ್ರಾಯ ವ್ಯಕ್ತಪಡಿಸಿದರು.

'ಕನ್ನಡ ಭಾಷೆಯನ್ನು ಇಂಗ್ಲಿಷ್ ಮತ್ತು ಹಿಂದಿ ಭಾಷೆ ನುಂಗಿ ಹಾಕಿದರೆ, ನಮ್ಮ ಕೊರಚ ಭಾಷೆಯನ್ನು ಕನ್ನಡ ನುಂಗಿದೆ. ಅಪರಾಧಿಗಳಲ್ಲದಿದ್ದರೂ ನಮ್ಮ ಭಾಷಿಕರಿಗೆ ಅಪರಾಧಿಗಳ ಪಟ್ಟ ಕಟ್ಟಲಾಗಿದೆ. ಕೊರಚ ಭಾಷೆಯಲ್ಲಿ ಮಾತನಾಡಿದರೂ ಅನುಮಾನದಿಂದ ನೋಡುವ ಸಂದರ್ಭ ಸೃಷ್ಟಿಯಾಗಿದೆ. ಸಮುದಾಯದ ಧ್ವನಿ ಅಡಗಿಸುವ ಪ್ರಯತ್ನ ನಡೆಯುತ್ತಿದೆ' ಎಂದು ಎಚ್.ಆರ್. ಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಲಕ್ಷ್ಮಿ ಆರ್. ಸಿದ್ದಿ, 'ಸಿದ್ದಿ ಜನಾಂಗದವರು ಆಫ್ರಿಕಾದವರು ಎಂಬ ಇತಿಹಾಸವಿದೆ. ಆದರೆ, ನಮಗೆ ಅಲ್ಲಿನ ಭಾಷೆ ಮತ್ತು ಸಂಸ್ಕೃತಿಯ ಅರಿವಿಲ್ಲ. ಕೊಂಕಣಿ ಮತ್ತು ಮರಾಠಿ ಮಿಶ್ರಿತ ಭಾಷೆಯನ್ನು ನಾವು ಮಾತನಾಡುತ್ತೇವೆ. ನಮ್ಮ ಸಮುದಾಯದವರೂ ಈಗ ಪದವೀಧರರಾಗುತ್ತಿದ್ದು, ಇಂಗ್ಲಿಷ್ ಮತ್ತು ಹಿಂದಿಯನ್ನು ಮಾತನಾಡುತ್ತಿದ್ದಾರೆ. ಶಾಲೆಗಳಲ್ಲಿ ತೃತೀಯ ಭಾಷೆಯಾಗಿಯಾದರೂ ನಮ್ಮ ಭಾಷೆಯ ಕಲಿಕೆಗೆ ಅವಕಾಶ ನೀಡಿದರೆ ಸಮುದಾಯದ ಮತ್ತಷ್ಟು ಮಂದಿ ಶಿಕ್ಷಿತರಾಗುತ್ತಿದ್ದರು' ಎಂದರು.


ಸುದ್ದಿ 2 ನಿಮಿಷ

'ಶಾಲೆ ವಿಲೀನ ಕುರಿತು ಚರ್ಚೆ'

ಬೆಂಗಳೂರು: 'ಕರ್ನಾಟಕದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಬದಲು ಒಂದೂವರೆ ಕಿ.ಮೀ. ವ್ಯಾಪ್ತಿಯೊಳಗೆ ಇರುವ ಎಲ್ಲಾ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವುದು ಸೂಕ್ತ. ಈ ಕುರಿತು ಬೆಳಗಾವಿಯಲ್ಲಿ ಆರಂಭವಾಗಲಿರುವ ಚಳಿಗಾಲದ ಅಧಿವೇಶನದಲ್ಲಿ ಚರ್ಚೆ ನಡೆಸುವೆ' ಎಂದು ಶಾಸಕ ಎಸ್.ಸುರೇಶ್ ಕುಮಾರ್ ಹೇಳಿದ್ದಾರೆ.

'ಹಿಂದೆ ಸರ್ವ ಶಿಕ್ಷಾ ಅಭಿಯಾನ ಯೋಜನೆ ಜಾರಿಗೊಂಡಾಗ ಹೆಚ್ಚಿನ ಸರ್ಕಾರಿ ಶಾಲೆಗಳನ್ನು ಆರಂಭಿಸಲಾಯಿತು. ಖಾಸಗಿ ಶಾಲೆಗಳ ವ್ಯಾಮೋಹದಿಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಮಾಗಡಿ ತಾಲ್ಲೂಕಿನ ಹಳ್ಳಿಯೊಂದಕ್ಕೆ ಹೋಗಿದ್ದಾಗ ಅಲ್ಲಿನ ಕಿರಿಯ ಪ್ರಾಥಮಿಕ ಶಾಲೆಯ ಮೂರು ತರಗತಿಗಳಲ್ಲಿ ತಲಾ ಇಬ್ಬರು. ಎರಡು ತರಗತಿಗಳಲ್ಲಿ ಮಕ್ಕಳೇ ಇಲ್ಲದ್ದನ್ನು ನೋಡಿ ಬಂದಿದ್ದೇನೆ' ಎಂದು ತಿಳಿಸಿದ್ದಾರೆ.

ವೈದ್ಯ ಸಾಧಕರಿಗೆ ಗೌರವ



ಬೆಂಗಳೂರು: ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಆಸ್ಪತ್ರೆ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸುವರ್ಣ ಮಹೋತ್ಸವದಲ್ಲಿ ಸಮರ್ಪಣಾ ಭಾವದಿಂದ ಕಾರ್ಯನಿರ್ವಹಿಸಿದ ವೈದ್ಯ ಸಾಧಕರನ್ನು ಗೌರವಿಸಲಾಯಿತು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ವಾಣಿಜ್ಯೀಕರಣವಿಲ್ಲದೆ ಆರೋಗ್ಯ ಸೇವೆ ನೀಡುತ್ತಿರುವುದು ಶ್ಲಾಘನೀಯ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ಸಂಸ್ಥೆಯು ಸಮಾಜಕ್ಕೆ ಉತ್ತಮ ಕೊಡುಗೆ ನೀಡುತ್ತಿದೆ. ಸಂಶೋಧನೆಗಳ ಮೂಲಕ ಸಾರ್ವಜನಿಕ ಆರೋಗ್ಯ ಬಲವರ್ಧನೆಗೆ ಶ್ರಮಿಸುತ್ತಿದೆ' ಎಂದು ಹೇಳಿದರು.

ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನ ಡೀನ್ ಡಾ. ಜಾರ್ಜ್ ಡಿಸೋಜಾ, ನರವಿಜ್ಞಾನ ವಿಭಾಗದ ಡಾ.ಎ. ಮೋಹನ್, ಜನರಲ್ ಮೆಡಿಸಿನ್ ವಿಭಾಗದ ಡಾ. ಚಂದ್ರಮೌಳಿ ಕೆ.ಎಸ್., ಪ್ಲಾಸ್ಟಿಕ್ ಸರ್ಜರಿ ವಿಭಾಗದ ಡಾ. ವಿಜಯ್ ಜೋಸೆಫ್ ಹಾಗೂ ಕುಟುಂಬ ವೈದ್ಯಕೀಯ ವಿಭಾಗದ ಡಾ.ರವೀಂದ್ರನ್ ಜಿ.ಡಿ. ಅವರನ್ನು ಗೌರವಿಸಲಾಯಿತು.

ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಕೊಡುಗೆ ನೀಡಿದ ಸೇಂಟ್ ಮಾರ್ಥಾಸ್ ಆಸ್ಪತ್ರೆಯ ಅಧ್ಯಕ್ಷೆ ಲಿಸ್ಸಿ ಚಾಕೊ, ಬ್ರಿಗೇಡ್ ಗ್ರೂಪ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಎಂ.ಆರ್.ಜೈಶಂಕರ್ ಹಾಗೂ ಸಾಮಾಜಿಕ ಕಾರ್ಯಕರ್ತ ಕುಲಂಡೈ ಫ್ರಾನ್ಸಿಸ್ ಅವರನ್ನು ಗೌರವಿಸಲಾಯಿತು. ತ್ರಿಶೂರ್‌ನ ಆರ್ಚ್ ಬಿಷಪ್ ಆ್ಯಂಡ್ರೋಸ್ ಟಿ., ಬೆಂಗಳೂರಿನ ಆರ್ಚ್ ಬಿಷಪ್ ಪೀಟರ್ ಮಚಾಡೊ, ರಾಯಪುರ್‌ನ ಆರ್ಚ್ ಬಿಷಪ್ ವಿಕ್ಟರ್ ಹೆನ್ರಿ ಠಾಕೂರ್, ಸೇಂಟ್ ಜಾನ್ಸ್ ನ್ಯಾಷನಲ್ ಅಕಾಡೆಮಿ ಆಫ್ ಹೆಲ್ತ್ ಸೈನ್ಸ್‌ನ ನಿರ್ದೇಶಕ ಜೇಸುದಾಸ್ ರಾಜಮಾಣಿಕಂ ಉಪಸ್ಥಿತರಿದ್ದರು.



ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ಸಮಾರಂಭದಲ್ಲಿ ರಾಜ್ಯದ ಸರ್ಕಾರಿ ಸಂಸ್ಥೆಗಳ ಪೈಕಿ ಹೆಚ್ಚು ಸಶಸ್ತ್ರ ಪಡೆಗಳ ಧ್ವಜ ನಿಧಿ ಸಂಗ್ರಹಣೆ ಮಾಡಿರುವ ಸಂಸ್ಥೆಗೆ ನೀಡುವ ಪ್ರಶಸ್ತಿಗೆ ಕೆಎಸ್‌ಆರ್‌ಟಿಸಿ ಸತತ 11ನೇ ಬಾರಿ ಭಾಜನವಾಗಿದ್ದು, ಕೆಎಸ್‌ಆರ್‌ಟಿಸಿ ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತ) ಕೆ. ನಂದಿನಿದೇವಿಗೆ ಗೃಹ ಸಚಿವ ಜಿ. ಪರಮೇಶ್ವರ ಪ್ರಶಸ್ತಿ ಪ್ರದಾನ ಮಾಡಿದರು. ಹಿರಿಯ ಅಧಿಕಾರಿ ಕೆ.ವಿ. ಶರತ್‌ಚಂದ್ರ ಉಪಸ್ಥಿತರಿದ್ದರು.

ಟ್ಯಾಂಕರ್‌ಗೆ ಡಿಕ್ಕಿ ಹೊತ್ತಿ ಉರಿದ ಕಾರು

ರಾಮನಗರ: ಹಾಲಿನ ಟ್ಯಾಂಕರ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಕಾರೊಂದು ಕೆಲವೇ ಕ್ಷಣಗಳಲ್ಲೇ ಹೊತ್ತಿ ಉರಿದ ಘಟನೆ ತಾಲ್ಲೂಕಿನ ಸಂಗಬಸವನದೊಡ್ಡಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ನಡೆದಿದೆ. ಕಾರಿನಲ್ಲಿದ್ದವರು ಕೂಡಲೇ ಕೆಳಕ್ಕಿಳಿದು ದೂರಕ್ಕೆ ಹೋಗಿ ಅಪಾಯದಿಂದ ಪಾರಾಗಿದ್ದಾರೆ.

ಮೂರ್ನಾಲ್ಕು ಮಂದಿ ಇದ್ದ ಕಾರು ಮೈಸೂರಿನಿಂದ ಬೆಂಗಳೂರು ಕಡೆಗೆ ಹೋಗುತ್ತಿತ್ತು. ಹಾಲಿನ ಟ್ಯಾಂಕರ್‌ಗೆ ಗುದ್ದಿದ ಕೂಡಲೇ ಕಾರಿನಲ್ಲಿ ದಟ್ಟ ಹೊಗೆ ಕಾಣಿಸಿಕೊಳ್ಳತೊಡಗಿತು. ಅಪಾಯ ಅರಿತ ಕಾರಿನಲ್ಲಿದ್ದವರು ತಕ್ಷಣ ಕೆಳಕ್ಕಿಳಿದು ದೂರಕ್ಕೆ ಓಡಿದರು.

ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕಾಡಿದ ಅನಿಶ್ಚಿತತೆ

6ನೇ ದಿನವೂ ಮುಂದುವರಿದ ಬಿಕ್ಕಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಗೊ ವಿಮಾನಯಾನದ ಬಿಕ್ಕಟ್ಟು 6ನೇ ದಿನವೂ ಮುಂದುವರಿಯಿತು. ಹೊಸ ವಿಮಾನ ರದ್ದತಿ, ಪ್ರಯಾಣಿಕರ ಸಂಕಷ್ಟದ ನಡುವೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎ) ಪ್ರಯಾಣಿಕರಿಗೆ ಅನಿಶ್ಚಿತತೆ ಮತ್ತು ಅವ್ಯವಸ್ಥೆ ಕಾಡಿತು.

ಆರು ದಿನಗಳ ಹಿಂದೆ ವಿಮಾನ ಹಾರಾಟ ದಿಢೀರ್ ರದ್ದುಗೊಂಡಾಗ ಉಂಟಾದ ಗೊಂದಲದಿಂದಾಗಿ ವಿಮಾನದಲ್ಲಿ ಸಂಚರಿಸಲು ಟಿಕೆಟ್ ಬುಕ್ ಮಾಡುವವರ ಸಂಖ್ಯೆ ಕಡಿಮೆಯಾಗಿದೆ. ಆದರೂ, ಅನಿವಾರ್ಯವಾಗಿ ಹೋಗಬೇಕಾದವರು ಸಮಸ್ಯೆಗೆ ಸಿಲುಕುತ್ತಿದ್ದಾರೆ.

ದೆಹಲಿ, ಹೈದರಾಬಾದ್, ಕೋಲ್ಕತ್ತ, ಮಂಗಳೂರು, ಭೋಪಾಲ್, ಕೊಚ್ಚಿ, ಶ್ರೀನಗರ ಸೇರಿದಂತೆ ವಿವಿಧೆಡೆ ಹೋಗಬೇಕಿದ್ದ 61 ವಿಮಾನಗಳು ಭಾನುವಾರ ರದ್ದಾಗಿರುವುದನ್ನು ಐದು ತಾಸುಗಳ ಮೊದಲೇ ತಿಳಿಸಿದ್ದರಿಂದ ಪ್ರಯಾಣಿಕರ ದಟ್ಟಣೆ ಕಡಿಮೆಯಾಗಿತ್ತು. ರದ್ದಾಗಿರುವುದರ ಅರಿವು ಇಲ್ಲದೇ ಬಂದ ಪ್ರಯಾಣಿಕರು ವಿಮಾನ ನಿಲ್ದಾಣದಲ್ಲಿ ತೂಕಡಿಸುತ್ತಾ ಕುಳಿತಿರುವುದು, ಕೆಲವರು ಮಲಗಿರುವುದು ಕಂಡು ಬಂತು.

ಮುಖ್ಯಾಂಶಗಳು
- ವಿಮಾನದ ಟಿಕೆಟ್ ಬುಕ್ ಮಾಡುವವರ ಸಂಖ್ಯೆ ಇಳಿಕೆ
- ಬೇರೆ ರಾಜ್ಯಗಳಲ್ಲಿ ಸಿಲುಕಿದ ಪ್ರವಾಸಿಗರು

ಪ್ರವಾಸೋದ್ಯಮಕ್ಕೆ ಹೊಡೆತ: ತಿಂಗಳಿಗೆ 500 ಜನರಾದರೂ ನಮ್ಮ ಏಜೆನ್ಸಿ ಮೂಲಕ ಟಿಕೆಟ್ ಬುಕ್ ಮಾಡಿ ರಾಜ್ಯಕ್ಕೆ ಪ್ರವಾಸ ಬರುತ್ತಿದ್ದರು. ಈ ವಾರ ವಿಮಾನಯಾನ ರದ್ದಾಗಿರುವುದರಿಂದ 150ಕ್ಕೂ ಅಧಿಕ ಪ್ರವಾಸಿಗರು ಬೇರೆ ಬೇರೆ ರಾಜ್ಯಗಳಲ್ಲಿ ಸಿಲುಕಿಕೊಂಡಿದ್ದಾರೆ. ಗ್ರಾಹಕರಿಗೆ ನೀಡುತ್ತಿದ್ದ ಉತ್ತಮ ಸೇವೆಯಿಂದಾಗಿ ನಮಗೆ ಒಳ್ಳೆಯ ಹೆಸರಿತ್ತು. ಇದೀಗ ಕಳಂಕ ತಟ್ಟುವಂತಾಗಿದೆ' ಎಂದು ಟ್ರಾವೆಲ್ ಏಜೆಂಟ್ ಶಂಕರಮೂರ್ತಿ ಬೇಸರ ವ್ಯಕ್ತಪಡಿಸಿದರು.

ಮುಂಬೈಯಲ್ಲಿ ಒಂದೇ ವಿಮಾನ ಸಂಚಾರವನ್ನು ಮೂರು ಬಾರಿ ಮುಂದೂಡಲಾಯಿತು. ಇದರಿಂದ ಪ್ರಯಾಣಿಕರು 16 ಗಂಟೆ ವಿಮಾನ ನಿಲ್ದಾಣದಲ್ಲೇ ಕಾಲ ಕಳೆಯುವಂತಾಯಿತು ಎಂದು ವಿವರಿಸಿದರು.

ಮೊದಲ ಬಾರಿಗೆ ವಿಮಾನದಲ್ಲಿ ಪ್ರಯಾಣಿಸುವ ಆಸೆ ಹೊತ್ತು ಭಾನುವಾರ ಬೆಳಿಗ್ಗೆ ಬಂದಿದ್ದ ವೃದ್ಧೆ ಜ್ಯೋತಿ ಪಾಟೀಲ್ ಅವರಿಗೆ ಬೆಳಿಗ್ಗೆಯ ವಿಮಾನ ರದ್ದಾಗಿರುವುದು ಆಮೇಲಷ್ಟೇ ಗೊತ್ತಾಯಿತು. ಸಂಜೆ 6.30ಕ್ಕೆ ವಿಮಾನ ಇರಲಿದೆ ಎಂದು ಹೇಳುತ್ತಿದ್ದಾರೆ. ಕೊನೇ ಕ್ಷಣದಲ್ಲಿ ಅದೂ ರದ್ದಾದರೆ ಏನು ಮಾಡುವುದು' ಎಂದು ಕಳವಳ ವ್ಯಕ್ತಪಡಿಸಿದರು.

ರೋಶ್ನಿ ಎಂಬ ಪ್ರಯಾಣಿಕರೊಬ್ಬರು ಮೊದಲ ವಿಮಾನ ರದ್ದಾದಾಗ ಮಧ್ಯಾಹ್ನದ ನಂತರದ ವಿಮಾನವನ್ನು ಮತ್ತೆ ಹಣ ಪಾವತಿಸಿ ಬುಕ್ ಮಾಡಿದ್ದರು. ಮಧ್ಯಾಹ್ನ ವಿಮಾನ ಹೊರಟಿತ್ತಾದರೂ ನವೀಕರಿಸಿದ ಪ್ರಯಾಣಿಕರ ಪಟ್ಟಿಯಲ್ಲಿ ಅವರ ಹೆಸರು ಇಲ್ಲದ ಕಾರಣ ಅವರನ್ನು ಆರಂಭದಲ್ಲಿ ಹತ್ತದಂತೆ ನಿರ್ಬಂಧಿಸಲಾಯಿತು. ಕೊನೆಗೆ ಹೇಗೋ ಹೊರಡುವಂತಾಯಿತು.

'ಎಚ್‌ಎನ್ ವಿಚಾರವಂತಿಕೆ ಅಳವಡಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ತಜ್ಞ, ವಿಚಾರವಾದಿ ಎಚ್. ನರಸಿಂಹಯ್ಯ (ಎಚ್‌ಎನ್) ಅವರ ವಿಚಾರವಂತಿಕೆಯನ್ನು ನ್ಯಾಷನಲ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಸೇರಿದಂತೆ ಎಲ್ಲ ಯುವಜನರು ಅಳವಡಿಸಿಕೊಳ್ಳಬೇಕು ಎಂದು ಡಾ.ಎಚ್.ಎನ್.ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಮಾಜಿ ಸಚಿವ ಎನ್.ಎಚ್.ಶಿವಶಂಕರ ರೆಡ್ಡಿ ಹೇಳಿದರು.

ಎಚ್‌ಎನ್ ಅವರ ನೆನಪಿನಲ್ಲಿ ಆರಂಭವಾಗಿರುವ 'ಡಾ.ಎಚ್.ಎನ್.ಗ್ಲೋಬಲ್ ಫೋರಂ'ನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಎಚ್‌ಎನ್ ಅವರ ಹೆಸರಿಡಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಗೌರಿಬಿದನೂರಿನ ಎಇಎಸ್ ನ್ಯಾಷನಲ್ ಕಾಲೇಜು, ಬಾಗೇಪಲ್ಲಿ ನ್ಯಾಷನಲ್ ಕಾಲೇಜು, ಬೆಂಗಳೂರಿನ ಜಯನಗರ, ಬಸವನಗುಡಿ ನ್ಯಾಷನಲ್ ಕಾಲೇಜುಗಳ ಹಳೆಯ ವಿದ್ಯಾರ್ಥಿಗಳು, ನಿವೃತ್ತ ಪ್ರಾಧ್ಯಾಪಕರು ಭಾಗವಹಿಸಿದ್ದರು.

ಗ್ರಾಮೀಣ ಪ್ರದೇಶದಲ್ಲಿ ಪ್ರೌಢಶಾಲೆ, ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಎಚ್. ನರಸಿಂಹಯ್ಯ ಅವರು ಲಕ್ಷಾಂತರ ಮಂದಿ ವಿದ್ಯಾವಂತರಾಗಲು ಕಾರಣಕರ್ತರಾದರು ಎಂದು ಸ್ಮರಿಸಿದ ನಿವೃತ್ತ ಪ್ರಾಧ್ಯಾಪಕ ಕೆ.ಎನ್.ವೆಂಕಟಕೃಷ್ಣರಾವ್ ಅವರು ಎಚ್‌ಎನ್, ವಿಶ್ವೇಶ್ವರಯ್ಯ ಅವರಂಥ ಮಹನೀಯರ ವಿಚಾರಗಳನ್ನು ಪಠ್ಯಗಳನ್ನಾಗಿ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಎಚ್‌ಎನ್ ಅವರು ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ವಿಚಾರವಾದ, ವೈಜ್ಞಾನಿಕ ಮನೋಭಾವಕ್ಕೆ ಉತ್ತೇಜನ ನೀಡಿದರು. ಇಂದಿನ ದಿನಮಾನಗಳಲ್ಲಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ, ಸಾಮಾಜಿಕ ಜವಾಬ್ದಾರಿ ಬೆಳೆಸುವುದು ಅತಿ ಮುಖ್ಯವಾಗಿದೆ ಎಂದು ನಿವೃತ್ತ ಪ್ರಾಧ್ಯಾಪಕ ನಗರಗೆರೆ ರಮೇಶ್ ಹೇಳಿದರು.

ಎಚ್‌ಎನ್ ಗ್ಲೋಬಲ್ ಫೋರಂ ಮೂಲಕ ಹಿಂದುಳಿದ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿ ಕೌಶಲ, ಸ್ಪರ್ಧಾತ್ಮಕತೆ ಬೆಳೆಸುವುದು ಸೇರಿದಂತೆ ವಿವಿಧ ರೀತಿಯ ಸಾಮಾಜಿಕ ಸೇವಾ ಚಟುವಟಿಕೆಗಳನ್ನು ನಡೆಸಲಾಗುವುದು ಎಂದು ತಿಳಿಸಿದ ಫೋರಂ ಸಂಚಾಲಕರಾದ ಆರ್.ಕೆ.ಮಂಜುನಾಥ್, ತಮ್ಮ ಕಾರ್ಯಚಟುವಟಿಕೆಗಳ ನೀಲನಕ್ಷೆಯನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲರಾದ ಪ್ರೊ.ಸಿ.ನಾಗರಾಜ್, ಪ್ರಾಧ್ಯಾಪಕ ಎಸ್.ಕೆ.ನಾರಾಯಣ್ ಸೇರಿದಂತೆ ಹಲವು ಕ್ಷೇತ್ರಗಳ ಗಣ್ಯರು, ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಡಾ.ಎಚ್‌ಎನ್ ಗ್ಲೋಬಲ್ ಫೋರಂ ಕಾರ್ಯಕ್ರಮ

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

'ಹನುಮಗಿರಿ ರಸ್ತೆಯುದ್ದಕ್ಕೂ ಗುಂಡಿ'



ಇಟ್ಟಮಡು ಮುಖ್ಯರಸ್ತೆಯಿಂದ ಸಪ್ತಗಿರಿ ಲೇಔಟ್ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಮಾರ್ಸ್ ಮೌಂಟ್ ಅಪಾರ್ಟ್‌ಮೆಂಟ್ ಸಮುಚ್ಚಯದಿಂದ ದಿ ಪ್ರೊಮೊಂಟ್ ಟಾಟಾ ಹೌಸಿಂಗ್ ಅಪಾರ್ಟ್‌ಮೆಂಟ್ ಸಮುಚ್ಚಯದ ಪ್ರವೇಶದ್ವಾರ ತಲುಪುವ ಸುಮಾರು 500 ಮೀ. ಉದ್ದಕ್ಕೂ ಎಲ್ಲೆಂದರಲ್ಲಿ ಗುಂಡಿಗಳಿದ್ದು, ಇದನ್ನು ತಪ್ಪಿಸಲು ದ್ವಿಚಕ್ರ ವಾಹನ ಸವಾರರು ಹರಸಾಹಸ ಪಡಬೇಕಾಗಿದೆ. ರಸ್ತೆ ಇಳಿಜಾರಿನಿಂದ ಕೂಡಿರುವುದರಿಂದ ವಾಹನಗಳು ವೇಗವಾಗಿ ಬರುತ್ತವೆ. ರಸ್ತೆಯ ಒಂದು ಭಾಗದಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಲಾಗುತ್ತಿದೆ. ಇದರಿಂದಾಗಿ ಈ ರಸ್ತೆಯಲ್ಲಿ ಸಂಚಾರ ಸವಾಲಾಗುತ್ತಿದೆ. ಆರ್.ಆರ್.ನಗರ ವಿಧಾನಸಭೆ ವ್ಯಾಪ್ತಿಗೆ ಬರುವ ಈ ರಸ್ತೆಯ ಗುಂಡಿ ಮುಚ್ಚಲು ಕೂಡಲೇ ಕ್ರಮವಹಿಸಬೇಕು.

ಮಂಜುನಾಥ್, ಹೊಸಕೆರೆಹಳ್ಳಿ ನಿವಾಸಿ

'ಅಪಾಯ ತಂದೊಡ್ಡುವ ಗುಂಡಿ'



ಬನಶಂಕರಿ ಎರಡನೇ ಹಂತದ ಕರಿಸಂದ್ರ ವಾರ್ಡ್‌ನ ಮುಖ್ಯರಸ್ತೆ ಮತ್ತು ಪಾದಚಾರಿ ಮಾರ್ಗದಲ್ಲಿ ಗುಂಡಿಗಳು ಬಿದ್ದಿವೆ. ಇಲ್ಲಿನ 9ನೇ ಮುಖ್ಯರಸ್ತೆಯಲ್ಲಿ ಗುಂಡಿ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಸಂಬಂಧಪಟ್ಟವರಿಗೆ ಈ ಬಗ್ಗೆ ದೂರು ನೀಡಿದರೂ ಈವರೆಗೂ ಗುಂಡಿಗಳನ್ನು ಮುಚ್ಚಿಸಲು ಕ್ರಮ ಕೈಗೊಂಡಿಲ್ಲ. ಈ ಗುಂಡಿಗಳಿಂದ ವಾಹನ ಸವಾರರು ಹಾಗೂ ಪಾದಚಾರಿಗಳು ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಜಿಬಿಎ ಅಧಿಕಾರಿಗಳು ಕೂಡಲೇ ಈ ಬಗ್ಗೆ ಗಮನಹರಿಸಿ ಗುಂಡಿಗಳನ್ನು ಮುಚ್ಚಿಸಬೇಕು. ಇಲ್ಲವಾದಲ್ಲಿ ರಸ್ತೆ ಅಪಘಾತಗಳು ಸಂಭವಿಸುವ ಸಾಧ್ಯತೆಯಿದೆ.

ಶಮಂತ, ಸ್ಥಳೀಯ ನಿವಾಸಿ

'ಹದಗೆಟ್ಟ ಪಾದಚಾರಿ ಮಾರ್ಗ'



ಜೆ.ಸಿ.ನಗರದಲ್ಲಿರುವ ಬೆಂಗಳೂರು ದೂರದರ್ಶನದ ಕಚೇರಿಯ ಎದುರಿನ ರಸ್ತೆಯ ಪಾದಚಾರಿ ಮಾರ್ಗ ಹದಗೆಟ್ಟಿದೆ. ಇಲ್ಲಿ ಅಳವಡಿಸಲಾದ ಕಲ್ಲು ಹಾಸುಗಳಲ್ಲಿ ಕೆಲವು ಕಿತ್ತುಹೋಗಿವೆ. ಅರಿವಿಲ್ಲದೆ ಹೆಜ್ಜೆ ಹಾಕಿದರೆ ಒಳಚರಂಡಿಯಲ್ಲಿ ಬೀಳಬೇಕಾಗುತ್ತದೆ. ಈ ಪಾದಚಾರಿ ಮಾರ್ಗ ಜನರಿಗೆ ನಿರುಪಯುಕ್ತವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಈ ರಸ್ತೆಯಲ್ಲಿ ಸಂಚರಿಸುವುದರಿಂದ ಪಾದಚಾರಿಗಳು ರಸ್ತೆ ಅಪಘಾತಕ್ಕೆ ಒಳಗಾಗುವ ಅಪಾಯ ಇದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈಗಾಲಾದರೂ ಈ ಬಗ್ಗೆ ಗಮನಹರಿಸಿ, ಸಮಸ್ಯೆಯನ್ನು ನಿವಾರಿಸಬೇಕು.

ಅ.ನಾ.ರಾವ್ ಜಾದವ್, ಹಿರಿಯ ನಾಗರಿಕ

'ಪಾದಚಾರಿ ಮಾರ್ಗ ಒತ್ತುವರಿ'



ಮತ್ತಿಕೆರೆ ಮುಖ್ಯರಸ್ತೆ ಬಸ್ ತಂಗುದಾಣ ಸಂಪರ್ಕಿಸುವ ಪಾದಚಾರಿ ಮಾರ್ಗವನ್ನು ಸ್ಥಳೀಯ ನಿವಾಸಿಗಳು ಒತ್ತುವರಿ ಮಾಡಿದ್ದಾರೆ. ತಮ್ಮ ದೈನಂದಿನ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಪಾದಚಾರಿಗಳು ರಸ್ತೆಯಲ್ಲಿಯೇ ಹೆಜ್ಜೆ ಹಾಕಬೇಕಿದೆ. ಮುಖ್ಯರಸ್ತೆಯಲ್ಲಿ ವಾಹನಗಳು ವೇಗವಾಗಿ ಬರುವುದರಿಂದ ಮಕ್ಕಳು ಮತ್ತು ವೃದ್ಧರು ಭಯದಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ಜಿಬಿಎ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ಒತ್ತುವರಿ ತೆರವು ಮಾಡಬೇಕು.

ಆನಂದ್, ಪಾದಚಾರಿ

ಬೇಗೂರು: 26 ವರ್ಷಗಳ ಹಿಂದೆ ಭೂಮಿ ಮಂಜೂರಾದರೂ ಸಿಗದ ನಿವೇಶನ

ದಲಿತ ಕುಟುಂಬಗಳಿಗೆ ಬೇಕು 'ಆಶ್ರಯ'

• ಲಿಂಗರಾಜು ಮಳವಳ್ಳಿ

ಬೊಮ್ಮನಹಳ್ಳಿ: ಬೇಗೂರು ಗ್ರಾಮದ 62 ದಲಿತ ಕುಟುಂಬಗಳಿಗೆ ಆಶ್ರಯ ಯೋಜನೆಯಡಿ 26 ವರ್ಷಗಳ ಹಿಂದೆಯೇ ಭೂಮಿ ಮಂಜೂರಾಗಿದ್ದು, ಜಾಗವನ್ನೂ ಗುರುತಿಸಲಾಗಿದೆ. ಆದರೆ, ಇದುವರೆಗೂ ನಿವೇಶನ ಹಂಚಿಕೆಯಾಗಿಲ್ಲ.

ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಗ್ರಾಮದ ಸರ್ವೆ ನಂ.302ರಲ್ಲಿ 1 ಎಕರೆ 32 ಗುಂಟೆ ಜಮೀನನ್ನು ಆಶ್ರಯ ಯೋಜನೆಯಡಿ ನಿವೇಶನಕ್ಕಾಗಿ 1994ರಲ್ಲಿ ಆಗಿನ ಜಿಲ್ಲಾಧಿಕಾರಿ ಮಂಜೂರು ಮಾಡಿದ್ದರು. ಆಗಿನಿಂದಲೂ ನಿವೇಶನ ದೊರೆತು ನೆಲೆ ಸಿಗಬಹುದು ಎಂದು ದಲಿತ ಕುಟುಂಬಗಳು ಕಾಯುತ್ತಲೇ ಇವೆ.

ಸರ್ವೆ ನಂ.302ರ 3 ಎಕರೆ 33 ಗುಂಟೆ ಜಮೀನಿನಲ್ಲಿ 2 ಎಕರೆ 23 ಗುಂಟೆ ಜಮೀನು ಸರ್ಕಾರಿ ಗುಂಡುತೋಪು ಎಂದು ಪಹಣಿಯಲ್ಲಿ ಇದೆ. ಜಮೀನಿನಲ್ಲಿ ಬೇಗೂರು ಪೊಲೀಸ್ ಠಾಣೆ ಕಟ್ಟಡಕ್ಕಾಗಿ 1 ಎಕರೆ 10 ಗುಂಟೆ ಜಮೀನನ್ನು ಮಂಜೂರು ಮಾಡಲಾಗಿದೆ. ಉಳಿದ ಜಮೀನಿನಲ್ಲಿ ಪ್ರತಿ ಕುಟುಂಬಕ್ಕೆ 20X30 ಅಡಿ ನಿವೇಶನವನ್ನು ಮಂಜೂರು ಮಾಡಲಾಗಿತ್ತು.

ಮಂಜೂರಾತಿ ಆದೇಶ ದೊರೆತ ಸಂದರ್ಭದಲ್ಲಿ ಬೇಗೂರು ಗ್ರಾಮವು ಪಂಚಾಯಿತಿ ವ್ಯಾಪ್ತಿಯಲ್ಲಿತ್ತು. ತಹಶೀಲ್ದಾರ್ ಅವರು, ಆಗಿನ ಬ್ಲಾಕ್ ಅಭಿವೃದ್ಧಿ ಅಧಿಕಾರಿಗೆ (ಬಿಡಿಒ) ಪತ್ರ ಬರೆದು ವರದಿ ಕೇಳಿದ್ದರು. ಅದರಂತೆ ಪರಿಶೀಲನೆ ನಡೆಸಿ ಈ ಜಮೀನಿನಲ್ಲಿ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲು ಹಕ್ಕುಪತ್ರ ನೀಡಬಹುದೆಂದು ಬಿಡಿಒ ವರದಿ ನೀಡಿದ್ದರು. ಆದರೂ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಿಲ್ಲ. ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಬೇಗೂರು ಗ್ರಾಮವು, 2007ರಲ್ಲಿ ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟಿತು.

ಫಲಾನುಭವಿಗಳಾದ ಮುನಿಯಪ್ಪ, ಬಿ.ಸಿ.ವೆಂಕಟೇಶ್, ಆಂಜಿನಪ್ಪ, ಕುಮಾರ್ ಎಂ. 2022ರಲ್ಲಿ ಹೈಕೋರ್ಟ್ ಮೊರೆಹೋಗಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ, ಮಂಜೂರಾಗಿರುವ ನಿವೇಶನಗಳನ್ನು ಫಲಾನುಭವಿಗಳಿಗೆ ಕೂಡಲೇ ಹಂಚಿಕೆ ಮಾಡಬೇಕು ಎಂದು 2024ರ ಜೂನ್‌ನಲ್ಲಿ ತೀರ್ಪು ನೀಡಿತ್ತು. ಇಷ್ಟೆಲ್ಲ ಆದರೂ, ಇದುವರೆಗೂ ನಿವೇಶನಗಳ ಹಂಚಿಕೆಯಾಗಿಲ್ಲ.

'ಬೇಗೂರು ಗ್ರಾಮ ಬಿಬಿಎಂಪಿಗೆ ಒಳಪಟ್ಟ ಮೇಲೆ ಬೊಮ್ಮನಹಳ್ಳಿ ವಲಯದ ಬಿಬಿಎಂಪಿ ಜಂಟಿ ಆಯುಕ್ತರಿಗೆ ಮನವಿ ಸಲ್ಲಿಸಿದರೂ ಕಿವಿಗೆ ಹಾಕಿಕೊಳ್ಳಲಿಲ್ಲ, ಬದಲಾಗಿ ತಹಶೀಲ್ದಾರ್ ಮೂಲಕವೇ ಹಂಚಿಕೆ ಮಾಡಿಸಿಕೊಳ್ಳಿ ಎಂದು ಇಲ್ಲಿ ಕಾರ್ಯನಿರ್ವಹಿಸಿದ ಬಹುತೇಕ ಜಂಟಿ ಆಯುಕ್ತರು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪ್ರಯತ್ನ ನಡೆಸಿದರು. ಈಗಲೂ ದಲಿತರ ಬಗ್ಗೆ ಕರುಣೆ ತೋರುತ್ತಿಲ್ಲ' ಎಂದು ಫಲಾನುಭವಿ ಎಚ್.ಮುನಿಯಪ್ಪ 26 ವರ್ಷದ ಹಾದಿಯನ್ನು ಬಿಡಿಸಿಟ್ಟರು.

> ಜಿಬಿಎ ರಚನೆಯಾದ ನಂತರ ಬೇಗೂರು ಪ್ರದೇಶವು 'ವಲಯ 1'ಕ್ಕೆ ಸೇರಿದೆ. ಜಮೀನಿಗೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ
>
> **ಎಂ.ಎಂ.ಮಧು,** ಜಂಟಿ ಆಯುಕ್ತೆ, ವಲಯ 1, ಬೆಂಗಳೂರು ದಕ್ಷಿಣ ನಗರಪಾಲಿಕೆ



ಬೇಗೂರು ಗ್ರಾಮದ ದೇವರಚಿಕ್ಕನಹಳ್ಳಿ ರಸ್ತೆಯಲ್ಲಿ ಆಶ್ರಯ ನಿವೇಶನಗಳಿಗೆ ಮಂಜೂರಾದ ಜಮೀನಿನ ಬಳಿ ಫಲಕ ಹಾಕಲಾಗಿದೆ

ಚಿಟಿಕೆ ಸುದ್ದಿ

ಅಂತರ್ಜಾತಿ ವಿವಾಹ ಹೆಚ್ಚಾಗಲಿ: ಮುಖ್ಯಮಂತ್ರಿ


ಸಿದ್ದರಾಮಯ್ಯ

ನವಲಗುಂದ (ಧಾರವಾಡ ಜಿಲ್ಲೆ): 'ಅಂತರ್ಜಾತಿ ವಿವಾಹಗಳು ಹೆಚ್ಚಾಗಬೇಕು. ವರ್ಗ ವ್ಯವಸ್ಥೆ, ಜಾತಿ ಪದ್ಧತಿ ನಿರ್ಮೂಲನೆ ಆಗಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಇಲ್ಲಿ ಹೇಳಿದರು.

ಪಟ್ಟಣದಲ್ಲಿ ಶಾಸಕ ಕೋನರೆಡ್ಡಿ ಆಯೋಜಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, '12ನೇ ಶತಮಾನದಲ್ಲಿ ಬಸವಣ್ಣನವರು ಅಂತರ್ಜಾತಿ ವಿವಾಹ ಮಾಡಿಸಿದ್ದರು. ಅಂತರ್ಜಾತಿ ವಿವಾಹ ಪ್ರೋತ್ಸಾಹಿಸಬೇಕು. ಶೂದ್ರ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ಇವೆಲ್ಲವೂ ನಿವಾರಣೆಯಾಗಬೇಕು' ಎಂದು ಹೇಳಿದರು.

'ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ 75 ಜೋಡಿಗಳು ದಾಂಪತ್ಯಕ್ಕೆ ಕಾಲಿಟ್ಟಿವೆ. ಹಿಂದೂ, ಮುಸ್ಲಿಂ ಸಹಿತ ವಿವಿಧ ಸಮುದಾಯಗಳ ಜೋಡಿಗಳಿವೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ, ಜೈನ ಸಹಿತ ಎಲ್ಲ ಸಮುದಾಯವರು ಸಹಬಾಳ್ವೆ ನಡೆಸಬೇಕು' ಎಂದು ಹೇಳಿದರು.

ಹೆರಿಗೆ ವೇಳೆ ಶಿಶು ಸಾವು: ವೈದ್ಯರ ವಿರುದ್ಧ ಪ್ರತಿಭಟನೆ

ಯಾದಗಿರಿ: 'ಯಿಮ್ಸ್'ನ ತಾಯಿ-ಮಕ್ಕಳ ಆಸ್ಪತ್ರೆಯಲ್ಲಿ ಭಾನುವಾರ ಹೆರಿಗೆ ವೇಳೆ ಶಿಶು ಮೃತಪಟ್ಟಿದ್ದು, ವೈದ್ಯರ ನಿರ್ಲಕ್ಷ್ಯವೇ ಕಾರಣವೆಂದು ಆರೋಪಿಸಿ ಸಂಬಂಧಿಕರು ಪ್ರತಿಭಟನೆ ನಡೆಸಿದರು.

ಶನಿವಾರ ಆಸ್ಪತ್ರೆಗೆ ದಾಖಲಾಗಿದ್ದ ತಾಲ್ಲೂಕಿನ ಬಳಿಚಕ್ರ ತಾಂಡಾ ನಿವಾಸಿ ನೀಲಾಬಾಯಿ ಅವರ ಶಿಶು ಮೃತಪಟ್ಟಿತು. ವೈದ್ಯರು ಮತ್ತು ಸಿಬ್ಬಂದಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಶಿಶುವಿನ ಶವ ಇರಿಸಿ ಒತ್ತಾಯಿಸಿದರು.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ 'ಯಿಮ್ಸ್' ಪ್ರಸೂತಿ ವಿಭಾಗದ ಮುಖ್ಯಸ್ಥ ಡಾ.ಶಿವಕುಮಾರ, 'ಶನಿವಾರ ರಾತ್ರಿ ನೀಲಾಬಾಯಿ ಅವರ ಸ್ಥಿತಿ ಸ್ಥಿರವಾಗಿತ್ತು. ಮಧ್ಯರಾತ್ರಿ ರಕ್ತ ದೊತ್ತಡ ಹೆಚ್ಚಾಗಿ ರಕ್ತಸ್ರಾವ ವಾಗಿದೆ. ಶಿಶುಗೆ ಹೃದಯದ ಬಡಿತ ಇರಲಿಲ್ಲ. ತಾಯಿಗೂ ಅಪಾಯ ಸಾಧ್ಯತೆ ಇದ್ದಿದ್ದರಿಂದ ಸಿಸೇರಿಯನ್ ಮೂಲಕ ಶಿಶುವನ್ನು ಹೊರ ತೆಗೆಯಲಾಗಿದೆ. ಈ ಬಗ್ಗೆ ವರದಿ ಪಡೆಯಲಾಗುವುದು' ಎಂದು ಹೇಳಿದರು.

'ಸಂಧಾನದಿಂದ ಬಾಕಿ ಪ್ರಕರಣ ಶೀಘ್ರ ಇತ್ಯರ್ಥ'


ವಿಭು ಬಖ್ರು

ಕಾರವಾರ: 'ಜಿಲ್ಲಾ ಸೆಷನ್ಸ್ ನ್ಯಾಯಾಲಯಗಳಲ್ಲಿ 21 ಲಕ್ಷ ಪ್ರಕರಣಗಳು ಬಾಕಿ ಇದ್ದು, ರಾಜಿ ಸಂಧಾನದಿಂದ ಅವುಗಳ ಶೀಘ್ರ ಇತ್ಯರ್ಥ ಸಾಧ್ಯವಿದೆ' ಎಂದು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಹೇಳಿದರು.

ಇಲ್ಲಿನ ಜಿಲ್ಲಾ ಸೆಷನ್ಸ್ ಕೋರ್ಟ್ ಆವರಣದಲ್ಲಿ ಭಾನುವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪರ್ಯಾಯ ವಿವಾದ ಪರಿಹಾರ (ಎಡಿಆರ್) ಕೇಂದ್ರದ ಕಟ್ಟಡ ಉದ್ಘಾಟಿಸಿ, ಮಾತನಾಡಿದರು.

'ನ್ಯಾಯಾಂಗ ಇಲಾಖೆಯಲ್ಲಿ ಸೀಮಿತ ಸಂಪನ್ಮೂಲಗಳಿವೆ. ಬಾಕಿ ಇರುವ ಪ್ರಕರಣಗಳನ್ನು ಕಡಿಮೆ ಅವಧಿಯಲ್ಲಿ ಪರಿಹರಿಸಲು ಕೆಲಸದ ಮಾದರಿ ವಿಭಿನ್ನವಾಗಬೇಕಿದೆ' ಎಂದರು.

'ಡ್ರಗ್ಸ್ ಮುಕ್ತ ಕರ್ನಾಟಕ' ಗುರಿ

ವಿಂಟೇಜ್ ಕಾರು ಮತ್ತು ಬೈಕ್ ರ‍್ಯಾಲಿಗೆ ಗೃಹ ಸಚಿವ ಪರಮೇಶ್ವರ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡ್ರಗ್ಸ್ ಮುಕ್ತ ಕರ್ನಾಟಕ' ಮಾಡಲು ಪೊಲೀಸ್ ಇಲಾಖೆ ಅಗತ್ಯ ಕ್ರಮ ಕೈಗೊಂಡಿದ್ದು, ಹಂತ ಹಂತವಾಗಿ ಡ್ರಗ್ಸ್ ಜಾಲ ನಿರ್ಮೂಲನೆ ಮಾಡಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿದರು.

ನಗರದಲ್ಲಿ ಭಾನುವಾರ ಫೆಡರೇಷನ್ ಆಫ್ ಹಿಸ್ಟಾರಿಕ್ ವೆಹಿಕಲ್ಸ್ ಆಫ್ ಇಂಡಿಯಾದ ಸಹಯೋಗದಲ್ಲಿ ಪೌಲ್ ಜಾನ್ ರೆಸಾರ್ಟ್ ಮತ್ತು ಹೋಟೆಲ್ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಮಾದಕ ವಸ್ತುಗಳ ದುರುಪಯೋಗ ಮತ್ತು ಕಳ್ಳಸಾಗಾಣಿಕೆಯ ವಿರೋಧದ ಹೋರಾಟಕ್ಕೆ ಬೆಂಬಲವಾಗಿ ವಿಂಟೇಜ್ ಕಾರುಗಳ ರ‍್ಯಾಲಿಗೆ ಚಾಲನೆ ನೀಡಿ ಮಾತನಾಡಿದರು.

'ಡ್ರಗ್ಸ್ ಮುಕ್ತ ಕರ್ನಾಟಕ' ಎಂಬುದು ಸರ್ಕಾರದ ಧ್ಯೇಯ. ಡ್ರಗ್ಸ್ ಮಾಫಿಯಾ ಬಗ್ಗು ಬಡಿಯಲು ಸಕಲ ರೀತಿಯಲ್ಲೂ ಪ್ರಯತ್ನ ನಡೆಸಿದ್ದೇವೆ. ಇದಕ್ಕೆ ಸಮಯವೂ ಬೇಕು. ಕರ್ನಾಟಕ ಮಾತ್ರವಲ್ಲದೇ ವಿಶ್ವದೆಲ್ಲೆಡೆ ಮಾದಕ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ಮಾದಕ ವಸ್ತುಗಳನ್ನು ಯಾರು ಬೆಂಬಲಿಸುತ್ತಾರೋ ಅವರು ಮನುಷ್ಯರಲ್ಲ. ಜನರ ಜೀವನದ ಜತೆ ಆಟವಾಡಿ, ಭವಿಷ್ಯ ಮತ್ತು ಆರೋಗ್ಯವನ್ನು ನಾಶ ಮಾಡುತ್ತಾರೆ' ಎಂದು ಹೇಳಿದರು.

'ಪೆಡ್ಲರ್‌ಗಳು ಶಾಲೆಗೂ ಹೋಗಿ ಚಾಕೋಲೇಟ್ ಮೂಲಕ ಉಚಿತವಾಗಿ ಡ್ರಗ್ಸ್ ನೀಡುತ್ತಿದ್ದಾರೆ. ಮಾದಕ ವಸ್ತುಗಳ ವಿರುದ್ಧ ನಿರಂತರ ಕಾರ್ಯಾಚರಣೆ ಪರಿಣಾಮ ಕಳೆದ ವರ್ಷ ₹300 ಕೋಟಿಗೂ ಹೆಚ್ಚು ಮೌಲ್ಯದ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ. ಸಾವಿರಾರು ಪ್ರಕರಣ ದಾಖಲಿಸಲಾಗಿದ್ದು, ಹಲವರು ಇನ್ನೂ ಜೈಲಿನಲ್ಲಿದ್ದಾರೆ. ವಿದೇಶದಿಂದ ಶಿಕ್ಷಣಕ್ಕಾಗಿ ಬಂದವರೂ ಇಂತಹ ಕೃತ್ಯಗಳಲ್ಲಿ ತೊಡಗಿರುವುದು ದುರದೃಷ್ಟಕರ' ಎಂದು ಬೇಸರ ವ್ಯಕ್ತಪಡಿಸಿದರು.

'ವಿದ್ಯಾರ್ಥಿಗಳು, ಐ.ಟಿ ಉದ್ಯೋಗಿಗಳು ಸೇರಿದಂತೆ ಯುವ ಸಮುದಾಯ ದುಶ್ಚಟಗಳಿಂದ ದೂರ ಇದ್ದು, ಉತ್ತಮ ಭವಿಷ್ಯ ಕಂಡುಕೊಳ್ಳಬೇಕು' ಎಂದು ಕರೆ ನೀಡಿದರು.

ಅರಿವು ಮೂಡಿಸುವ ಪೋಸ್ಟರ್‌ಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ಫೆಡರೇಷನ್ ಆಫ್ ಹಿಸ್ಟಾರಿಕ್ ವೆಹಿಕಲ್ ಇಂಡಿಯಾದ ಡಾ.ರವಿಪ್ರಕಾಶ್, ಪಾಲ್ ಜಾನ್ ರೆಸಾರ್ಟ್‌ನ ಪ್ರಧಾನ ವ್ಯವಸ್ಥಾಪಕ ರಕ್ಷಿತ್ ಶೆಟ್ಟಿ, ಚಿತ್ರನಟ ಮದನ್ ಪಟೇಲ್ ಪಾಲ್ಗೊಂಡಿದ್ದರು.


ಡ್ರಗ್ಸ್ ಮುಕ್ತ ಕರ್ನಾಟಕಕ್ಕಾಗಿ ಆಯೋಜಿಸಿದ್ದ ರ‍್ಯಾಲಿಗೆ ಚಾಲನೆ ನೀಡಿದ ಬಳಿಕ ಜಿ. ಪರಮೇಶ್ವರ, ಸೀಮಾಂತ್ ಕುಮಾರ್ ಸಿಂಗ್, ಎಂ.ಎ.ಸಲೀಂ ವಿಂಟೇಜ್ ಕಾರಿನಲ್ಲಿ ತೆರಳಿದರು ಚಿತ್ರ ಎಂ.ಎಸ್. ಮಂಜುನಾಥ್

ವಿಂಟೇಜ್ ಕಾರಿನಲ್ಲಿ ತೆರಳಿದ ಪರಮೇಶ್ವರ

ರ‍್ಯಾಲಿಗೆ ಚಾಲನೆ ನೀಡಿದ ಬಳಿಕ ಪರಮೇಶ್ವರ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಎಂ.ಎ. ಸಲೀಂ ಅವರು ಸ್ವಲ್ಪ ದೂರದವರೆಗೆ ವಿಂಟೇಜ್ ಕಾರಿನಲ್ಲಿ ತೆರಳಿದರು.

ಪೊಲೀಸರು, ದ್ವಿಚಕ್ರ ವಾಹನಗಳ ಸವಾರರು ಹಾಗೂ ಕಾಲೇಜು ವಿದ್ಯಾರ್ಥಿಗಳು ರ‍್ಯಾಲಿಯಲ್ಲಿ ಸಾಗಿದರು.

ವಿಧಾನಸೌಧದ ಮುಂಭಾಗದಿಂದ ಹೊರಟ ವಿಂಟೇಜ್ ಕಾರು ಮತ್ತು ಬೈಕ್‌ಗಳ ರ‍್ಯಾಲಿ ಬಿಗ್ ಬನಿಯಾನ್ ವೈನ್ ಯಾರ್ಡ್ ಆ್ಯಂಡ್ ರೆಸಾರ್ಟ್ ತನಕ ಸಾಗಿತು. ಸಾವಿರಾರು ಜನರು ರಸ್ತೆ ಬದಿ ನಿಂತು ಕಾರುಗಳನ್ನು ವೀಕ್ಷಿಸಿದರು. 75ಕ್ಕೂ ಹೆಚ್ಚು ಕಾರುಗಳು ಪಾಲ್ಗೊಂಡಿದ್ದವು.

ನ್ಯಾಷನಲ್ ಹೆರಾಲ್ಡ್ ಪ್ರಕರಣ ಇನಾಯತ್ ಅಲಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಮಂಗಳೂರು: ನ್ಯಾಷನಲ್ ಹೆರಾಲ್ಡ್ ಪ್ರಕರಣದ ತನಿಖೆ ಭಾಗವಾಗಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ, ಮಂಗಳೂರಿನ ಇನಾಯತ್ ಅಲಿ ಅವರಿಗೆ ದೆಹಲಿ ಪೊಲೀಸರು ಶನಿವಾರ ನೋಟಿಸ್ ಜಾರಿ ಮಾಡಿದ್ದಾರೆ.

ಪ್ರಕರಣದಲ್ಲಿ ಕೆಪಿಸಿಸಿ ಅಧ್ಯಕ್ಷ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಅವರ ಸಹೋದರ ಡಿ.ಕೆ ಸುರೇಶ್ ಅವರಿಗೆ ಶುಕ್ರವಾರ ನೋಟಿಸ್ ಜಾರಿ ಮಾಡಲಾಗಿತ್ತು.

ಸುರತ್ಕಲ್‌ನ ಇನಾಯತ್ ಅಲಿ ಅವರ ಮನೆಗೆ ಶನಿವಾರ ಬಂದಿರುವ ಪೊಲೀಸರು ನೋಟಿಸ್ ನೀಡಿದ್ದಾರೆ. ಅವರ ಓಷಿಯನ್ ಕನ್‌ಸ್ಟ್ರಕ್ಷನ್ಸ್ ಹೆಸರಿನಲ್ಲಿ ನೋಟಿಸ್ ನೀಡಿದೆ. ವಾರದೊಳಗೆ ವಿಚಾರಣೆಗೆ ಬರಲು ಸೂಚಿಸಲಾಗಿದೆ.

ಈ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಇನಾಯತ್, 'ಪ್ರಕರಣಕ್ಕೆ ಸಂಬಂಧಿಸಿ, ನಾನು ಮತ್ತು ಸಹೋದರ ನಡೆಸುತ್ತಿರುವ ಕಂಪನಿಯ ಆರ್ಥಿಕ ವ್ಯವಹಾರದ ಮಾಹಿತಿ ನೀಡಲು 2016ರಲ್ಲಿ ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ ನೋಟಿಸ್ ನೀಡಿತ್ತು. ಇದು, ಅದರ ಮುಂದುವರಿಕೆಯಾಗಿದೆ' ಎಂದು ತಿಳಿಸಿದರು.

ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು 2014ರಲ್ಲಿ ಖಾಸಗಿ ದೂರು ನೀಡಿದ್ದರು. ಡಿ.ಕೆ ಶಿವಕುಮಾರ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಇನಾಯತ್ ಅಲಿ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮಂಗಳೂರು ಉತ್ತರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು.

ಗೀತಾ ಲೇಖನ ದೀಕ್ಷೆ


ಉಡುಪಿಯ ಕೃಷ್ಣ ಮಠಕ್ಕೆ ಭಾನುವಾರ ಭೇಟಿ ನೀಡಿದ ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಸ್ವಾಮೀಜಿ ಅವರಿಂದ ಕೋಟಿ ಗೀತಾ ಲೇಖನ ಯಜ್ಞದ ದೀಕ್ಷೆ ಪಡೆದರು

ವಿಜಯಪುರದಲ್ಲಿ ಪಾರಂಪರಿಕ ಓಟ: 21 ಸಾವಿರಕ್ಕೂ ಅಧಿಕ ಮಂದಿ ಭಾಗಿ

ಸ್ಮಾರಕಗಳ ರಕ್ಷಣೆಗೆ ಜಾಗೃತಿ ಓಟ

● ಬಸವರಾಜ್ ಸಂಪಳ್ಳಿ

ವಿಜಯಪುರ: 'ಗುಮ್ಮಟನಗರ'ದ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ಬಾಹ್ಯ ಜಗತ್ತಿಗೆ ಪರಿಚಯ, ಪ್ರವಾಸಿಗರನ್ನು ಆಕರ್ಷಿಸುವುದು ಹಾಗೂ ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ಹೆಚ್ಚಿಸುವ ಆಶಯದೊಂದಿಗೆ ಭಾನುವಾರ ಇಲ್ಲಿ ಆಯೋಜಿಸಲಾಗಿದ್ದ 'ವೃಕ್ಷಥಾನ್ ಹೆರಿಟೇಜ್ ರನ್' ಗಮನ ಸೆಳೆಯಿತು.

ಮೈಕೊರೆಯುವ ಚಳಿಯನ್ನು ಲೆಕ್ಕಿಸದೇ ಚಿಣ್ಣರು, ತರುಣರು, ಹೆಂಗಳೆಯರು, ವೃದ್ಧರು, ಮಠಾಧೀಶರು, ಸರ್ಕಾರಿ ಅಧಿಕಾರಿಗಳು, ಜನಪ್ರತಿನಿಧಿಗಳು ಸೇರಿದಂತೆ 21 ಸಾವಿರಕ್ಕೂ ಅಧಿಕ ಜನ ಸೂರ್ಯೋದಯಕ್ಕೂ ಮುನ್ನವೇ ಐತಿಹಾಸಿಕ ಸ್ಮಾರಕಗಳಾದ ಗೋಳಗುಮ್ಮಟ, ಗಗನ್‌ಮಹಲ್, ಜೋಡು ಗುಮ್ಮಟ, ಬಾರಾ ಕಮಾನ್, ಇಬ್ರಾಹಿಂರೋಜಾ, ಸೈನಿಕ್ ಶಾಲೆ, ಜ್ಞಾನ ಯೋಗಾಶ್ರಮ ಮಾರ್ಗದಲ್ಲಿ ಓಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಿಂದ ಆರಂಭವಾದ ಓಟಕ್ಕೆ ಚಾಲನೆ ನೀಡಿದ ಸಚಿವರಾದ ಎಂ.ಬಿ.ಪಾಟೀಲ ಮತ್ತು ಈಶ್ವರ ಖಂಡ್ರೆ ತಾವೂ ಹೆಜ್ಜೆ ಹಾಕಿ, ಓಟಗಾರರನ್ನು ಹುರಿದುಂಬಿಸಿದರು.

ಪುಣೆಯ ಅಸ್ವಿನ್ ತಂಡದ ಜುಂಬಾ ಡಾನ್ಸ್, ಕೇರಳದ ಮಹಿಳಾ ಕಲಾವಿದರಿಂದ ಫ್ಲವರ್ ಡಾನ್ಸ್ ಮತ್ತು ನವಿಲು ಕುಣಿತ, ಕೊರವ ಕುಣಿತ ಹಾಗೂ ಶೃಂಗಾರ ನೃತ್ಯ, ಶಿರಸಿಯ ಸ್ಮಾರ್ಟ್ ಡ್ಯಾನ್ಸ್ ಅಕಾಡೆಮಿಯ ಕಲಾವಿದರಿಂದ ಚಿಯರ್ ಅಪ್ ನೃತ್ಯ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿದ್ಯಾರ್ಥಿನಿಯರಿಂದ ಬ್ಯಾಂಡ್ ವಾದನ, ವಿಜಯಪುರ ಸೈನಿಕ್ ಶಾಲಾ ವಿದ್ಯಾರ್ಥಿಗಳಿಂದ ದೇಶ ಭಕ್ತಿ ಗೀತೆ, ಯುವತಿಯರಿಂದ ಚಿಯರ್ ಅಪ್ ನೃತ್ಯ, ಬ್ಯಾಂಜೋ ವಾದನ, ಕರಡಿ ಮಜಲು, ಕಹಳೆ ವಾದನ, ಗೊಂಬೆ ಕುಣಿತ, ಮಹಿಳೆಯರ ಡೊಳ್ಳು ಕುಣಿತ, ಹಲಗೆವಾದನ, ಗಿಟಾರ್ ವಾದನ, ಬಂಜಾರಾ ನೃತ್ಯ ಪ್ರದರ್ಶನ, ಡಿಜೆ ಸೌಂಡ್, ಕೊಳಲು ವಾದನ ಮ್ಯಾರಥಾನ್‌ಗೆ ಸಾಂಸ್ಕೃತಿಕ ಮೆರುಗು ನೀಡಿತು.

> ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ರಕ್ಷಣೆ, ಸುಂದರ ಪರಿಸರ ನಿರ್ಮಾಣ ಜೊತೆಗೆ ಮುಂದಿನ 10 ವರ್ಷಗಳಲ್ಲಿ 5 ಕೋಟಿ ಸಸಿ ನೆಡುವ ಗುರಿ ಹೊಂದಲಾಗಿದೆ
> **ಎಂ.ಬಿ.ಪಾಟೀಲ**
> ಜಿಲ್ಲಾ ಉಸ್ತುವಾರಿ ಸಚಿವ, ವಿಜಯಪುರ

ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮಗಳು, ಪರಿಸರ, ಐತಿಹಾಸಿಕ ಸ್ಮಾರಕ ಸಂರಕ್ಷಣೆ ಕುರಿತು ನಡೆದ ಮೌಲಿಕ ವಿಚಾರಗೋಷ್ಠಿಗಳಿಂದಾಗಿ 'ವೃಕ್ಷಥಾನ್ ಹೆರಿಟೇಜ್ ರನ್' ಅರ್ಥಪೂರ್ಣವಾಯಿತು.

21, 10 ಮತ್ತು 5 ಕಿ.ಮೀ. ವೃಕ್ಷಥಾನ್ ಪಾರಂಪರಿಕ ಓಟದ 26 ವಿಭಾಗಗಳಲ್ಲಿ ಭಾಗವಹಿಸಿ ವಿಜೇತರಾದ ಪುರುಷ ಮತ್ತು ಮಹಿಳಾ ಓಟಗಾರರಿಗೆ ಒಟ್ಟು ₹12 ಲಕ್ಷ ನಗದು ಬಹುಮಾನ ವಿತರಿಸಲಾಯಿತು.


ವಿಜಯಪುರ ನಗರದಲ್ಲಿ ಪರಿಸರ, ಪ್ರಾಚೀನ ಸ್ಮಾರಕಗಳ ಸಂರಕ್ಷಣೆಗಾಗಿ ಭಾನುವಾರ ಆಯೋಜಿಸಲಾಗಿದ್ದ ವೃಕ್ಷಥಾನ್ ಪಾರಂಪರಿಕ ಓಟದಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ಐತಿಹಾಸಿಕ ಗೋಳಗುಮ್ಮಟದ ಎದುರು ಹೆಜ್ಜೆ ಹಾಕಿದರು

ಚಿತ್ರ: ಸಂಜೀವ ಅಕ್ಕಿ

ಮಹಿಳೆ ಸಾವು: ರಾಟ್‌ವೈಲರ್ ಮಾಲೀಕನ ಸೆರೆ

ಪ್ರಜಾವಾಣಿ ವಾರ್ತೆ


ಶೈಲೇಶ ಕುಮಾರ್

ದಾವಣಗೆರೆ: ದಾಳಿ ನಡೆಸಿ ಮಹಿಳೆಯ ಸಾವಿಗೆ ಕಾರಣವಾಗಿದ್ದ ರಾಟ್‌ವೈಲರ್ ತಳಿಯ ಎರಡು ಶ್ವಾನಗಳ ಮಾಲೀಕನನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ದೇವರಾಜ ಅರಸು ಬಡಾವಣೆಯ ನಿವಾಸಿ ಶೈಲೇಶಕುಮಾರ್ ಪಿ. ಬಂಧಿತ. ಈತ ನಗರದ ಚಿತ್ರಮಂದಿರವೊಂದರ ಮಾಲೀಕರ ಅಳಿಯ. 'ಒಟ್ಟು 3 ನಾಯಿ ಸಾಕಿದ್ದು, ಆಕ್ರಮಣಕಾರಿಯಾಗಿದ್ದ 2 ನಾಯಿಗಳು ಶೈಲೇಶಕುಮಾರ್ ಹಾಗೂ ಅವರ ಮಾವನ ಮೇಲೆಯೇ 2–3 ಬಾರಿ ದಾಳಿ ನಡೆಸಿದ್ದವು. ಕಚ್ಚಿ ಗಾಯಗೊಳಿಸಿದ್ದವು.

ಇದರಿಂದ ಬೇಸತ್ತಿದ್ದ ಅವರು ಎರಡು ನಾಯಿಗಳನ್ನು ರಾತ್ರೋ ರಾತ್ರಿ ಆಟೊದಲ್ಲಿ ಸಾಗಿಸಿ ಹೊನ್ನೂರು ಗೊಲ್ಲರಹಟ್ಟಿ ಸಮೀಪ ಬಿಟ್ಟು ಬಂದಿದ್ದರು ಎಂದು ಗ್ರಾಮೀಣ ಠಾಣೆ ಪೊಲೀಸರು ಮಾಹಿತಿ ನೀಡಿದರು.

ಅನಿತಾ ಎಂಬವರ ಮೇಲೆ ಈ ನಾಯಿಗಳು ತೀವ್ರ ದಾಳಿ ನಡೆಸಿದ್ದವು. ಗಂಭೀರವಾಗಿ ಗಾಯಗೊಂಡಿದ್ದ ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.ಗ್ರಾಮಸ್ಥರು ಸೆರೆ ಹಿಡಿದಿದ್ದ ಈ ಶ್ವಾನಗಳು ಶನಿವಾರ ಮೃತಪಟ್ಟಿದ್ದವು.

ಜೈಲಿಗೆ ಸಿಮ್ ತಂದ ವ್ಯಕ್ತಿ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಬಂಧಿಯಾಗಿರುವ ಅಣ್ಣನನ್ನು ನೋಡಲು ಬಂದಿದ್ದಾಗ ಸಿಮ್ ಕಾರ್ಡ್ ತಂದಿದ್ದು, ಆತನ ವಿರುದ್ಧ ಬ್ರೂಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವೈ. ಕಗ್ಗಲ್‌ನ ಲಿಂಗರಾಜು (24) ವಿರುದ್ಧ ಸದ್ಯ ಪ್ರಕರಣ ದಾಖಲಾಗಿದೆ.

ಅಪರಾಧ ಪ್ರಕರಣವೊಂದರಲ್ಲಿ ಸದ್ಯ ಜೈಲಿನಲ್ಲಿರುವ ತನ್ನ ಅಣ್ಣ ರವಿ ಎಂಬಾತನನ್ನು ನೋಡಲು ಲಿಂಗರಾಜು ಡಿ.4ರಂದು ಜೈಲಿಗೆ ಬಂದಿದ್ದ. ಲಿಂಗರಾಜುವನ್ನು ಜೈಲಿನ ಮುಖ್ಯ ದ್ವಾರದ ಬಳಿ ಭದ್ರತಾ ಸಿಬ್ಬಂದಿ ಪರಿಶೀಲನೆ ಮಾಡಿದಾಗ ಆತನ ಬಳಿ ಬಿಎಸ್‌ಎನ್‌ಎಲ್ ಸಿಮ್ ಕಾರ್ಡ್ ಪತ್ತೆಯಾಗಿದೆ.

ಜೈಲು ನಿಯಮಗಳ ಪ್ರಕಾರ ಸಿಮ್ ಕಾರ್ಡ್ ನಿಷೇಧಿತ ವಸ್ತು. ಹೀಗಾಗಿ ಲಿಂಗರಾಜು ವಿರುದ್ಧ ಕ್ರಮ ಕೈಗೊಳ್ಳುವಂತೆ ಜೈಲು ಸಿಬ್ಬಂದಿ ದೂರು ನೀಡಿದ್ದು, ಇದನ್ನು ಆಧರಿಸಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ತುಂಗಭದ್ರಾ ಅಣೆಕಟ್ಟೆ: ಗೇಟ್ ಅಳವಡಿಕೆಗೆ ಸಿದ್ಧತೆ ಚುರುಕು

18ನೇ ಗೇಟ್‌ನ ಒಂದು ಭಾಗ ತೆರವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮೂರು ತಂಡಗಳಲ್ಲಿ ಕೆಲಸ
- ನೀರು ಕಡಿಮೆಯಾದಂತೆ ಗೇಟ್‌ಗಳಿಗೆ ಕತ್ತರಿ
- ಅಣೆಕಟ್ಟೆ ಮೇಲೆ ಕ್ರೇನ್ ಸಂಚಾರ


ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ ಕ್ರಸ್ಟ್‌ಗೇಟ್‌ಗಳ ಪೈಕಿ 18ನೇ ಗೇಟ್‌ನ ಒಂದು ಸಣ್ಣ ಭಾಗವನ್ನು ಕತ್ತರಿಸಿ ಕ್ರೇನ್ ಮೂಲಕ ಹೊರತರುವ ಕೆಲಸ ನಡೆಯಿತು.

ಸದ್ಯ ಅಣೆಕಟ್ಟೆಯಲ್ಲಿ 18ನೇ ಗೇಟ್‌ನ ಒಂದು ಭಾಗ ನೀರಿನ ಮಟ್ಟಕ್ಕಿಂತ 10 ಅಡಿಗೂ ಹೆಚ್ಚು ಎತ್ತರದಲ್ಲಿದೆ. ಮೊದಲಿಗೆ ಅದೇ ಗೇಟ್‌ನ ಒಂದು ಭಾಗವನ್ನು ಕತ್ತರಿಸಿ ತೆಗೆಯಲಾಯಿತು.

ಅಣೆಕಟ್ಟೆ ಮಧ್ಯಭಾಗದಲ್ಲಿ ತೆರವು ಕಾರ್ಯ ನಡೆದಿದೆ. ಡಿಸೆಂಬರ್ ಮೂರನೇ ವಾರದ ವೇಳೆಗೆ ಕೆಲವು ಗೇಟ್‌ಗಳ ಭಾಗಗಳನ್ನು ತೆರವು ಮಾಡುವ ನಿರೀಕ್ಷೆ ಇದೆ ಎಂದು ತುಂಗಭದ್ರಾ ಮಂಡಳಿಯ ಮೂಲಗಳು ತಿಳಿಸಿವೆ.

ಅಣೆಕಟ್ಟೆಯ ಮೇಲೆ ಕ್ರೇನ್: ಅಣೆಕಟ್ಟೆ ಮೇಲೆ ಭಾನುವಾರ ಮೊದಲ ಬಾರಿಗೆ ಕ್ರೇನ್ ಕಾಣಿಸಿಕೊಂಡಿತು. ಗೇಟ್ ಭಾಗವನ್ನು ಗ್ಯಾಸ್ ಕಟ್ಟರ್‌ನಿಂದ ಕತ್ತರಿಸಿದ ತಕ್ಷಣ ಕ್ರೇನ್ ಬಳಸಿ ಎತ್ತಿ ಮೇಲಕ್ಕೆ ತರಲಾಯಿತು.

ಸದ್ಯ ಜಲಾಶಯದಲ್ಲಿ 65.52 ಟಿಎಂಸಿ ಅಡಿ ನೀರಿದ್ದು, ಕಾಲುವೆಗಳಿಗೆ 9,194 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ. ನಿತ್ಯ ಟಿಎಂಸಿ ಅಡಿಯಷ್ಟು ನೀರು ಖಾಲಿಯಾಗುತ್ತಿದೆ. ಇದೇ ಪ್ರಮಾಣದಲ್ಲಿ ಖಾಲಿ ಆದರೆ, 43 ಟಿಎಂಸಿ ಅಡಿಗೆ ತಲುಪಲು 20 ದಿನ ಬೇಕು. ಆಂಧ್ರ, ತೆಲಂಗಾಣದ ನೀರು ಹಂಚಿಕೆ ಕೋಟಾ ಮುಗಿಸಿದರೆ ಇನ್ನೂ ಬೇಗ ಜಲಾಶಯದ ನೀರು ಖಾಲಿಯಾಗಲಿದೆ ಎಂದು ಮೂಲಗಳು ತಿಳಿಸಿವೆ. ಈ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ.


ತುಂಗಭದ್ರಾ ಅಣೆಕಟ್ಟೆಯ 18ನೇ ಗೇಟ್‌ನ ಒಂದು ಭಾಗವನ್ನು ಭಾನುವಾರ ತೆರವುಗೊಳಿಸಲಾಯಿತು ಪ್ರಜಾವಾಣಿ ಚಿತ್ರ

ವಿಧಾನಸಭೆ: ಎಂಟು ಮಂದಿ ಹುದ್ದೆಗೆ ಕುತ್ತು

ಸಚಿವಾಲಯದ ಎಡವಟ್ಟು • ಎರಡೂವರೆ ವರ್ಷದ ಬಳಿಕ ಹುದ್ದೆ ನಷ್ಟದ ಭೀತಿಯಲ್ಲಿ ನೌಕರರು

• ರಾಜೇಶ್ ರೈ ಚಟ್ಲ

ಬೆಂಗಳೂರು: ವಿಧಾನ ಸಭೆ ಸಚಿವಾಲಯವು ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ವೇಳೆ ನೇಮಕಾತಿ ನಿಯಮವನ್ನು ಉಲ್ಲಂಘಿಸಿದ ಪರಿಣಾಮ ಏಳು ದಲಾಯತ್‌ಗಳು ಮತ್ತು ಒಬ್ಬ ಸ್ವೀಪರ್, ಕೆಲಸಕ್ಕೆ ಸೇರಿದ ಎರಡೂವರೆ ವರ್ಷದ ಬಳಿಕ ಹುದ್ದೆ ಕಳೆದುಕೊಳ್ಳುವ ಭೀತಿ ಎದುರಿಸುತ್ತಿದ್ದಾರೆ.

ತಮ್ಮದಲ್ಲದ ತಪ್ಪಿಗೆ ನಿರುದ್ಯೋಗಿಗಳಾಗುವ ಆತಂಕದಲ್ಲಿರುವ ಈ ಎಂಟೂ ಮಂದಿ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದು ಹುದ್ದೆಯಲ್ಲಿ ಮುಂದುವರಿದಿದ್ದಾರೆ.

ನಿಯಮ ಉಲ್ಲಂಘನೆ: ವಿಧಾನಸಭೆ ಸಚಿವಾಲಯವು 26 ದಲಾಯತ್, ಎರಡು ಸ್ವೀಪರ್ ಸೇರಿ ವಿವಿಧ ಹುದ್ದೆಗಳ ನೇಮಕಾತಿಗೆ 2022ರ ಏಪ್ರಿಲ್ 26ರಂದು ಅಧಿಸೂಚನೆ ಹೊರಡಿಸಿತ್ತು. 26ರಲ್ಲಿ, 23 ಸಾಮಾನ್ಯ, 3 ಬ್ಯಾಕ್‌ಲಾಗ್ ಹುದ್ದೆಗಳಾಗಿದ್ದವು. 23 ಹುದ್ದೆಗಳಲ್ಲಿ 11ನ್ನು ಸಾಮಾನ್ಯ ವರ್ಗ ಮತ್ತು 12ನ್ನು ಮೀಸಲು ಕೆಟಗರಿಗೆ ವರ್ಗೀಕರಿಸಲಾಗಿತ್ತು. ಕೆಇಎ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ, 2023ರ ಫೆ. 15ರಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿತ್ತು.



ದಲಾಯತ್ ಹುದ್ದೆಗೆ 'ಪ್ರವರ್ಗ 2ಎ' ಅಡಿ ಅರ್ಜಿ ಸಲ್ಲಿಸಿದ್ದ ಕೆ.ಪಿ. ಅರುಣ್ ಎಂಬ ಅಭ್ಯರ್ಥಿ ಪರೀಕ್ಷೆಯಲ್ಲಿ 45 ಗಳಿಸಿದ್ದರು. ಸಾಮಾನ್ಯ ಅರ್ಹತೆ (ಜಿಎಂ) ಅಥವಾ ಸಾಮಾನ್ಯ ಅರ್ಹತೆ (ಗ್ರಾಮೀಣ) ವರ್ಗದಲ್ಲಿ ಹುದ್ದೆ ಪಡೆಯಲು ಅರ್ಹರಾಗಿದ್ದು, ಅಂತಿಮ ಆಯ್ಕೆ ಪಟ್ಟಿಯಲ್ಲಿ ಹೆಸರು ಇಲ್ಲದ ಕಾರಣ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಆಯ್ಕೆ ಪಟ್ಟಿ ತಯಾರಿಸುವಾಗ 'ಕರ್ನಾಟಕ ನಾಗರಿಕ ಸೇವೆಗಳ (ನೇಮಕಾತಿ ಸಮಯದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ವಿಧಾನ) ಕಾಯ್ದೆ-2018'ನ್ನು ಸಚಿವಾಲಯ ಪಾಲಿಸಿಲ್ಲ. ಅರುಣ್ ಅವರಿಗಿಂತ ಕಡಿಮೆ ಅಂಕ ಪಡೆದವರು (43.75, 42.50) ಸಾಮಾನ್ಯ ಅರ್ಹತೆಯಡಿ ಆಯ್ಕೆಯಾಗಿದ್ದರು. ಸಾಮಾನ್ಯ ಅರ್ಹತೆಯಡಿ ಮೊದಲು ಆಯ್ಕೆ ಪಟ್ಟಿ ಸಿದ್ಧಪಡಿಸುವ ಬದಲು, ಮೀಸಲು ವರ್ಗದಲ್ಲಿ ಮೊದಲು ಪಟ್ಟಿ ಸಿದ್ಧಪಡಿಸಿರುವುದು 2018ರ ಕಾಯ್ದೆಯ ಉಲ್ಲಂಘನೆಯಾಗಿದೆ ಎಂದು ಅರುಣ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಹೈಕೋರ್ಟ್, 'ಸಚಿವಾಲಯವು 2018ರ ಕಾಯ್ದೆಯಲ್ಲಿರುವ ನೇಮಕಾತಿ ವಿಧಾನ ಪಾಲಿಸಲು ವಿಫಲವಾಗಿದೆ. ಹೀಗಾಗಿ, ಕಡಿಮೆ ಅಂಕ ಗಳಿಸಿದವರು ಸಾಮಾನ್ಯ ವರ್ಗದಲ್ಲಿ ಆಯ್ಕೆಯಾಗಿದ್ದಾರೆ. ಮೀಸಲು ಕೆಟಗರಿಯಲ್ಲಿ ಅರ್ಜಿ ಸಲ್ಲಿಸಿದ್ದರೂ ಸಾಮಾನ್ಯ ವರ್ಗದಡಿ ಆಯ್ಕೆಯಾಗುವ ಅವಕಾಶದಿಂದ ವಂಚಿತರಾಗಿದ್ದಾರೆ. ಹೀಗಾಗಿ, ದಲಾಯತ್ ಹುದ್ದೆಯ ಆಯ್ಕೆ ಪಟ್ಟಿ ರದ್ದುಪಡಿಸಬೇಕು. 2018ರ ಕಾಯ್ದೆಯ ಪ್ರಕಾರ ತಾತ್ಕಾಲಿಕ ಆಯ್ಕೆ ಪಟ್ಟಿ ತಯಾರಿಸಿ, ಆಕ್ಷೇಪಣೆ ಆಹ್ವಾನಿಸಿದ ಬಳಿಕ ಅಂತಿಮ ಪಟ್ಟಿ ಪ್ರಕಟಿಸಬೇಕು' ಎಂದು ತೀರ್ಪು ನೀಡಿತ್ತು. ಹೈಕೋರ್ಟ್ ಆದೇಶದಂತೆ ಸಿದ್ಧಪಡಿಸಿದ ಪಟ್ಟಿಯಲ್ಲಿ ಏಳು ಅಭ್ಯರ್ಥಿಗಳು ಪಟ್ಟಿಯಿಂದ ಹೊರಗುಳಿದಿದ್ದು, ಏಳು ಅಭ್ಯರ್ಥಿಗಳು ಹೊಸತಾಗಿ ಸೇರ್ಪಡೆಯಾಗಿದ್ದಾರೆ.

ಮತ್ತೆ ಹೈಕೋರ್ಟ್‌ಗೆ: ಮೊದಲ ಆಯ್ಕೆ ಪಟ್ಟಿಯಲ್ಲಿದ್ದ ಎಲ್ಲ 26 ಮಂದಿ 2023ರ ಏಪ್ರಿಲ್‌ನಲ್ಲಿ ಹುದ್ದೆಗೆ ವರದಿ ಮಾಡಿಕೊಂಡಿದ್ದಾರೆ. ಈ ಮೊದಲ ಪಟ್ಟಿಯಲ್ಲಿದ್ದ 18 ಮಂದಿ ಹೈಕೋರ್ಟ್ ಆದೇಶದಂತೆ ಪರಿಷ್ಕರಿಸಿದ್ದ ಆಯ್ಕೆ ಪಟ್ಟಿಯಲ್ಲಿಯೂ ಇದ್ದಾರೆ. ಈ 18 ಮಂದಿಗೂ ಸಚಿವಾಲಯ ಇದೇ ಸೆ. 16ರಂದು ಹೊಸತಾಗಿ ನೇಮಕಾತಿ ಆದೇಶ ನೀಡಿದೆ. ಇದರಿಂದ ಈಗಾಗಲೇ ಸಲ್ಲಿಸಿದ ಸೇವಾ ಜ್ಯೇಷ್ಠತೆ ಕಳೆದು ಕೊಳ್ಳುವ ಆತಂಕದಲ್ಲಿರುವ ಈ 18 ಮಂದಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಯಾರು ಒಳಗೆ, ಯಾರು ಹೊರಗೆ

ಹೊಸತಾಗಿ ಪಟ್ಟಿಗೆ ಸೇರ್ಪಡೆ ಆದವರು: ಎಚ್.ಜೆ. ಹೇರಂಬ, ಆನಂದ ಬಡಿಗೇರ, ಎಸ್. ಶೋಭಾ, ಪ್ರಿಯಾಂಕಾ ಹುಗ್ಗೆಣ್ಣವರ, ಬಿ.ಟಿ. ಶೃತಿ

ಹುದ್ದೆ ಕಳೆದುಕೊಳ್ಳುವ ಆತಂಕದಲ್ಲಿ ಇರುವವರು: ಅರ್ಜುನ್, ನೀಲಪ್ಪ ತಳವಾರ, ಕೆ.ಎಸ್. ರವಿಕುಮಾರ್, ಎಂ.ಎನ್. ಮಂಜುಳಾ, ಎಚ್.ಎಲ್. ಅನುರಾಧಾ, ಎಸ್. ಶಶಿಕಲಾ, ಡಿ. ಬಸವರಾಜ್

'ನಮ್ಮನ್ನು ಉಳಿಸಿಕೊಳ್ಳಿ'

'ಸಚಿವಾಲಯ ಮಾಡಿದ ತಪ್ಪಿಗೆ ನಾವು ಬಲಿ ಆಗಿದ್ದೇವೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರ ಮನೆಗೆ ಹೋಗಿ ಕಾಲಿಗೆ ಬಿದ್ದು ಹುದ್ದೆಯಲ್ಲಿಯೇ ಉಳಿಸಿಕೊಳ್ಳುವಂತೆ ಬೇಡಿಕೊಂಡಿದ್ದೇವೆ. ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರಿಗೂ ಮನವಿ ಮಾಡಿದ್ದೇವೆ. ಹೈಕೋರ್ಟ್ ಆದೇಶದಂತೆ ಹುದ್ದೆ ಕಳೆದುಕೊಂಡಿದ್ದೀರಿ ಎಂದು ಅವರು ಸಬೂಬು ಹೇಳುತ್ತಿದ್ದಾರೆ. ನಾವೂ ಹೈಕೋರ್ಟ್‌ಗೆ ಹೋಗಿರುವುದರಿಂದ ಅಂತಿಮ ಆದೇಶ ಬರಲಿ, ಆ ಮೇಲೆ ನೋಡೋಣ ಎನ್ನುತ್ತಿದ್ದಾರೆ' ಎಂದು ಕೆಲಸ ಕಳೆದುಕೊಳ್ಳುವ ಆತಂಕದಲ್ಲಿರುವ ಅಭ್ಯರ್ಥಿಯೊಬ್ಬರು ಅಳಲು ತೋಡಿಕೊಂಡರು.

ಸ್ವೀಪರ್ ಹುದ್ದೆಗೆ ಕುತ್ತು

ಎರಡು ಸ್ವೀಪರ್ ಹುದ್ದೆಗಳ ಪೈಕಿ, ಪರಿಶಿಷ್ಟ ಜಾತಿ ಮತ್ತು ಸಾಮಾನ್ಯ ವರ್ಗಕ್ಕೆ ತಲಾ ಒಂದರಂತೆ ಮೀಸಲಿರಿಸಲಾಗಿತ್ತು. ಆಯ್ಕೆಗಾಗಿ ನಡೆದ ಸಂದರ್ಶನದಲ್ಲಿ ಎಸ್. ಶೇಖರ್ 18.50 ಅಂಕ, ಪ್ರಶಾಂತ್ 19 ಅಂಕ ಗಳಿಸಿದ್ದರು. ಸಾಮಾನ್ಯ ಅರ್ಹತೆಯಡಿ ಪ್ರಶಾಂತ್ ಆಯ್ಕೆಯಾಗಿದ್ದರು. ಎಸ್‌ಸಿ ಮೀಸಲಾತಿಯಡಿ 21.50 ಅಂಕ ಗಳಿಸಿದ್ದ ತಿರುಪತಿ ಆಯ್ಕೆಯಾಗಿ|ದ್ದರು. ಆದರೆ, 2018ರ ನಿಯಮದ ಪ್ರಕಾರ, ಅತಿ ಹೆಚ್ಚು ಅಂಕ ಗಳಿಸಿದ ತಿರುಪತಿ ಸಾಮಾನ್ಯ ವರ್ಗದಲ್ಲಿ ಆಯ್ಕೆಯಾಗಿ, ಎಸ್‌ಸಿ ಮೀಸಲಾತಿಯಡಿ ಅತೀ ಹೆಚ್ಚು ಅಂಕ ಪಡೆದಿದ್ದ ಶೇಖರ್ ಆಯ್ಕೆ ಆಗಬೇಕಿತ್ತು. ಹೈಕೋರ್ಟ್ ಆದೇಶದಂತೆ ಸಚಿವಾಲಯ ಪಟ್ಟಿಯನ್ನು ಪರಿಷ್ಕರಿಸಿದ್ದು, ಪ್ರಶಾಂತ್ ಹೊಸ ಪಟ್ಟಿಯಲ್ಲಿ ಹೊರಗುಳಿದು, ಶೇಖರ್ ಆಯ್ಕೆಯಾಗಿದ್ದಾರೆ. ಪ್ರಶಾಂತ್ ಅವರೂ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಸುದ್ದಿ 2 ನಿಮಿಷ

ದರ್ಶನ್, ಪ್ರದೋಷ್‌ಗೆ ಆದಾಯ ತೆರಿಗೆ ಇಲಾಖೆ ವಿಚಾರಣೆ ಸಾಧ್ಯತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜಪ್ತಿ ಮಾಡಿರುವ ₹82 ಲಕ್ಷ ಹಣದ ಸಂಬಂಧ ಆರೋಪಿ ದರ್ಶನ್ ಅವರನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಮತ್ತೊಮ್ಮೆ ವಿಚಾರಣೆ ನಡೆಸಲು ಸಿದ್ಧತೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ನ್ಯಾಯಾಲಯವು ಈ ಹಣದ ಮೂಲದ ಬಗ್ಗೆ ತನಿಖೆ ನಡೆಸಲು ಸೂಚಿಸಿತ್ತು. ಹಾಗಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ದರ್ಶನ್ ಅವರನ್ನು ವಿಚಾರಣೆ ನಡೆಸಿ ಹಣದ ಬಗ್ಗೆ ಮಾಹಿತಿ ಕೇಳಲು ಅಧಿಕಾರಿಗಳು ಕೋರ್ಟ್‌ಗೆ ಅರ್ಜಿ ಸಲ್ಲಿಸಿ, ಅನುಮತಿ ಕೋರಲು ನಿರ್ಧರಿಸಿದ್ದಾರೆ.

2024ರ ನವೆಂಬರ್ 21ರಂದು ಐ.ಟಿ ಅಧಿಕಾರಿಗಳು ವಿಚಾರಣೆ ನಡೆಸಿದಾಗ, 'ಕೃಷಿಯಿಂದ ₹25 ಲಕ್ಷ ಲಾಭ, ಸಾಕು ಪ್ರಾಣಿಗಳ ಮಾರಾಟದಿಂದ ₹ 15 ಲಕ್ಷ, ಉಳಿದ ಹಣವನ್ನು ಅಭಿಮಾನಿಗಳು ನೀಡಿದ್ದರು' ಎಂದು ದರ್ಶನ್ ತಿಳಿಸಿದ್ದರು.

ಪ್ರಕರಣದ 14ನೇ ಆರೋಪಿ ಪ್ರದೋಷ್ ಮನೆಯಲ್ಲಿ 2024ರ ಜೂನ್ 12ರಂದು ಜಪ್ತಿ ಮಾಡಿರುವ ₹30 ಲಕ್ಷದ ಬಗ್ಗೆ ಅಧಿಕಾರಿಗಳು ವಿಚಾರಣೆ ನಡೆಸಿದ್ದರು. ಹಣ ಎಲ್ಲಿಂದ ಬಂತು? ಯಾರು ಕೊಟ್ಟಿದ್ದಾರೆ? ಹಣದ ಮೂಲ ಒದಗಿಸುವಂತೆ ಅಧಿಕಾರಿಗಳು ಕೇಳಿದ್ದರು. 'ಮನೆಯಲ್ಲಿ ಸಿಕ್ಕ ಹಣ ನನ್ನದೂ ಅಲ್ಲ, ಕುಟುಂಬಕ್ಕೂ ಸೇರಿದ್ದಲ್ಲ' ಎಂದು ಪ್ರದೋಷ್ ಹೇಳಿದ್ದರು. ಹಾಗಾಗಿ ಎರಡನೇ ಬಾರಿ ವಿಚಾರಣೆಗೆ ಒಳಪಡಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಅಧಿವೇಶನದ ಪಾವಿತ್ರ್ಯ ಕುಂದಿಸದಿರಿ: ಎಚ್.ಕೆ.ಪಾಟೀಲ

ಹುಬ್ಬಳ್ಳಿ: 'ಅಧಿವೇಶನ ಪ್ರತಿಭಟನೆಯ ವೇದಿಕೆ, ಪಿಕ್‌ನಿಕ್ ಎಂಬಂತೆ ನಡೆದು ಕೊಳ್ಳುವುದು ಸರಿಯಲ್ಲ. ಇದರ ಪಾವಿತ್ರ್ಯ ಕುಂದಿಸುವ ಕೆಲಸ ಆಗಬಾರದು' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಪ್ರಾದೇಶಿಕ ಅಸಮಾನತೆ ದೂರಮಾಡಲು ಉತ್ತರ ಕರ್ನಾಟಕ ಮತ್ತು ಸಮಗ್ರ ಕರ್ನಾಟಕದ ಅಭಿವೃದ್ಧಿ ಕುರಿತು ಚರ್ಚಿಸುವ ಜವಾಬ್ದಾರಿ ನಮ್ಮ ಮೇಲಿದೆ. ಸಾಮಾಜಿಕ ಬಹಿಷ್ಕಾರ ನಿಷೇಧ, ಧಾರ್ಮಿಕ ಸಂಸ್ಥೆಗಳ ಪರಿಣಾಮಕಾರಿ ನಿರ್ವಹಣೆ ಸೇರಿ 20ಕ್ಕೂ ಅಧಿಕ ಮಸೂದೆಗಳು ಮಂಡನೆಯಾಗಲಿವೆ' ಎಂದು ಮಾಹಿತಿ ನೀಡಿದರು.

'ಭದ್ರಾ ಮೇಲ್ದಂಡೆಗೆ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದ್ದ ₹5,300 ಕೋಟಿ ಕೊಟ್ಟಿಲ್ಲ, ಜಿಎಸ್‌ಟಿ ಪರಿಷ್ಕರಣೆಯಿಂದಾಗಿ ನಮಗೆ ನಷ್ಟವಾಗಿದೆ. ಈ ವಿಚಾರವನ್ನೂ ಚರ್ಚಿಸಲಾಗುವುದು' ಎಂದರು.



ಬೆಳಗಾವಿಯ ಸುವರ್ಣ ವಿಧಾನಸೌಧದ ಹೆಲಿಪ್ಯಾಡ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಶಾಸಕ ಆಸಿಫ್ ಸೇಠ್, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಸ್ವಾಗತಿಸಿದರು

ಬೆಳಗಾವಿಗೆ ಸಿ.ಎಂ ಆಗಮನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಸಂಜೆ ಬೆಳಗಾವಿಗೆ ಬಂದಿಳಿದರು.

ಸುವರ್ಣ ವಿಧಾನಸೌಧದ ಹೆಲಿಪ್ಯಾಡ್‌ನಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಶಾಸಕ ಆಸಿಫ್ ಸೇಠ್, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಹಾಗೂ ಮುಖಂಡ ಮೃಣಾಲ ಹೆಬ್ಬಾಳಕರ ಅವರು ಸ್ವಾಗತಿಸಿದರು.

ಜಿಲ್ಲಾಡಳಿತ ವತಿಯಿಂದ ಗೌರವ ವಂದನೆ ಸ್ವೀಕರಿಸಿ, ಪ್ರವಾಸಿ ಮಂದಿರಕ್ಕೆ ಸಿ.ಎಂ ತೆರಳಿದರು. ಸಚಿವರಾದ ಕೆ.ಜೆ.ಜಾರ್ಜ್, ಎಚ್.ಸಿ.ಮಹದೇವಪ್ಪ, ಕೃಷ್ಣ ಬೈರೇಗೌಡ ಇತರರಿದ್ದರು.

ಅಧಿವೇಶನ ಆರಂಭದ ಮುನ್ನಾದಿನವೇ ಆಗಮಿಸಿರುವ ಸಿದ್ದರಾಮಯ್ಯ, ಅಧಿಕಾರಿಗಳಿಂದ ಸಿದ್ಧತೆ ಮಾಹಿತಿ ಪಡೆದರು.

ವಿಧಾನಮಂಡಲದ ಚಳಿಗಾಲದ ಅಧಿವೇಶನಕ್ಕೆ ಸುವರ್ಣ ವಿಧಾನಸೌಧ ಸನ್ನದ್ಧ

10 ಸಾವಿರ ಸಿಬ್ಬಂದಿ, 3,000 ಕೊಠಡಿ

• ಸಂತೋಷ ಈ.ಚಿನಗುಡಿ

ಬೆಳಗಾವಿ: ಸೋಮವಾರ ಆರಂಭವಾಗುವ, ವಿಧಾನಮಂಡಲದ 14ನೇ ಚಳಿಗಾಲದ ಅಧಿವೇಶನಕ್ಕೆ 10 ಸಾವಿರ ಸಿಬ್ಬಂದಿ ನಿಯೋಜಿಸಲಾಗಿದೆ. ಇದರಲ್ಲಿ 6,000 ಪೊಲೀಸರು, ವಿವಿಧ ಇಲಾಖೆಗಳ ಸಿಬ್ಬಂದಿ ಸೇರಿದ್ದಾರೆ.

ಬಹುಪಾಲು ಸಿಬ್ಬಂದಿ ಈಗಾಗಲೇ ನಗರಕ್ಕೆ ಬಂದಿದ್ದಾರೆ. ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿಗೆ ಶನಿವಾರ ಕರ್ತವ್ಯ ನಿಯೋಜನೆ ಮಾಡಲಾಯಿತು.

ಸುವರ್ಣಸೌಧದ ಸುತ್ತ ಪ್ರತಿ ದಿನ ಉದ್ಯಾನ ನಿರ್ವಹಣೆ, ಸ್ವಚ್ಛತೆ, ಅಡುಗೆ ಬಡಿಸುವುದು ಸೇರಿದಂತೆ ವಿವಿಧ ಕೆಲಸಗಳಿಗೆ 500ಕ್ಕೂ ಹೆಚ್ಚು ಕೂಲಿ ಆಳುಗಳನ್ನು ಬಳಸಿಕೊಳ್ಳಲಾಗುತ್ತಿದೆ.

ವಸತಿಗಾಗಿ 3,000 ಕೊಠಡಿ ಕಾಯ್ದಿರಿಸಲಾಗಿದೆ. ಸರ್ಕಾರಿ ವಸತಿಗೃಹ, ಅತಿಥಿಗೃಹ, ವಿಶ್ವವಿದ್ಯಾಲಯಗಳ ಕೊಠಡಿ, ಖಾಲಿ ಇರುವ ಸರ್ಕಾರಿ ಕಟ್ಟಡ, ಲಾಡ್ಜ್, ಕಲ್ಯಾಣ ಮಂಟಪ ಹಾಗೂ ಬಳಕೆಗೆ ಸೂಕ್ತವಾದ ಅಪಾರ್ಟ್‌ಮೆಂಟ್‌ಗಳನ್ನು 12 ದಿನಗಳ ಅವಧಿಗೆ ಬಾಡಿಗೆಗೆ ಪಡೆಯಲಾಗಿದೆ.



ಚಳಿಗಾಲದ ಅಧಿವೇಶನಕ್ಕಾಗಿ ಸರ್ಕಾರಿ ದಾಖಲೆ ಹಾಗೂ ಕಾಗದ ಪತ್ರಗಳ ಬಾಕ್ಸ್‌ಗಳನ್ನು ಬೆಂಗಳೂರಿನಿಂದ ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ತರಲಾಯಿತು –ಪ್ರಜಾವಾಣಿ ಚಿತ್ರ

ಸುವರ್ಣ ಸೌಧ ನಗರದಿಂದ 12 ಕಿ.ಮೀ ದೂರದಲ್ಲಿದೆ. ಅಧಿಕಾರಿ, ಸಿಬ್ಬಂದಿ ಕರೆದೊಯ್ಯಲು– ಕರೆತರಲು 500ಕ್ಕೂ ಹೆಚ್ಚು ವಾಹನಗಳನ್ನು ಚಾಲಕರ ಸಮೇತ ಬಳಸಿಕೊಳ್ಳಲಾಗುತ್ತಿದೆ. ಶೇ 70ರಷ್ಟು ವಾಹನಗಳನ್ನೂ ಬಾಡಿಗೆಗೆ ಪಡೆಯಲಾಗಿದೆ.

ಸಚಿವರು, ಶಾಸಕರು, ಗಣ್ಯರು ಬಂದಿಳಿಯಲು ಸುವರ್ಣಸೌಧ ಆವರಣದಲ್ಲಿ ಒಂದು, ಕುಮಾರಸ್ವಾಮಿ ಬಡಾವಣೆಯಲ್ಲಿ ಇನ್ನೊಂದು ಹೆಲಿಪ್ಯಾಡ್‌ಗಳನ್ನು ಸಿದ್ಧತೆಯಲ್ಲಿ ಇಡಲಾಗಿದೆ.

ಆಂಬುಲೆನ್ಸ್, ಅಗ್ನಿಶಾಮಕ ದಳ, ತುರ್ತು ಚಿಕಿತ್ಸೆ ಸೇರಿದಂತೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.

'100ರ ಗಡಿ ದಾಟಲಿದೆ ಪ್ರತಿಭಟನೆ ಸಂಖ್ಯೆ'

ಈ ಬಾರಿ ಪ್ರತಿಭಟನೆಗಳ ಸಂಖ್ಯೆ 100 ಗಡಿ ದಾಟುವ ಸಾಧ್ಯತೆ ಇದೆ. ರಾಜ್ಯದ ವಿವಿಧ ಸಂಘಟನೆಗಳು ಅನುಮತಿ ಪಡೆದಿವೆ. ಸುವರ್ಣ ಉದ್ಯಾನದ ಖಾಲಿ ಜಾಗ ಹಾಗೂ ಹಳೆ ಪಿಬಿ ರಸ್ತೆ ಪಕ್ಕದಲ್ಲಿ ಪ್ರತಿಭಟನೆಗೆ ಶಾಮಿಯಾನ ಹಾಕಲಾಗಿದೆ. ಎರಡೂ ಕಡೆ ವೇದಿಕೆಗಳು, ಧ್ವನಿವರ್ಧಕ ಸಲಕರಣೆ, ನೀರು, ನೆರಳಿನ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾಡಳಿತ ಮೂಲಗಳು ತಿಳಿಸಿವೆ.

ಸೌಧದಿಂದ ಒಂದೂವರೆ ಕಿ.ಮೀ ದೂರದಲ್ಲಿ ಟೆಂಟ್ ಸಿಟಿ ನಿರ್ಮಿಸಿದ್ದು, ಅಲ್ಲಿ 2,500 ಪೊಲೀಸರಿಗೆ ವಸತಿ ಕಲ್ಪಿಸಲಾಗಿದೆ. ಇವರು ಪ್ರತಿಭಟನೆಗಳ ಮೇಲೆ ನಿಗಾ ಇಡಲಿದ್ದಾರೆ.

ಅಧಿವೇಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಇಡೀ ಸರ್ಕಾರವೇ ಬೆಳಗಾವಿಗೆ ಬರುವ ಕಾರಣ ಮುಂಜಾಗ್ರತೆಯಾಗಿ ಹೆಚ್ಚಿನ ಸಿಬ್ಬಂದಿ ಬಳಸಿಕೊಳ್ಳಲಾಗಿದೆ

ಮೊಹಮ್ಮದ್ ರೋಷನ್, ಜಿಲ್ಲಾಧಿಕಾರಿ, ಬೆಳಗಾವಿ

ಪ್ರಸಕ್ತ ವರ್ಷ ಪ್ರತಿಭಟನೆಗಳ ಸಂಖ್ಯೆ ಹೆಚ್ಚಾಗಿದೆ. ಸುವರ್ಣಸೌಧ ಹಾಗೂ ಪ್ರತಿಭಟನಾ ಸ್ಥಳಗಳು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದ್ದು, ಭದ್ರತೆ ಒದಗಿಸಲಾಗುವುದು

ಭೂಷಣ ಬೊರಸೆ, ಪೊಲೀಸ್ ಆಯುಕ್ತ, ಬೆಳಗಾವಿ ನಗರ

ಸುಗಮವಾಗಿ ನಡೆದ ಟಿಇಟಿ ಪರೀಕ್ಷೆ

ಬೆಂಗಳೂರು: ರಾಜ್ಯದ ವಿವಿಧ ಕೇಂದ್ರಗಳಲ್ಲಿ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)- 2025 ಭಾನುವಾರ ಸುಗಮವಾಗಿ ನಡೆಯಿತು.

ರಾಜ್ಯದಾದ್ಯಂತ ಏಕಕಾಲದಲ್ಲಿ ಬೆಳಿಗ್ಗೆ ಮತ್ತು ಮಧ್ಯಾಹ್ನ ಪರೀಕ್ಷೆ ನಡೆಯಿತು. 1ರಿಂದ 5ನೇ ತರಗತಿಗೆ ಬೋಧಿಸುವ ಶಿಕ್ಷಕರ ಅರ್ಹತೆಗಾಗಿ ಬೆಳಿಗ್ಗೆ 9.30ರಿಂದ 309 ಕೇಂದ್ರಗಳಲ್ಲಿ ಪರೀಕ್ಷೆ ಹಮ್ಮಿಕೊಳ್ಳಲಾಗಿತ್ತು. ಅರ್ಜಿ ಸಲ್ಲಿಸಿದ್ದ 85 ಸಾವಿರ ಅಭ್ಯರ್ಥಿಗಳಲ್ಲಿ 79 ಸಾವಿರ ಮಂದಿ (ಶೇ 93.35) ಹಾಜರಾಗಿದ್ದರು.

6ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರ ಅರ್ಹತೆಗಾಗಿ ಮಧ್ಯಾಹ್ನ 2ರಿಂದ 913 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದವು. ಅರ್ಜಿ ಸಲ್ಲಿಸಿದ್ದ 2.50 ಲಕ್ಷ ಅಭ್ಯರ್ಥಿಗಳ ಪೈಕಿ, 2.37 ಲಕ್ಷ (ಶೇ 94.79) ಮಂದಿ ಪರೀಕ್ಷೆಗೆ ಹಾಜರಾಗಿದ್ದರು.

ಈ ಪರೀಕ್ಷೆಗಳ ಕೀ ಉತ್ತರವನ್ನು https://schooleducation.karnataka.gov.in/ನಲ್ಲಿ ಪ್ರಕಟಿಸಲಾಗಿದೆ. ಆನ್‌ಲೈನ್ ಮೂಲಕ ಆಕ್ಷೇಪಣೆ ಸಲ್ಲಿಸಲು ಇದೇ 9ರಿಂದ 12ರ ಸಂಜೆ 5.30ರವರೆಗೆ ಕಾಲಾವಕಾಶವಿದೆ ಎಂದು ಶಾಲಾ ಶಿಕ್ಷಣ ಇಲಾಖೆ ತಿಳಿಸಿದೆ.

'ಉತ್ತರ'ಕ್ಕೆ ವೆಚ್ಚ ₹31,198 ಕೋಟಿ

ಒಂದನೇ ಪುಟದಿಂದ...

ಈ ಸಮಿತಿಯು ಆಗ ಇದ್ದ 176 ತಾಲ್ಲೂಕುಗಳಲ್ಲಿನ ಕೃಷಿ, ಉದ್ದಿಮೆ, ಆರ್ಥಿಕ, ಸಾಮಾಜಿಕ, ಜನಸಂಖ್ಯೆ ಹೀಗೆ ಐದು ವಲಯಗಳಲ್ಲಿ 35 ಸೂಚಕಗಳನ್ನು ಬಳಸಿ ಅಧ್ಯಯನ ನಡೆಸಿ 2002ರ ಜೂನ್‌ನಲ್ಲಿ ಸರ್ಕಾರಕ್ಕೆ ವರದಿ ನೀಡಿತ್ತು. ಆ ಸಮಿತಿಯು 176 ತಾಲ್ಲೂಕುಗಳ ಪೈಕಿ 114 ತಾಲ್ಲೂಕುಗಳು ಅಭಿವೃದ್ಧಿಯಲ್ಲಿ ಹಿಂದುಳಿದಿರುವುದನ್ನು ಗುರುತಿಸಿತ್ತು. ಅವುಗಳಲ್ಲಿ ಅತ್ಯಂತ ಹಿಂದುಳಿದ 39, ಅತೀ ಹಿಂದುಳಿದ 40, ಹಿಂದುಳಿದ 35 ತಾಲ್ಲೂಕುಗಳಾಗಿದ್ದವು. ಈಗ ತಾಲ್ಲೂಕುಗಳ ಒಟ್ಟು ಸಂಖ್ಯೆ 240 ಆಗಿದೆ. ಈ ಪೈಕಿ, ನಾಲ್ಕು ತಾಲ್ಲೂಕುಗಳು ಇನ್ನೂ ರಚನೆ ಆಗಿಲ್ಲ.

ನಂಜುಂಡಪ್ಪ ವರದಿಯ ಶಿಫಾರಸಿನ ಅನ್ವಯ ರಾಜ್ಯದಲ್ಲಿರುವ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ 2007–08ರಿಂದ 2024–25ನೇ ಸಾಲಿನವರೆಗೆ 18 ವರ್ಷಗಳಲ್ಲಿ ಒಟ್ಟಾರೆ 48,866.49 ಕೋಟಿ ನಿಗದಿಪಡಿಸಿ, ₹40,159.42 ಕೋಟಿಯನ್ನು ಸರ್ಕಾರ ಬಿಡುಗಡೆ ಮಾಡಿದೆ. ಅದರಲ್ಲಿ ₹36,866.56 ಕೋಟಿ ವೆಚ್ಚ ಮಾಡಲಾಗಿದೆ. ಈ ಮೊತ್ತದಲ್ಲಿ ಶೇ 60ರಷ್ಟು ಅನುದಾನವನ್ನು ಉತ್ತರ ಕರ್ನಾಟಕ ಭಾಗದ ತಾಲ್ಲೂಕುಗಳಲ್ಲಿ ವಿವಿಧ ಅಭಿವೃದ್ಧಿ ಚಟುವಟಿಕೆಗಳಿಗೆ ಬಳಸಲಾಗಿದೆ.

ದೊಡ್ಡ ಮೊತ್ತದ ಅನುದಾನ ವೆಚ್ಚ ಮಾಡಿದರೂ ರಾಜ್ಯದಲ್ಲಿ ಉತ್ತರ– ದಕ್ಷಿಣ ಭಾಗದಲ್ಲಿನ ಪ್ರಾದೇಶಿಕ ಅಸಮತೋಲನ ನಿವಾರಿಸಲು ಸಾಧ್ಯವಾಗಿಲ್ಲ. ಅಲ್ಲದೆ, ನಂಜುಂಡಪ್ಪ ವರದಿ 25 ವರ್ಷಗಳಷ್ಟು ಹಳೆಯದಾಗಿದೆ. ಇದನ್ನು ಅರಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 2023ರ ಡಿ. 15ರಂದು ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಅಧಿವೇಶನದಲ್ಲಿ, ಆಗ ಇದ್ದ 240 ತಾಲ್ಲೂಕುಗಳ ಹಿಂದುಳಿದಿರುವಿಕೆಯನ್ನು ಅಧ್ಯಯನ ಮಾಡಲು ಉನ್ನತಮಟ್ಟ ಸಮಿತಿ ರಚಿಸಲಾಗುವುದು ಎಂದು ಘೋಷಿಸಿದ್ದರು.

'ಕಳೆದ 24 ವರ್ಷಗಳಲ್ಲಿ ನಂಜುಂಡಪ್ಪ ವರದಿ ಆಧರಿಸಿ ಹಿಂದುಳಿದ ಪ್ರದೇಶಗಳಲ್ಲಿನ ಅಸಮತೋಲನ ನಿವಾರಿಸಲು ಬಹಳಷ್ಟು ಯೋಜನೆಗಳನ್ನು ರೂಪಿಸಿ ಬಂಡವಾಳ ಹೂಡಿಕೆ ಮಾಡಲಾಗಿದೆ. ಇದರಿಂದ ಆಗಿರುವ ಬದಲಾವಣೆ ಮತ್ತು ಪರಿಣಾಮ ಗಳನ್ನು ಅಧ್ಯಯನ ಮಾಡಲು ಪ್ರಸಕ್ತ ಸಾಲಿನಲ್ಲಿ ಉನ್ನತಾಧಿಕಾರ ಸಮಿತಿ ರಚಿಸಲಾಗುವುದು' ಎಂದು 2024–25ನೇ ಸಾಲಿನ ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿ ಘೋಷಿಸಿದ್ದರು. ಅದರಂತೆ 2024ರ ಮಾರ್ಚ್ 16ರಂದು ಆರ್ಥಿಕ ತಜ್ಞ ಪ್ರೊ. ಎಂ. ಗೋವಿಂದ ರಾವ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಈ ಸಮಿತಿಯು ಪ್ರಾದೇಶಿಕ ಅಸಮತೋಲನೆ ನಿವಾರಣೆಗೆ ಸಂಬಂಧಿಸಿದಂತೆ ಈಗಾಗಲೇ ಸಚಿವರು, ಶಾಸಕರು, ಕೆಕೆಆರ್‌ಡಿಬಿ ಅಧ್ಯಕ್ಷರು, ಸಂಘ–ಸಂಸ್ಥೆಗಳು, ಕೈಗಾರಿಕೋದ್ಯಮಿಗಳೊಂದಿಗೆ ಚರ್ಚಿಸಿ ಸಂವಾದ ನಡೆಸಿ, ಮಾಹಿತಿಗಳನ್ನು, ಅಭಿಪ್ರಾಯಗಳನ್ನು ಕ್ರೋಡೀಕರಿಸಿದೆ. ಸಮಿತಿಯು ವರದಿಯ ಕರಡು ಸಿದ್ಧಪಡಿಸಿದ್ದು, ಶೀಘ್ರದಲ್ಲಿ ಮುಖ್ಯಮಂತ್ರಿಗೆ ಸಲ್ಲಿಸಲು ತಯಾರಿ ನಡೆಸಿದೆ.

ಇಂದಿನಿಂದ ಬೆಳಗಾವಿ ಅಧಿವೇಶನ

ಒಂದನೇ ಪುಟದಿಂದ...

ಅಲ್ಲದೇ, ಇಡೀ ಅಧಿವೇಶನವನ್ನು ಉತ್ತರಕರ್ನಾಟಕ ಭಾಗದ ಸಮಸ್ಯೆಗಳ ಕೇಂದ್ರಿತವಾಗಿ ನಡೆಸುವ ಮೂಲಕ ವಿರೋಧಪಕ್ಷಗಳನ್ನು ಆ ವಿಷಯಕ್ಕಷ್ಟೇ ಕಟ್ಟಿ ಹಾಕಲು ಕಾಂಗ್ರೆಸ್ ಸನ್ನದ್ಧವಾಗಿದೆ. ಆದ ಕಾರಣ ಅಧಿವೇಶನದ ಮೊದಲ ವಾರವೇ ಉತ್ತರ ಕರ್ನಾಟಕದ ಕುರಿತಾದ ವಿಷಯವನ್ನೇ ಚರ್ಚೆಗೆ ಕೈಗೆತ್ತಿಕೊಳ್ಳಲು ವೇದಿಕೆ ಸಿದ್ಧಪಡಿಸಲಾಗಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಸದ್ಯಕ್ಕೆ ಒಂದಾಗಿರುವುದರಿಂದ ಅವಿಶ್ವಾಸ ನಿಲುವಳಿ ಮಂಡಿಸುವ ಬಗ್ಗೆ ಬಿಜೆಪಿ ಮರು ವಿಮರ್ಶೆ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಕಬ್ಬು ಮತ್ತು ಮೆಕ್ಕೆ ಜೋಳ ಬೆಳೆಗಾರರ ಸಮಸ್ಯೆ ಕುರಿತ ವಿಷಯವನ್ನು ವಿರೋಧ ಪಕ್ಷಗಳು ಕೈಗೆತ್ತಿಕೊಳ್ಳಲಿದ್ದು, ಅದಕ್ಕೆ ಮುನ್ನವೇ ರೈತರ ಸಂಕಷ್ಟವನ್ನು ಬಗೆಹರಿಸಲು ಸರ್ಕಾರ ಮುಂದಾಗಿದೆ. ಮುಖ್ಯವಾಗಿ ಮೆಕ್ಕೆ ಜೋಳಕ್ಕೆ ಸಂಬಂಧಿಸಿದಂತೆ ಪ್ರತಿ ರೈತರಿಂದ ಕ್ವಿಂಟಲ್‌ಗೆ ₹2,400 ರಂತೆ ಎಕರೆಗೆ ಒಬ್ಬ ರೈತನಿಂದ ಗರಿಷ್ಠ 50 ಕ್ವಿಂಟಲ್ ಮೆಕ್ಕೆ ಜೋಳ ಖರೀದಿಸುವ ಸಂಬಂಧ ಸರ್ಕಾರ ಭಾನುವಾರವೇ ಆದೇಶ ಹೊರಡಿಸಿದೆ. ಆದರೆ, ರೈತರ ಸಮಸ್ಯೆಯನ್ನು ಪ್ರಧಾನವಾಗಿ ಬಿಂಬಿಸಲು ಉದ್ದೇಶಿಸಿರುವ ಬಿಜೆಪಿ ಬೆಳಗಾವಿಯಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ಮತ್ತು ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಮಳೆ ಮತ್ತು ಪ್ರವಾಹದಿಂದ ಉಂಟಾದ ಬೆಳೆ ನಷ್ಟಕ್ಕೆ ಸರಿಯಾಗಿ ಪರಿಹಾರ ನೀಡಿಲ್ಲ ಎಂದು ಆರೋಪಿಸಿ ಬಿಜೆಪಿ–ಜೆಡಿಎಸ್ ಸರ್ಕಾರದ ಮೇಲೆ ಮುಗಿ ಬೀಳಲು ಸಿದ್ಧತೆ ನಡೆಸಿವೆ. ಆದರೆ, ಕೇಂದ್ರ ಸರ್ಕಾರ ರಾಜ್ಯದ ಪಾಲಿನ ಹಣವನ್ನೇ ನೀಡುತ್ತಿಲ್ಲ, ತಾರತಮ್ಯ ಧೋರಣೆ ತೋರಿದೆ ಎಂದು ಪ್ರತ್ಯಸ್ತ್ರ ಹೂಡಲು ಸರ್ಕಾರ ಸಿದ್ಧವಾಗಿದೆ.

ಕೃಷ್ಣಾ ಮೇಲ್ದಂಡೆ, ಭದ್ರಾ ಮೇಲ್ದಂಡೆ, ಮಹದಾಯಿ, ಮೇಕೆದಾಟು ಸೇರಿ ನೀರಾವರಿಯ ವಿವಿಧ ಯೋಜನೆಗಳಿಗೆ ಸಂಬಂಧಿಸಿದ ವಿಷಯಗಳು ಪ್ರಸ್ತಾಪವಾಗಲಿವೆ.

ಸಿದ್ದರಾಮಯ್ಯ ಇತ್ತೀಚೆಗೆ ಡಿ.ಕೆ.ಶಿವಕುಮಾರ್ ಅವರ ಜತೆ ಉಪಾಹಾರ ಕೂಟದಲ್ಲಿ ಭಾಗವಹಿಸಿದ್ದಾಗ ₹43 ಲಕ್ಷ ಮೌಲ್ಯದ ಐಷಾರಾಮಿ ರೋಸ್ ಗೋಲ್ಡ್ ಸ್ಯಾಂಟೋಸ್ ಡಿ ಕಾರ್ಟಿಯರ್ ಕೈಗಡಿಯಾರ ಧರಿಸಿದ್ದು ವ್ಯಾಪಕ ಚರ್ಚೆ, ಟೀಕೆ–ಟಿಪ್ಪಣಿಗೆಗಳಿಗೆ ಕಾರಣವಾಗಿತ್ತು. ಇದು ಕೂಡ ಉಭಯ ಸದನಗಳಲ್ಲಿ ಪ್ರಸ್ತಾಪವಾಗುವ ಸಾಧ್ಯತೆ ಇದೆ.

ಈ ಬಾರಿ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆಯೂ ಸೇರಿ ಸುಮಾರು 30 ಮಸೂದೆಗಳು ಮಂಡನೆಯಾಗಲಿವೆ.

ಈ ಅಧಿವೇಶನದಲ್ಲಿ ಒಗ್ಗಟ್ಟಿನಿಂದ ಹೋರಾಟ ನಡೆಸಲು ಬಿಜೆಪಿ ಮತ್ತು ಜೆಡಿಎಸ್ ತೀರ್ಮಾನಿಸಿದ್ದು, ಸದನದೊಳಗೆ ಜಂಟಿ ಹೋರಾಟ ಹೇಗೆ ನಡೆಸಬೇಕು ಎಂಬುದರ ಕುರಿತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ವಿರೋಧ ಪಕ್ಷದ ನಾಯಕ ಆರ್. ಅಶೋಕ ನೇತೃತ್ವದಲ್ಲಿ ಸಮಾಲೋಚನೆ ಸಭೆಯನ್ನೂ ನಡೆಸಲಾಗಿದೆ.

ವಿಪಕ್ಷಗಳಿಗೆ ಪೊಲೀಸರ ಅಪರಾಧ ಅಸ್ತ್ರ

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದ್ದು, ಭ್ರಷ್ಟಾಚಾರವೂ ಹೆಚ್ಚಾಗಿದೆ' ಎಂದು ಸರ್ಕಾರವನ್ನು ಇಕ್ಕಟಿಗೆ ಸಿಲುಕಿಸಲು ವಿರೋಧ ಪಕ್ಷಗಳು ಸಿದ್ಧತೆ ನಡೆಸಿವೆ.

ರಾಜ್ಯದ ಜೈಲುಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳ ವಿಡಿಯೊ ತುಣುಕುಗಳ ದೃಶ್ಯಾವಳಿ ಸೋರಿಕೆ ಪ್ರಕರಣ ಸರ್ಕಾರಕ್ಕೆ ಮುಜುಗರ ಉಂಟು ಮಾಡಿತ್ತು. ಅಲ್ಲದೇ, ಪೊಲೀಸರೇ ಹಲವು ಅಪರಾಧ ಕೃತ್ಯಗಳಲ್ಲಿ ತೊಡಗುವ ಮೂಲಕ ಇಲಾಖೆಗೆ ಕಳಂಕ ತಂದಿರುವ ಪ್ರಕರಣಗಳು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲಿದೆ.

ದಾವಣಗೆರೆಯಲ್ಲಿ ಪೊಲೀಸರಿಂದ ಆಭರಣ ತಯಾರಕರೊಬ್ಬರಿಂದ ₹7.5 ಲಕ್ಷ ಚಿನ್ನಾಭರಣ ದರೋಡೆ, ಬಳ್ಳಾರಿಯಲ್ಲಿ ಪೊಲೀಸರಿಂದಲೇ 438.89 ಲಕ್ಷ ಹಣ, ಆಭರಣ ದರೋಡೆ, ಬಳ್ಳಾರಿಯಲ್ಲಿ ಕೌಟುಂಬಿಕ ಸಮಸ್ಯೆ ಹೇಳಿಕೊಂಡು ಬಂದ ಮಹಿಳೆಯ ಮೇಲೆ ಪೊಲೀಸರೇ ಅತ್ಯಾಚಾರ ನಡೆಸಿದ್ದು, ದಕ್ಷಿಣಕನ್ನಡ ಜಿಲ್ಲೆಯ ಮೂಡಬಿದಿರೆಯಲ್ಲಿ ದೂರು ನೀಡಲು ಬಂದ ಮಹಿಳೆಯ ಮೊಬೈಲ್‌ಗೆ ಕಾನ್‌ಸ್ಟೇಬಲ್ ಅಶ್ಲೀಲವಾಗಿ ಸಂದೇಶ ಕಳುಹಿಸಿದ ಘಟನೆಯೂ ಸೇರಿ ಇದೇ ಮಾದರಿಯ ಹಲವು ಘಟನೆಗಳು ನಡೆದಿವೆ.


ಅಧಿಕಾರಿಗಳ ಪೋಸ್ಟಿಂಗ್‌ನಲ್ಲೂ ಲಂಚ ಪಡೆಯಲಾಗುತ್ತಿದೆ ಎಂಬ ಆರೋಪವೂ ಇಲಾಖೆಯ ವಲಯದಲ್ಲಿ ದಟ್ಟವಾಗಿದೆ. ಆದರೆ ಗೃಹ ಸಚಿವ ಜಿ.ಪರಮೇಶ್ವರ ಅವರು ಈ ಆರೋಪವನ್ನು ತಳ್ಳಿ ಹಾಕಿದ್ದಾರೆ. ಈ ಎಲ್ಲ ಪ್ರಕರಣಗಳನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲಿವೆ.

'ಭಗವದ್ಗೀತೆ ಅಪ್ರಸ್ತುತ ಎಂದಿದ್ದ ಎಚ್.ಡಿ.ಕುಮಾರಸ್ವಾಮಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಗವದ್ಗೀತೆ ಕಲಿಯುವುದರಿಂದ ಜನರಿಗೆ ಉಪಯೋಗವಾಗುತ್ತಾ ಎಂದು ಹಿಂದೆ ಕೇಳಿದ್ದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಈಗ ಶಾಲೆಗಳಲ್ಲಿ ಭಗವದ್ಗೀತೆ ಕಲಿಸಬೇಕು ಎಂದು ಪತ್ರ ಬರೆದಿರುವುದು ಅವರು ಸೈದ್ಧಾಂತಿಕವಾಗಿ ಅಧಃಪತನ ಹೊಂದಿರುವುದಕ್ಕೆ ಸಾಕ್ಷಿ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದರು.

ಭಗವದ್ಗೀತೆಯ ಅಪ್ರಸ್ತುತತೆಯ ಬಗ್ಗೆ ಮತ್ತು ಸರ್ಕಾರವು ಹೊಂದಿರಬೇಕಾದ ಜವಾಬ್ದಾರಿಗಳ ಬಗ್ಗೆ ಕುಮಾರಸ್ವಾಮಿ ಮಾತನಾಡಿದ್ದರು. ಈಗ ಕೋಮುವಾದಿ ಆರ್‌ಎಸ್‌ಎಸ್ ಅನ್ನು ಬೆಂಬಲಿಸಲು ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ ಎಂದು ಟೀಕಿಸಿದರು.



ಎಚ್.ಸಿ. ಮಹದೇವಪ್ಪ

'ಮಕ್ಕಳ ತಲೆಗೆ ಕೇವಲ ಧಾರ್ಮಿಕತೆ ತುಂಬುವುದನ್ನು ಬಿಟ್ಟು ಒಂದಷ್ಟು ವೈಚಾರಿಕ, ವೈಜ್ಞಾನಿಕ ಮತ್ತು ಸಮಾನತೆಯ ಜ್ಞಾನವನ್ನು ತುಂಬುವ ಕೆಲಸ ಮಾಡಿ. ನಿಮ್ಮ ಕಾರಿನಲ್ಲಿ ಇರುವ ಪುಸ್ತಕವನ್ನು ಪೂರ್ತಿ ಓದಿ ಬಿಡಿ' ಎಂದು ಸಲಹೆ ನೀಡಿದ್ದಾರೆ.

'ಸೈದ್ಧಾಂತಿಕವಾಗಿ ಬಹಳಷ್ಟು ಗೊಂದಲದಲ್ಲಿ ಇರುವ ಕುಮಾರಸ್ವಾಮಿ ಅವರು ಭಗವದ್ಗೀತೆಯ ಹಿಂದೆ ಬಿದ್ದು ಮಕ್ಕಳ ಮನಸ್ಸಿಂದ ಪ್ರಜಾಸತ್ತಾತ್ಮಕ ತಿಳಿವಳಿಕೆಯನ್ನು ದೂರ ಮಾಡಲು ಪ್ರಯತ್ನಿಸುತ್ತಿದ್ದಾರೆ. ಇದೊಂದು ಅಪಾಯಕಾರಿ ಹೇಳಿಕೆಯಾಗಿದ್ದು, ಇದನ್ನು ತೀವ್ರವಾಗಿ ಖಂಡಿಸುತ್ತೇನೆ' ಎಂದು ಹೇಳಿದರು.

'ಸಂವಿಧಾನದ ಬಲದಿಂದ ಸಚಿವರಾಗಿರುವ ಕುಮಾರಸ್ವಾಮಿ ಅವರು ಎಲ್ಲರಿಗೂ ಸಂವಿಧಾನ ಕಲಿಸಿ ಎಂದು ಪತ್ರ ಬರೆದಿದ್ದರೆ ಅವರಿಗೂ, ಅವರ ಪಕ್ಷದ ಅಸ್ತಿತ್ವಕ್ಕೂ ಒಂದು ಅರ್ಥ ಇರುತ್ತಿತ್ತು' ಎಂದು ಹೇಳಿದ್ದಾರೆ.

'ಉತ್ತರ ಕರ್ನಾಟಕದ ಸಮಸ್ಯೆ ಬಗ್ಗೆ ಧ್ವನಿ ಎತ್ತಿ'

ಬೆಳಗಾವಿ: 'ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಜನಪ್ರತಿನಿಧಿಗಳು ರಾಜಕಾರಣ ಬದಿಗಿರಿಸಿ, ಈ ಭಾಗದ ಸಮಸ್ಯೆಗಳ ಬಗ್ಗೆ ಸದನದಲ್ಲಿ ಧ್ವನಿ ಎತ್ತಬೇಕು' ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾವು ಅಖಂಡ ಕರ್ನಾಟಕದ ಚಿಂತನೆಯಲ್ಲಿದ್ದು, ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ರಚಿಸಬೇಕು ಎಂಬ ಬೇಡಿಕೆಯೇ ಈಗ ಅಪ್ರಸ್ತುತ' ಎಂದರು.

ಹೂಗಳ ಹಬ್ಬಕ್ಕೆ ಜನಸಾಗರ

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್



ಬೆಂಗಳೂರಿನ ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನದಲ್ಲಿ ತೋಟಗಾರಿಕೆ ಇಲಾಖೆಯಿಂದ ಏರ್ಪಡಿಸಿದ್ದ ಹನ್ನೊಂದು ದಿನಗಳ 'ಹೂಗಳ ಹಬ್ಬ- 2025; ಕಲೆ ಸಂಸ್ಕೃತಿಯ ಫಲಪುಷ್ಪ ಪ್ರದರ್ಶನ'ದ ಅಂತಿಮ ದಿನವಾದ ಭಾನುವಾರ ಲಕ್ಷಾಂತರಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದರು. ವೈವಿಧ್ಯಮಯ ಪುಷ್ಪಗಳಲ್ಲಿ ಅರಳಿದ ಕಲಾಕೃತಿಗಳನ್ನು ಕಣ್ತುಂಬಿಕೊಂಡರು

ರೈತರಿಗೆ ತಲುಪದ ಪೂರ್ಣ ಪರಿಹಾರ

ಒಂದನೇ ಪುಟದಿಂದ...

ಎಸ್‌ಡಿಆರ್‌ಎಫ್/ ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ₹1,218.03 ಕೋಟಿ ಪರಿಹಾರದ ಜೊತೆಗೆ ರಾಜ್ಯ ಸರ್ಕಾರದಿಂದ ₹1,033.60 ಕೋಟಿ ಬೆಳೆ ಪರಿಹಾರ ವಿತರಿಸಲು ಈಚೆಗೆ ಚಾಲನೆ ನೀಡಲಾಗಿತ್ತು.

ಬ್ಯಾಂಕ್ ಖಾತೆಗಳ ಸಮಸ್ಯೆಯಿಂದ ಕೆಲ ರೈತರಿಗೆ ಇನ್ನೂ ಪರಿಹಾರ ಬಂದಿಲ್ಲ ಎಂದು ಕೃಷಿ ಇಲಾಖೆ ಅಧಿಕಾರಿಗಳು ಹೇಳುತ್ತಾರೆ. ಆದರೆ, ಈಗ ಪಾವತಿ ಆಗಿರುವ ಪ್ರಕರಣಗಳಲ್ಲೂ ರೈತರ ಖಾತೆಗಳಿಗೆ ಸರ್ಕಾರ ಘೋಷಿಸಿದಂತೆ ಪೂರ್ಣಪ್ರಮಾಣದಲ್ಲಿ ಪರಿಹಾರ ಜಮೆ ಆಗಿಲ್ಲ ಎಂಬುದು ರೈತ ಮುಖಂಡರ ಆರೋಪ.

ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ಪರಿಹಾರ ಮತ್ತು ರಾಜ್ಯ ಸರ್ಕಾರದ ವಿಶೇಷ ಪ್ಯಾಕೇಜ್ ಪರಿಹಾರದ ಹಣ ಪ್ರತ್ಯೇಕ ಕಂತಿನಲ್ಲಿ ರೈತರ ಖಾತೆಗಳಿಗೆ ಜಮಾ ಆಗಿದೆ. ಹೆಚ್ಚಿನ ರೈತರ ಖಾತೆಗಳಿಗೆ ಹೆಕ್ಟೇರ್‌ಗೆ ಎರಡೂ ಕಂತು ಸೇರಿ ₹6,800, ₹10,200, ₹13,600 ಪರಿಹಾರ ಜಮೆ ಆಗಿದೆ ಎಂದು ರೈತರು ದೂರಿದ್ದಾರೆ.

ರೈತರು ಪರಿಹಾರಕ್ಕಾಗಿ ಪಹಣಿ ಮತ್ತು ಬ್ಯಾಂಕ್ ಪಾಸ್‌ಬುಕ್ ಪ್ರತಿ ಹಿಡಿದು ಕೃಷಿ ಇಲಾಖೆ ಕಚೇರಿಗಳಿಗೆ ಎಡತಾಕುತ್ತಿದ್ದಾರೆ. 'ಎರಡು ಎಕರೆ ಮೆಕ್ಕೆಜೋಳ ಬೆಳೆ ಹಾನಿಯಾಗಿದೆ. ಪರಿಹಾರಕ್ಕಾಗಿ ಹಾದಿ ಕಾಯುತ್ತಿದ್ದೇವೆ' ಎಂದು ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಕೂಬಿಹಾಳದ ಪರಮೇಶ ಹುಬ್ಬಳ್ಳಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು. 'ನಮ್ಮದು 4 ಎಕರೆ 22 ಗುಂಟೆ ಜಮೀನು ಇದೆ. ಇನ್ನೂ ಪರಿಹಾರ ಬಂದಿಲ್ಲ' ಎಂದು ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ ಕಲಗುರ್ತಿಯ ಲಕ್ಕಪ್ಪ ಅಲವತ್ತುಕೊಂಡರು.


'ಬೆಳೆಹಾನಿ ಕುರಿತು ಜಂಟಿ ಸಮೀಕ್ಷೆ ನಡೆಸಿದ್ದು, ಬೆಳೆಹಾನಿ ಆಗಿರುವಷ್ಟಕ್ಕೆ ಮಾರ್ಗಸೂಚಿ ಅನ್ವಯ ಪರಿಹಾರ ಮೊತ್ತ ವಿತರಿಸಲಾಗುತ್ತಿದೆ' ಎಂದು ಕಲಬುರಗಿ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್, ಯಾದಗಿರಿ ಜಂಟಿ ಕೃಷಿ ನಿರ್ದೇಶಕ ರತೇಂದ್ರನಾಥ ಸೂಗೂರ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಅಳಲು

ಮುಖ್ಯಮಂತ್ರಿ ಮತ್ತು ಕೃಷಿ ಇಲಾಖೆಯ 'ಜೆಡಿಎಕಲಬುರಗಿ' ಫೇಸ್‌ಬುಕ್ ಪೇಜ್ ಮೂಲಕವು ಹಲವು ರೈತರು ಪರಿಹಾರ ಕುರಿತು ಅಳಲು ತೋಡಿಕೊಳ್ಳುತ್ತಿದ್ದಾರೆ.

ಸಂತೋಷ ಕನ್ನೊಳ್ಳಿ ಅವರು, 'ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನಲ್ಲಿ ಹೆಕ್ಟೇರ್ ನೀರಾವರಿ ಬೆಳೆಗೆ ಕೇವಲ ₹11,900 ಜಮಾ ಆಗಿದೆ' ಎಂದು ದೂರಿದ್ದಾರೆ. ಪವನ ನಿಂಬಾಳ ಅವರು, 'ಹೇಳಿದ್ದು ₹8,500. ಬಂದಿದ್ದು ₹5,500, ₹6,800 ಏಕೆ' ಎಂದು ಪ್ರಶ್ನಿಸಿದ್ದಾರೆ.

'ಯಾವ ಲೆಕ್ಕದಲ್ಲಿ ₹3,500 ಪರಿಹಾರ ಹಾಕಿದ್ದೀರಿ' ಎಂದು ಮಂಜು ರೊಟ್ಟಿ ಪ್ರಶ್ನಿಸಿದ್ದಾರೆ.



ವೈದ್ಯ ಕೋರ್ಸ್ ತೆರೆದ ಅವಕಾಶ

• ರಾಜೇಶ್ ರೈ ಚಟ್ಲ

ವೈದ್ಯಕೀಯ ಶಿಕ್ಷಣ ನೀಡುವಲ್ಲಿ ಕರ್ನಾಟಕವು ಇಡೀ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಇದನ್ನು ಪ್ರತಿಷ್ಠಿತ ಸಂಸ್ಥೆಗಳು ನಡೆಸಿದ ಸಮೀಕ್ಷೆ ಬಹಿರಂಗಪಡಿಸಿದೆ. ಇದಕ್ಕೆ ಕಾರಣ, ವೈದ್ಯಕೀಯ ಕಾಲೇಜುಗಳಲ್ಲಿ ನೀಡುತ್ತಿರುವ ಗುಣಮಟ್ಟದ ಶಿಕ್ಷಣ, ತರಬೇತಿ, ಸಂಶೋಧನೆ, ಆಧುನಿಕ ಸೌಲಭ್ಯ, ಅತ್ಯಾಧುನಿಕ ಮೂಲಸೌಕರ್ಯ.

2024-25ರಲ್ಲಿ ನಡೆದ ಸಮೀಕ್ಷೆಯೊಂದರ ಪ್ರಕಾರ, ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಪೈಕಿ, ಮಣಿಪಾಲದ ಕಸ್ತೂರಬಾ ಕಾಲೇಜು, ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರಿನ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಮಂಗಳೂರಿನ ಕಸ್ತೂರಬಾ ಮೆಡಿಕಲ್ ಕಾಲೇಜು, ಬೆಳಗಾವಿ ಮೆಡಿಕಲ್ ಕಾಲೇಜು, ಧಾರವಾಡದಲ್ಲಿರುವ ಎಸ್‌ಡಿಎಂ ಕಾಲೇಜು, ಮಂಗಳೂರಿನ ಕೆ.ಎಸ್. ಹೆಗಡೆ ಮೆಡಿಕಲ್ ಅಕಾಡೆಮಿ, ಬೆಳಗಾವಿಯ ಜವಾಹರಲಾಲ್ ನೆಹರೂ ಮೆಡಿಕಲ್ ಕಾಲೇಜು, ವಿಜಯಪುರದ ಬಿ.ಎಂ. ಪಾಟೀಲ್ ಮೆಡಿಕಲ್ ಕಾಲೇಜು, ಕಲಬುರಗಿಯ ಚಲ್ಮಡ ಆನಂದ ರಾವ್ ಮೆಡಿಕಲ್ ಕಾಲೇಜು ಮುಂಚೂಣಿಯಲ್ಲಿವೆ.

ಭಾರತದಲ್ಲಿ ತರಬೇತಿ ಪಡೆಯುವ ವೈದ್ಯರು ವಿದೇಶದಲ್ಲಿಯೂ ಹೆಚ್ಚು ಮನ್ನಣೆ ಗಳಿಸುತ್ತಿದ್ದಾರೆ. ಜಾಗತಿಕ ಮಟ್ಟದಲ್ಲಿ ಸುಮಾರು 3 ಕೋಟಿ ವೈದ್ಯರ ಕೊರತೆ ಇದೆ. ಗಟ್ಟಿಯಾದ ಶೈಕ್ಷಣಿಕ ಅಡಿಪಾಯ ಮತ್ತು ಇಂಗ್ಲಿಷ್ ಪ್ರಾವೀಣ್ಯ ಹೊಂದಿರುವ ಭಾರತೀಯ ವೈದ್ಯರು ವಿಶ್ವಮಟ್ಟದಲ್ಲಿ ಮನ್ನಣೆ ಗಳಿಸಿದ್ದಾರೆ. ಆದರೆ, ವೈದ್ಯಕೀಯ ವೃತ್ತಿಪರರ ಸಂಖ್ಯೆ ಇಲ್ಲಿ ಕಡಿಮೆಯಿದೆ.

ವೈದ್ಯಕೀಯ ಶಿಕ್ಷಣ ಆಕಾಂಕ್ಷಿಗಳ ಸಂಖ್ಯೆ ಮತ್ತು ಲಭ್ಯವಿರುವ ವೈದ್ಯಕೀಯ ಶಿಕ್ಷಣ ಸೀಟುಗಳ ನಡುವಿನ ಅಂತರ ಹೆಚ್ಚುತ್ತಿದೆ. ವೈದ್ಯಕೀಯ ಕೋರ್ಸ್ ಪ್ರವೇಶ ಪಡೆಯಲು ಪ್ರತಿವರ್ಷ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ದೇಶದಾದ್ಯಂತ ನಡೆಯುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಗೆ (ನೀಟ್) ಹಾಜರಾಗುತ್ತಾರೆ. ಆದರೆ, ಇದಕ್ಕೆ ಪ್ರತಿಯಾಗಿ 1.18 ಲಕ್ಷ ವೈದ್ಯಕೀಯ ಶಿಕ್ಷಣ ಸೀಟುಗಳು ಮಾತ್ರ ಲಭ್ಯವಿವೆ.


ವೈದ್ಯಕೀಯ ಶಿಕ್ಷಣ ಸೀಟುಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸುವಂತೆ ಹಲವು ವರ್ಷಗಳಿಂದ ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ (ಎನ್‌ಎಂಸಿ) ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸುತ್ತಲೇ ಬಂದಿದೆ. ವೈದ್ಯರಾಗಬೇಕೆಂಬ ಕನಸು ಹೊತ್ತು ನೀಟ್ ಬರೆದಿರುವ ವಿದ್ಯಾರ್ಥಿಗಳ ಆಗ್ರಹ ಮತ್ತು ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರದ ಈ ಮನವಿಗೆ ಎನ್‌ಎಂಸಿ ಈ ಬಾರಿ ಸ್ಪಂದಿಸಿದೆ. ಕರ್ನಾಟಕವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿರುವ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿಯಾಗಿ ವೈದ್ಯಕೀಯ ಪದವಿ (ಎಂಬಿಬಿಎಸ್) ಮತ್ತು ಸ್ನಾತಕೋತ್ತರ ವೈದ್ಯಕೀಯ ಪದವಿ (ಪಿ.ಜಿ) ಸೀಟುಗಳನ್ನು ಮಂಜೂರು ಮಾಡಿದೆ.

2025–26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 422 ಪಿ.ಜಿ ಸೀಟುಗಳು ಹೆಚ್ಚಳ ಆಗಿವೆ. ಈ ಬಾರಿ ಪಿ.ಜಿ ಹಂತದಲ್ಲಿ ವಿವಿಧ ವಿಷಯಗಳ ಒಟ್ಟು 572 ಸೀಟುಗಳನ್ನು ಮಂಜೂರು ಮಾಡುವಂತೆ ಎನ್‌ಎಂಸಿಗೆ ವೈದ್ಯಕೀಯ ಶಿಕ್ಷಣ ಇಲಾಖೆ ಮನವಿ ಸಲ್ಲಿಸಿತ್ತು. ಪ್ರಸಕ್ತ ವರ್ಷಕ್ಕೆ ಆರಂಭದಲ್ಲಿ ಒಟ್ಟು 1,694 ಪಿ.ಜಿ ಸೀಟುಗಳು ರಾಜ್ಯದಲ್ಲಿ ಲಭ್ಯ ಇದ್ದವು. ಈಗ ಹೆಚ್ಚುವರಿ ಸೀಟುಗಳೂ ಸೇರಿ ಮುಂದಿನ ಶೈಕ್ಷಣಿಕ ವರ್ಷಕ್ಕೆ ಒಟ್ಟು 2,116 ಸೀಟುಗಳು ಲಭ್ಯವಿರಲಿವೆ. ಪ್ರಿ-ಕ್ಲಿನಿಕಲ್, ಪ್ಯಾರಾ-ಕ್ಲಿನಿಕಲ್ ಮತ್ತು ಕ್ಲಿನಿಕಲ್ ವಿಭಾಗಗಳಲ್ಲಿ ಈ ಹೆಚ್ಚುವರಿ ಸೀಟುಗಳು ಹಂಚಿಕೆ ಆಗಿವೆ. ಪೀಡಿಯಾಟ್ರಿಕ್ಸ್, ಅನಸ್ತೇಷಿಯಾ, ಫೊರೆನ್ಸಿಕ್ ಮೆಡಿಸಿನ್, ಮೈಕ್ರೊಬಯಾಲಜಿ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ವಿಭಾಗಗಳಲ್ಲಿ ಹೆಚ್ಚುವರಿ ಸೀಟುಗಳು ಮಂಜೂರಾಗಿವೆ.

ಪ್ರಸಕ್ತ ಸಾಲಿಗೆ (2025-26) ಕರ್ನಾಟಕದ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿಯಾಗಿ 450 ಎಂಬಿಬಿಎಸ್ ಸೀಟುಗಳು, ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿಯಾಗಿ 1,100 ಎಂಬಿಬಿಎಸ್ ಸೀಟುಗಳು ಮಂಜೂರಾಗಿವೆ. ನೀಟ್ ಫಲಿತಾಂಶದ ನಂತರ ಪ್ರಕಟಿಸಿದ್ದ ಮೊದಲ ಸುತ್ತಿನ ಸೀಟು ಹಂಚಿಕೆಯಲ್ಲಿ 9,263 ಸೀಟುಗಳು ಲಭ್ಯವಿದ್ದವು. ಹೆಚ್ಚುವರಿ ಸೀಟುಗಳ ಕಾರಣದಿಂದ, ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ ಸೀಟುಗಳ ಒಟ್ಟು ಸಂಖ್ಯೆಯೂ ಏರಿಕೆ ಆಗಿದೆ.

ಪ್ರಸಕ್ತ ಸಾಲಿನಲ್ಲಿ ಆರಂಭಗೊಂಡ ಫಾರೂಕ್ ಅಕಾಡೆಮಿ ಆಫ್ ಮೆಡಿಕಲ್ ಎಜುಕೇಷನ್ ಹಾಸ್ಪಿಟಲ್ ಆ್ಯಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ಗೆ 100 ವೈದ್ಯಕೀಯ ಸೀಟುಗಳನ್ನು ಎನ್‌ಎಂಸಿ ಮಂಜೂರು ಮಾಡಿದೆ. ಅಲ್ಲದೆ, ಬಿಜಿಎಸ್ ವೈದ್ಯಕೀಯ ಕಾಲೇಜು (ನಗರೂರು), ದೇವನಹಳ್ಳಿಯಲ್ಲಿರುವ ಆಕಾಶ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆ್ಯಂಡ್ ರಿಸರ್ಚ್ ಸೆಂಟರ್, ತುಮಕೂರಿನಲ್ಲಿರುವ ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆ್ಯಂಡ್ ರಿಸರ್ಚ್ ಸೆಂಟರ್ ತಲಾ 100 ಹಾಗೂ ಡಾ. ಚಂದ್ರಮ್ಮ ದಯಾನಂದ ಸಾಗರ್, ಈಸ್ಟ್ ಪಾಯಿಂಟ್, ಜೆಜಿಎಂಎಂಎಂಸಿ (ಹುಬ್ಬಳ್ಳಿ), ಪಿಇಎಸ್, ಬಿ.ಎಂ. ಪಾಟೀಲ (ವಿಜಯಪುರ), ಶ್ರೀದೇವಿ ಮತ್ತು ಸಿದ್ಧಗಂಗಾ (ತುಮಕೂರು) ಹೀಗೆ ಒಟ್ಟು 14 ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ತಲಾ 50 ಸೀಟುಗಳು ಮಂಜೂರಾಗಿವೆ. ❖

ಇನ್ನಷ್ಟು ಕಾಲೇಜುಗಳ ಆರಂಭಕ್ಕೆ ಸಿದ್ಧತೆ



‘ರಾಜ್ಯದಲ್ಲಿ ಕಾರ್ಮಿಕರ ರಾಜ್ಯ ವಿಮಾ ನಿಗಮದ (ಇಎಸ್‌ಐಸಿ) ಎರಡು ಹಾಗೂ ಸರ್ಕಾರಿ ಸ್ವಾಮ್ಯದ 24 ವೈದ್ಯಕೀಯ ಕಾಲೇಜುಗಳಿವೆ. ಬಾಗಲಕೋಟೆ, ರಾಮನಗರ ಮತ್ತು ಕನಕಪುರದಲ್ಲಿ ಹೊಸದಾಗಿ ವೈದ್ಯಕೀಯ ಕಾಲೇಜುಗಳು ಆರಂಭವಾಗಲಿವೆ. ವೈದ್ಯಕೀಯ ಕಾಲೇಜು ಗಳಿಲ್ಲದ ಜಿಲ್ಲೆಗಳಲ್ಲಿ ಶೀಘ್ರದಲ್ಲೇ ಸಂಪೂರ್ಣ ಸುಸಜ್ಜಿತ ಸಂಸ್ಥೆಗಳನ್ನು ಆರಂಭಿಸುವ ಮೂಲಕ, ಆರ್ಥಿಕ ದುರ್ಬಲ ವರ್ಗಗಳ ಅರ್ಹ ವಿದ್ಯಾರ್ಥಿಗಳಿಗೆ ಸರ್ಕಾರಿ ವೈದ್ಯಕೀಯ ಸೀಟು ನೀಡುವುದು ಹಾಗೂ ಬಡ ರೋಗಿಗಳಿಗೆ ಉಚಿತ ಆರೋಗ್ಯ ಸೇವೆಯನ್ನು ನೀಡುವ ಉದ್ದೇಶದಿಂದ ಇನ್ನಷ್ಟು ಹೊಸ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ಸಿದ್ಧತೆ ನಡೆದಿದೆ.

ಡಾ. ಶರಣಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪಿಜಿ ಸೀಟು

26	1,694	2,116	422
ಸರ್ಕಾರಿ ಕಾಲೇಜುಗಳು	2024–25ರಲ್ಲಿ ಸೀಟು	2025–26ರಲ್ಲಿ ಸೀಟು	ಪ್ರಸಕ್ತ ಸಾಲಿಗೆ ಹೆಚ್ಚಳ

ರಾಜ್ಯದಲ್ಲಿರುವ ಎಂಬಿಬಿಎಸ್ ಸೀಟು

ವಿಧ	ಒಟ್ಟು	2024–25ರಲ್ಲಿ ಸೀಟು	2025–26ರಲ್ಲಿ ಸೀಟು	ಹೆಚ್ಚಳ
ಖಾಸಗಿ	48	8,595	9,695	1,100
ಸರ್ಕಾರಿ	24	3,800	4,250	450

ಕ್ರಮಬದ್ಧ ಹಂಚಿಕೆ



ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (ಕೆಇಎ) ವೈದ್ಯಕೀಯ ಸೀಟುಗಳ ಹಂಚಿಕೆ ಕ್ರಮಬದ್ಧವಾಗಿ ನಡೆಯುತ್ತದೆ. ಪ್ರಸಕ್ತ ಸಾಲಿನ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ 4,007 ಸೀಟುಗಳು ಹಂಚಿಕೆಗೆ ಲಭ್ಯವಾಗಿವೆ. ಬೆಂಗಳೂರಿನ ಎಂವಿಜೆ, ಕಲಬುರಗಿಯ ಮಹದೇವಪ್ಪ ರಾಂಪುರೆ, ದಕ್ಷಿಣ ಕನ್ನಡ ಜಿಲ್ಲೆಯ ಕೆ. ವೆಂಕಟರಮಣ ಗೌಡ ಮತ್ತು ಮಂಗಳೂರಿನ ಶ್ರೀನಿವಾಸ ವೈದ್ಯಕೀಯ ಕಾಲೇಜುಗಳಿಗೆ ತಲಾ 50 ಸೀಟುಗಳನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗ ಹೆಚ್ಚುವರಿಯಾಗಿ ಮಂಜೂರು ಮಾಡಿದೆ. ಮೂರನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆರಂಭವಾದ ನಂತರ ಒಟ್ಟು ಒಂಬತ್ತು ಕಾಲೇಜುಗಳ 450 ಸೀಟುಗಳು ಹೆಚ್ಚುವರಿಯಾಗಿ ಲಭ್ಯವಾಗಿವೆ.

ಎಚ್.ಪ್ರಸನ್ನ, ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಶಿಪ್

ಬ್ಲಾಕ್‌ಚೇನ್ ಕೋರ್ಸ್ ಡೆವಲಪರ್ & ಇನ್‌ಸ್ಟ್ರಕ್ಟರ್: ಸೆಲ್ಫ್ ಕೋಡ್ ಅಕಾಡೆಮಿಯು ಬ್ಲಾಕ್‌ಚೇನ್ ಕೋರ್ಸ್ ಡೆವಲಪರ್ & ಇನ್‌ಸ್ಟ್ರಕ್ಟರ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಬ್ಲಾಕ್‌ಚೇನ್, ಇಥೇರಿಯಂ, ಇಂಗ್ಲಿಷ್‌ನಲ್ಲಿ ಸಂವಹನ ಮತ್ತು ಬೋಧನೆಯ ಜ್ಞಾನ ಇರುವ ವಿದ್ಯಾರ್ಥಿಗಳು ಡಿಸೆಂಬರ್ 25ರೊಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ಒಟ್ಟಾರೆ ₹ 20,000–₹ 30,000.
ಸಂಪರ್ಕ– https://shorturl.at/bYqj1.

ಬೆಂಗಳೂರು ಕೇಂದ್ರಿತ ಇಂಟರ್ನ್‌ಶಿಪ್

ವೆಬ್ ಡೆವಲಪ್‌ಮೆಂಟ್: 365ಬಿಲ್ಡ್ ಟೆಕ್ನಾಲಜೀಸ್ (ಐ) ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ವೆಬ್ ಡೆವಲಪ್‌ಮೆಂಟ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಬೂಟ್‌ಸ್ಟ್ರ್ಯಾಪ್, ಸಿಎಸ್‌ಎಸ್, ಎಚ್‌ಟಿಎಂಎಲ್, ಜಾವಾಸ್ಕ್ರಿಪ್ಟ್ ಮತ್ತು ರಿಯಾಕ್ಟ್ ಬಗ್ಗೆ ತಿಳಿದಿರುವ ವಿದ್ಯಾರ್ಥಿಗಳು ಡಿಸೆಂಬರ್ 25ರೊಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 14,000–₹ 16,000.
ಸಂಪರ್ಕ– https://shorturl.at/k2c5x.

ಫೈನಾನ್ಸ್ & ಅಕೌಂಟಿಂಗ್: ಫಿನ್ಸೊ ವೆಂಚರ್ಸ್ ಪ್ರೈವೇಟ್ ಲಿಮಿಡೆಟ್ ಸಂಸ್ಥೆಯು ಫೈನಾನ್ಸ್ ಮತ್ತು ಅಕೌಂಟಿಂಗ್‌ಗೆ ಸಂಬಂಧಿಸಿದ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಇಂಗ್ಲಿಷ್‌ನಲ್ಲಿ ಮಾತನಾಡುವ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಡಿಸೆಂಬರ್ 16ರೊಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 8,000, ಸಂಪರ್ಕ– https://shorturl.at/ZF4p0. ❖

ಇಂಗ್ಲಿಷ್ ಓಕೆ, ಕನ್ನಡ ಬರಲ್ಲ ಯಾಕೆ?



ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

• **ನನ್ನ ಮಗ ಕಾನ್ವೆಂಟ್‌ನಲ್ಲಿ ಐದನೇ ತರಗತಿ ಓದುತ್ತಿದ್ದಾನೆ. ಇಂಗ್ಲಿಷ್ ಬಹಳ ನಿರರ್ಗಳವಾಗಿ ಮಾತನಾಡುತ್ತಾನೆ. ಆಟ–ಪಾಠಗಳಲ್ಲಿ ಮುಂದಿದ್ದಾನೆ. ಆದರೆ, ಕನ್ನಡ ಮಾತನಾಡುವಾಗ ತೊದಲುತ್ತಾನೆ. ಇದರಿಂದ ಬಂಧು– ಬಳಗದ ವಲಯದಲ್ಲಿ ಮುಜುಗರ ಉಂಟಾಗುತ್ತದೆ. ಮನೆಯಲ್ಲಿ ಎಲ್ಲರೂ ಅಪ್ಪಟ ಕನ್ನಡವನ್ನೇ ಮಾತನಾಡಿದರೂ ಅವ ಯಾಕೆ ಹೀಗಾದ ಎನ್ನುವುದು ಅರ್ಥವಾಗುತ್ತಿಲ್ಲ. ಅವನಿಗೆ ಚಂದಕ್ಕೆ ಕನ್ನಡವನ್ನು ಕಲಿಸುವುದು ಹೇಗೆ ಎಂದು ಹೇಳುವಿರಾ?** –**ಆಶಾ ಅನಂತ,** ಬಾಳೆಬೈಲು

ತುಂಬಾ ಒಳ್ಳೆಯ ಪ್ರಶ್ನೆ. ಇಂದಿನ ಮೆಟ್ರೊ ನಗರಗಳ ಬಹುತೇಕ ಮನೆಗಳಲ್ಲಿನ ಸಾಮಾನ್ಯ ಸಮಸ್ಯೆ ಇದು. ಮಗುವಿಗೆ ಇಂಗ್ಲಿಷ್ ಪ್ರಭಾವ ಜಾಸ್ತಿಯಾಗಿರುವುದರಿಂದ ಕನ್ನಡದಲ್ಲಿ ಮಾತನಾಡಲು ಹಿಂಜರಿಯುವುದು ಸಹಜ. ಇದನ್ನು ದಂಡನೆ ಅಥವಾ ಬಲವಂತದಿಂದ ಸರಿಪಡಿಸಲಿಕ್ಕೆ ಸಾಧ್ಯವಿಲ್ಲ. ಮಗುವಿನಲ್ಲಿ ಕನ್ನಡದ ಬಗ್ಗೆ ಆಸಕ್ತಿ ಮೂಡಿಸಲು ಪ್ರಯತ್ನಿಸುವ ಮೂಲಕ ಹಾಗೂ ಅವನಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವ ಮೂಲಕ ಪರಿಹಾರವನ್ನು ಕಂಡುಕೊಳ್ಳಬಹುದು.

ಕಲಿಕೆಯ ವಿಷಯದಲ್ಲಿ ಮಕ್ಕಳು ಸಹಜವಾಗಿ ಮುಂದಿರುತ್ತಾರೆ. ನನ್ನ ಬಾಲ್ಯದಲ್ಲಿ ಆರೇಳು ತಿಂಗಳು ಗೋವಾದಲ್ಲಿದ್ದೆ. ಅಲ್ಲಿಂದ ವಾಪಸಾಗುವಷ್ಟರಲ್ಲಿ ನನಗೆ ಕನ್ನಡ ಮಾತನಾಡಲು ತಡಕಾಡುವಂತೆ ಆಗಿತ್ತು ಎನ್ನುವುದು ನೆನಪಿದೆ. ಅಷ್ಟರಮಟ್ಟಿಗೆ ನಾನು ಅಲ್ಲಿಯ ಮರಾಠಿ ಮಿಶ್ರಿತ ಕೊಂಕಣಿಯನ್ನು ಕಲಿತಿದ್ದೆ. ಅವಕಾಶವಿದ್ದಾಗ ಮಗು ಸಹಜವಾಗಿ ಒಂದೆರಡು, ಮೂರ್ನಾಲ್ಕು ಭಾಷೆಗಳಲ್ಲಿ ಮಾತನಾಡುವುದನ್ನು ಲೀಲಾಜಾಲವಾಗಿ ಕಲಿಯುವ ಸಾಧ್ಯತೆ ಇರುತ್ತದೆ. ನಗರದ ಅಪಾರ್ಟ್‌ಮೆಂಟುಗಳಲ್ಲಿ ವಾಸಿಸುವ ಮಕ್ಕಳಿಗೆ ಇಂಥ ಅವಕಾಶಗಳು ಹೆಚ್ಚಾಗಿರುವುದನ್ನು ಗಮನಿಸಬಹುದಾಗಿದೆ. ಹೆಚ್ಚು ಭಾಷೆಗಳನ್ನು ಕಲಿಯುವುದು ನಿಜಕ್ಕೂ ಹೆಚ್ಚು ಪ್ರಯೋಜನಕಾರಿ.

ಮಗ ಕನ್ನಡದಲ್ಲಿ ಮಾತನಾಡಲು ತೊದಲುವಾಗ ನೀವು ನಗಬೇಡಿ. ಕನ್ನಡದಲ್ಲಿಯೇ ಮಾತನಾಡಬೇಕು ಎಂದು ಗದರಿಸಬೇಡಿ. ಅವನ ಹಿಂಜರಿಕೆಯನ್ನು ಪ್ರೋತ್ಸಾಹಿಸಬೇಡಿ. ಅವನು ಕನ್ನಡದಲ್ಲಿ ನಿಧಾನವಾಗಿ, ಶಬ್ದಗಳನ್ನು ಹುಡುಕಿ, ಹೇಳುವಂತೆ ಮಾಡಿ. ಶಬ್ದಗಳ ಹುಡುಕಾಟಕ್ಕೆ ಅವನಿಗೆ ನೀವು ಸಹಾಯ ಮಾಡಬಹುದು. ನಿಮ್ಮ ಮಗ ಕನ್ನಡದಲ್ಲಿ ಮಾತನಾಡಲು ಪ್ರಯತ್ನಿಸಿದಾಗ ‘ಭೇಷ್, ಚೆನ್ನಾಗಿ ಮಾತನಾಡಿದೆ’ ಎಂದು ಪ್ರೋತ್ಸಾಹಿಸಿ. ಅವನ ಮಾತುಗಳಲ್ಲಿರುವ ತಪ್ಪನ್ನು ಸಾವಕಾಶವಾಗಿ ತಿದ್ದಿ. ❖

ವಿದ್ಯಾರ್ಥಿ ವೇತನ ಕೈಪಿಡಿ

ಇನ್‌ಲ್ಯಾಕ್ಸ್ ಫೆಲೋಷಿಪ್

ಇನ್‌ಲ್ಯಾಕ್ಸ್ ಶಿವದಾಸಾನಿ ಫೌಂಡೇಷನ್ ನೀಡುವ ಫೆಲೋಷಿಪ್ ಇದಾಗಿದೆ. ಸಾಮಾಜಿಕ ಬದಲಾವಣೆಗಾಗಿ ಚಿಂತನೆ ನಡೆಸಿ, ಪರ್ಯಾಯ ಮಾರ್ಗಗಳನ್ನು ಅನ್ವೇಷಿಸುತ್ತಿರುವ ಉತ್ಸಾಹಿಗಳಿಗೆ ಇದನ್ನು ನೀಡಲಾಗುತ್ತದೆ.

ಅರ್ಹತೆ: ಭಾರತದಲ್ಲಿ ವಾಸಿಸುತ್ತಿರುವ, 1990ರ ಜನವರಿ 1 ಅಥವಾ ಅದರ ನಂತರ ಜನಿಸಿದ ಭಾರತೀಯ ಪ್ರಜೆಗಳಿಗೆ ಮಾತ್ರ. ಅರ್ಜಿದಾರರು ಮಾನ್ಯತೆ ಪಡೆದ ಭಾರತೀಯ ಸಂಸ್ಥೆಯಿಂದ ಬ್ಯಾಚುಲರ್ ಪದವಿಯನ್ನು ಪಡೆದಿರಬೇಕು. ಪರ್ಯಾಯವಾಗಿ ಅವರು, ಸಂಬಂಧಿಸಿದ ಕೆಲಸದಲ್ಲಿ ಕನಿಷ್ಠ 3 ವರ್ಷದ ಅನುಭವ ಹೊಂದಿರಬೇಕು.

ಆರ್ಥಿಕ ನೆರವು: ತಿಂಗಳಿಗೆ ₹45,000ದವರೆಗೆ

ಅರ್ಜಿ ಸಲ್ಲಿಸಲು ಕೊನೇ ದಿನ: 31-12-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/IFSE8 ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಪ್ರಶ್ನೋತ್ತರ:–

26) ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ಕುರಿತು ಬರೆಯಿರಿ

ಉತ್ತರ: (.....ಹಿಂದಿನ ಸಂಚಿಕೆಯಿಂದ)

‘ಟಿಪ್ಪು ಭಾರತೀಯ ರಾಜರ ಒಕ್ಕೂಟವನ್ನು ತನ್ನಡೆಗೆ ಸೆಳೆಯಲು ಮಾಡುತ್ತಿದ್ದ ಪ್ರಯತ್ನಗಳು ಹಾಗೂ ತಮ್ಮ ಬದ್ಧ ವೈರಿಗಳಾದ ಫ್ರೆಂಚರೊಂದಿಗೆ ಟಿಪ್ಪು ಹೊಂದಿದ್ದ ಸಂಬಂಧಗಳು’ ವೆಲ್ಲೆಸ್ಲಿಯಲ್ಲಿ ಟಿಪ್ಪುವಿನ ವಿಚಾರದಲ್ಲಿ ಮತ್ತಷ್ಟು ದ್ವೇಷ ಭಾವನೆಗಳನ್ನು ಬೆಳೆಸಿದವು. ಟಿಪ್ಪು ಬ್ರಿಟಿಷರ ವಿರುದ್ಧವಾಗಿದ್ದ ಫ್ರೆಂಚರ ಸಹಕಾರ ಪಡೆಯಲು ಪ್ರಯತ್ನಿಸಿ ರಾಯಭಾರಿಯನ್ನು ಕಳುಹಿಸಿದ್ದು ಬ್ರಿಟಿಷರಿಗೆ ಅಸಮಾಧಾನವನ್ನು ತಂದಿತು. ಟಿಪ್ಪು ಮತ್ತು ಫ್ರೆಂಚರ ನಡುವಿನ ಸ್ನೇಹ ಮುಂದಕ್ಕೆ ತಮ್ಮ ಅಧಿಪತ್ಯಕ್ಕೆ ಮುಳುವಾಗಬಹುದೆಂಬ ಭಾವನೆಗಳು ಬ್ರಿಟಿಷರಲ್ಲಿ ಬೆಳೆಯಿತು. ಹೊಸ ಷರತ್ತಗಳನ್ನು ಒಳಗೊಂಡಿರುವ ಸಹಾಯಕ ಸೈನ್ಯ ಪದ್ಧತಿಯನ್ನು ಟಿಪ್ಪುವಿನ ಮೇಲೆ ಹೇರಲಾಯಿತು. ಆದರೆ ಟಿಪ್ಪು ಅಮಾನವೀಯ ಸಹಾಯಕ ಸೈನ್ಯ ಪದ್ಧತಿಯನ್ನು ಅದರ ಷರತ್ತುಗಳನ್ನು ಒಪ್ಪಿಕೊಳ್ಳಲು ನಿರಾಕರಿಸಿದನು. ಇದರಿಂದಾಗಿ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧವು ಪ್ರಾರಂಭವಾಯಿತು. 1799ರಲ್ಲಿ ಯುದ್ಧ ಆರಂಭವಾಯಿತು. ಅಭೇದ್ಯವಾದ ಕೋಟೆಯನ್ನು ಬ್ರಿಟಿಷರು ಭೇದಿಸಿದರು. ಎರಡೂ ಸೈನ್ಯಗಳು ವೀರಾವೇಶದಿಂದ ಕಾದಾಡಿದವು. ಟಿಪ್ಪು ತನ್ನ ಸೈನ್ಯವನ್ನು ಹುರಿದುಂಬಿಸುತ್ತಾ ಹೋರಾಡಿ 1799ರಲ್ಲಿ ಹತನಾದನು.

27) ಯಾವ ವರ್ಷ ಬ್ರಿಟಿಷ್ ಸರ್ಕಾರವು ಮೈಸೂರಿನ ಸಿಂಹಾಸನವನ್ನು ಮೈಸೂರಿನ ಅರಸರಿಗೆ(ಒಡೆಯರಿಗೆ) ಬಿಟ್ಟುಕೊಟ್ಟರು?

ಉತ್ತರ:– ಬ್ರಿಟಿಷ್ ಸರಕಾರವು 1881ರಲ್ಲಿ ಮೈಸೂರಿನ ಸಿಂಹಾಸನವನ್ನು ಹತ್ತನೆಯ ಚಾಮರಾಜೇಂದ್ರ ಒಡೆಯರಿಗೆ ವಹಿಸಿತು

26) **ಮೈಸೂರಿನ ಸಿಂಹಾಸನವನ್ನು ಅರಸರಿಗೆ ಬಿಟ್ಟುಕೊಟ್ಟಾಗ ದಿವಾನರಾಗಿ ಯಾರನ್ನು ನೇಮಿಸಲಾಗಿತ್ತು?**

ಉತ್ತರ:– ಸಿ. ರಂಗಾಚಾರು

27) ಹತ್ತನೆಯ ಚಾಮರಾಜೇಂದ್ರ ಒಡೆಯರ ಕಾಲದಲ್ಲಿ ಆದ ಎರಡು ಅಭಿವೃದ್ಧಿ ಕಾರ್ಯಗಳನ್ನು ಬರೆಯಿರಿ

ಉತ್ತರ:– ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಿಸಿದರು. 1881ರಲ್ಲಿ ಕೋಲಾರದ ಚಿನ್ನದ ಗಣಿ, 1882ರಲ್ಲಿ ಬೆಂಗಳೂರು – ಮೈಸೂರು ರೈಲು ಮಾರ್ಗವನ್ನು ಆರಂಭಿಸಿದರು

28) **ದಿವಾನ್ ರಂಗಾಚಾರ್ಲು ಕಾಲದಲ್ಲಿ ಮೈಸೂರಿನಲ್ಲಿ ಆದ ಒಂದೆರಡು ಅಭಿವೃದ್ಧಿ ಕಾರ್ಯಗಳನ್ನು ತಿಳಿಸಿ**

ಉತ್ತರ:– ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಿಸಿದರು. 1881ರಲ್ಲಿ ಕೋಲಾರದ ಚಿನ್ನದಗಣಿ, 1882ರಲ್ಲಿ ಬೆಂಗಳೂರು–ಮೈಸೂರು ರೈಲು ಮಾರ್ಗವನ್ನು ಆರಂಭಿಸಿದರು

29) **ದಿವಾನ್ ಕೆ. ಶೇಷಾದ್ರಿ ಅಯ್ಯರ್ ಕಾಲದಲ್ಲಿ ಮೈಸೂರಿನಲ್ಲಿ ಆದ ಅಭಿವೃದ್ಧಿ ಕಾರ್ಯಗಳನ್ನು ಬರೆಯಿರಿ**

ಉತ್ತರ:– ರಾಜ್ಯದ ವಿವಿಧ ಅಧಿಕಾರ ಸ್ಥಾನಗಳಲ್ಲಿ ಕೆಲಸ ಮಾಡಿದ ಇವರಿಗೆ ದೇಶದ ಸಮಸ್ತ ಸಮಸ್ಯೆಗಳ ಅರಿವು ಇದ್ದಿತು. ಅವರು ದೇಶದ ಹಣಕಾಸಿನ ಸ್ಥಿತಿಯನ್ನು ಉತ್ತಮಗೊಳಿಸಿದರು. ಹಲವು ಹೊಸ ರೈಲುಮಾರ್ಗಗಳ ರಚನೆಗೆ ಕಾರಣೀಕರ್ತರಾದರು. ದೇಶದ ಆಡಳಿತ ಸೇವೆಗಾಗಿ ಪ್ರತಿಭಾವಂತ ಯುವಕರನ್ನು ಆಯ್ಕೆಮಾಡಲು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಆರಂಭಿಸಿದರು. ನೀರಾವರಿ ವ್ಯವಸಾಯಕ್ಕೆ ಹೆಚ್ಚಿನ ಗಮನ ಕೊಟ್ಟರು. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಗಮನ ನೀಡಲು ಮೈಸೂರಿನಲ್ಲಿ ಮಹಾರಾಣಿ ಬಾಲಿಕಾ ಪ್ರೌಢಶಾಲೆಯನ್ನು ಸ್ಥಾಪಿಸಿದರು.

30) **ಮೈಸೂರಿಗೆ ಬಂದಿದ್ದ ವಿವೇಕಾನಂದರಿಗೆ ಆಶ್ರಯ ನೀಡಿ ಅವರು ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕೆ ಹೋಗಲು ಸಹಾಯ ಮಾಡಿದವರು ಯಾರು?**

ಉತ್ತರ:– ಚಾಮರಾಜೇಂದ್ರ ಒಡೆಯರ್

31) “ಅಭಿನವ ಕಾಳಿದಾಸ” ಯಾರನ್ನು ಕರೆಯಲಾಗಿತ್ತು?

ಉತ್ತರ:– ಬಸಪ್ಪಶಾಸ್ತ್ರಿ

32) ಮೈಸೂರು ರಾಜ್ಯಗೀತೆ “ಕಾಯೋಶ್ರೀ ಗೌರಿ”ಯನ್ನು ರಚಿಸಿದವರು ಯಾರು?

ಉತ್ತರ:– ಬಸಪ್ಪಶಾಸ್ತ್ರಿ

33) ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆ ಏನು?

ಉತ್ತರ:– ಇವರ ಕಾಲದಲ್ಲಿ ಅಭಿವೃದ್ಧಿ ಕಾರ್ಯವು ಹೆಚ್ಚಿತು. ಚಿನ್ನದ ಗಣಿ ಸುಧಾರಣೆ, ಕಾಲೇಜು ಸ್ಥಾಪನೆ, ಮಾರಿ ಕಣಿವೆ ಜಲಾಶಯ ನಿರ್ಮಾಣ, ರೈಲು ಮಾರ್ಗ ನಿರ್ಮಾಣ, ಆಸ್ಪತ್ರೆ ಸ್ಥಾಪನೆ ಹಾಗೂ ಕಾವೇರಿ ಜಲಪಾತವನ್ನು ಉಪಯೋಗಿಸಿಕೊಂಡು ಶಿವನಸಮುದ್ರದಲ್ಲಿ ಜಲ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಕಾರ್ಯಗಳು ಆರಂಭವಾದವು. ಈ ವಿದ್ಯುತ್ ಕೇಂದ್ರದಿಂದ ಕೋಲಾರದ ಚಿನ್ನದ ಗಣಿಗೂ ನಂತರ ಬೆಂಗಳೂರಿಗೂ ವಿದ್ಯುತ್ ಸರಬರಾಜು ಮಾಡಲಾಯಿತು. ಭಾರತದಲ್ಲಿ ವಿದ್ಯುತ್ ಪಡೆದ ನಗರಗಳಲ್ಲಿ ಬೆಂಗಳೂರೇ ಮೊದಲನೆಯದು.

. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಶುಲ್ಕವನ್ನು ರದ್ದು ಮಾಡಲಾಯಿತು. ಇದರಿಂದ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ಕಿತು. ಮೈಸೂರು ವಿಶ್ವ ವಿದ್ಯಾನಿಲಯವು ಸ್ಥಾಪಿಸಲಾಯಿತು. ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು 1905ರಲ್ಲಿ ಟಾಟಾರವರ ಬೆಂಬಲದಿಂದ ಸ್ಥಾಪಿಸಲಾಯಿತು. ನೀರಾವರಿ ಸೌಲಭ್ಯಗಳನ್ನೊದಗಿಸಲು ವಿಶೇಷ ಗಮನ ಕೊಡಲಾಯಿತು. ಬೆಳಗೊಳದ ಹತ್ತಿರ ಕಾವೇರಿ ನದಿಗೆ ಅಣೆಕಟ್ಟು ಒಂದನ್ನು ಕಟ್ಟಲಾಯಿತು. ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು. ಅನೇಕ ದೊಡ್ಡ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ಅವುಗಳಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಕಾಗದ ಕಾರ್ಖಾನೆ, ಮಂಡ್ಯದ ಸಕ್ಕರೆ ಕಾರ್ಖಾನೆ, ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರಿನ ಸಾಬೂನು ಕಾರ್ಖಾನೆ, ಬೆಳಗೊಳದ ರಾಸಾಯನಿಕ ವಸ್ತುಗಳ ಮತ್ತು ಕೃತಕ ಗೊಬ್ಬರಗಳ ಕಾರ್ಖಾನೆ ಮುಂತಾದವುಗಳು. ನ್ಯಾಯ ವಿಧಾಯಕ ಸಭೆಯನ್ನು ರಚಿಸಲಾಯಿತು. ರಾಜ್ಯಾಂಗದ ಬದಲಾವಣೆಯಲ್ಲಿ ಇದೊಂದು ದೊಡ್ಡ ಹೆಜ್ಜೆಯಾಯಿತು. ಕೃಷ್ಣರಾಜ ಒಡೆಯರು ಸರಳರೂ, ಸಾತ್ವಿಕ ಸ್ವಭಾವದವರೂ, ಸಮರ್ಥ ಆಡಳಿತಗಾರರೂ ಮತ್ತು ವಿದ್ಯಾಪಕ್ಷಪಾತಿಗಳೂ ಆಗಿದ್ದರು. ಅವರಿಗೆ ಲಲಿತ ಕಲೆಗಳಲ್ಲಿ ತುಂಬಾ ಅಭಿರುಚಿ ಇತ್ತು. ಸಂಗೀತ ವಿದ್ವಾಂಸರುಗಳಿಗೆ ಪ್ರೋತ್ಸಾಹ ನೀಡಿದ್ದರು

34) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಿವಾನರಾಗಿ ಕಾರ್ಯನಿರ್ವಹಿಸಿದ ಮಹನಿಯರನ್ನು ಹೆಸರಿಸಿ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ


ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

CURRENT ELECTRICITY

16. Find out the magnitude of resistance X in the circuit shown in the figure. When no current flows through the 5Ω resistor.



Ans : – If no current flows through the 5Ω resistor, the circuit represents a balanced Wheatstone bridge.

$$\therefore \frac{X}{18} = \frac{2}{6}$$

$$\Rightarrow X = \frac{2}{6} \times 18 = 6\Omega$$

18. The resistance in the left gap of a metre bridge is 10 ohms and the balance point is 40 cm from the left end. Calculate the value of the unknown resistance.

Soln:- Here, l = 40 cm, R = 10 Ω

$$\text{Now, } X = R \times \frac{100x1}{1} = 10 \times \frac{100-40}{40}$$

$$\Rightarrow X = \frac{60}{40} \times 10 = 15\Omega$$

19. Mention the steps of analysis of a network to find the currents in various branches and the potential differences across the various circuit components.

Ans:- The steps of analysis of a network to find the currents in various branches and the potential differences across the various circuit components are

(a) The directions of the currents are first arbitrarily assigned in various branches.

(b) The number of the unknown currents is minimised by applying the current law.

(c) The voltage law is applied at various meshes to get as many equations as the number of unknown currents.

(d) The equation is solved by the known methods.

(e) If the current so obtained is +ve than the assigned direction of flow to the current is correct and if the current so obtained is - ve than the assigned direction of flow to the current is the opposite direction.

20. In a wheatstone's network the value of R for balance is 25 Ω. On interchanging P and Q the value of R for balance is 20Ω. Calculate the value of S and the ratio P/Q.

Ans:- Before interchange R = 25Ω for balance.

$$\frac{P}{Q} = \frac{R}{S} \Rightarrow \frac{P}{Q} = \frac{25}{S} \text{.......(i) } (\because R = 25\Omega)$$

After interchange R = 20Ω, for balance


$$\frac{Q}{P} = \frac{R}{S} \Rightarrow \frac{Q}{P} = \frac{20}{S} \text{.......(ii) } (\because R = 20\Omega)$$

multiplying the eqns (1) and (2)

$$\frac{P}{Q} \times \frac{Q}{P} = \frac{25}{S} \times \frac{20}{S} \Rightarrow S^2 = 500 \Rightarrow S = 22.36\Omega$$


$$\text{From (1), } \frac{P}{Q} = \frac{25}{S} = \frac{25}{22.36} = 1.118$$

21. What is the resistance between the points A and B in the circuit shown in the figure.



Ans:- The network represents a balanced Wheatstone's bridge and hence the resistance of 5Ω connected across the diagonal points can be considered as an open path.


The above network is equivalent to the circuit shown below-



The network is now a parallel combination of two resistive paths. The resistance of each resistive path is 5 + 5. That is 10 Ω. Hence, the net resistance between the points A and B,

$$\frac{1}{R} = \frac{1}{10} + \frac{1}{10} = \frac{1}{5} \Rightarrow R = 5\Omega$$

22. If each of the resistances in the network is R as shown in the fig, what is the resistance between A and B?



The given network can be reduced to the network shown below. *(Contd……)*

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಮನುಷ್ಯನ ಬೆಳವಣಿಗೆಗೆ ಬೇಕಾದಷ್ಟು ಮಾತ್ರ ಸ್ವಾರ್ಥವು ಅವನಲ್ಲಿ ಇರಬೇಕು. ಆದರೆ, ಅದು ಮಿತಿಮೀರಬಾರದು.

–ಶಿವರಾಮ ಕಾರಂತ

ಸಂಪಾದಕೀಯ

ಒಣಪ್ರತಿಷ್ಠೆಯ ಮೇಲಾಟ ಬೇಡ ಕಲಾಪ ಅರ್ಥಪೂರ್ಣವಾಗಿರಲಿ

ಬೆಳಗಾವಿಯ ಸುವರ್ಣಸೌಧದಲ್ಲಿ ಸೋಮವಾರದಿಂದ ವಿಧಾನಮಂಡಲ ಅಧಿವೇಶನ ನಡೆಯಲಿದೆ. ಅರ್ಥಪೂರ್ಣ ಚರ್ಚೆಗಳಲ್ಲಿ ಪಾಲ್ಗೊಂಡು, ಜನರ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಅಧಿವೇಶನಗಳು ಜನಪ್ರತಿನಿಧಿಗಳ ಪಾಲಿಗೆ ಅತ್ಯುತ್ತಮ ವೇದಿಕೆಗಳಾಗಿವೆ. ಆದರೆ, ಇತ್ತೀಚಿನ ದಿನಗಳಲ್ಲಿ ಅವುಗಳು ಆಡಳಿತ ಹಾಗೂ ವಿರೋಧ ಪಕ್ಷಗಳ ಪ್ರತಿಷ್ಠೆಯ ಅಖಾಡಗಳಾಗಿ ಪರಿಣಮಿಸಿದ್ದು, ಬಹುಪಾಲು ಕಲಾಪಗಳು ವ್ಯರ್ಥವಾದ ಉದಾಹರಣೆಗಳೇ ಹೆಚ್ಚು. ಶಾಸನ ರೂಪಿಸುವಿಕೆ ಮತ್ತು ಸಂವಾದ ಪರಿಣಾಮಕಾರಿಯಾಗಿ ನಡೆಯದಿದ್ದರೆ ವಿಧಾನಮಂಡಲದ ಕಾರ್ಯ ನಿರ್ವಹಣೆಯ ಬಗ್ಗೆಯೇ ಜನ ಸಿನಿಕರಾಗುತ್ತಾರೆ. ಪ್ರಾಯಶಃ, ಅಂತಹ ಸ್ಥಿತಿಯೊಂದು ಈಗ ನಿರ್ಮಾಣವಾದಂತಿದೆ. ಕಲಾಪದ ಗುಣಮಟ್ಟದ ಕುಸಿತವು ನಿರಂತರ ವಿದ್ಯಮಾನವಾಗಿದ್ದು, ಇದರಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆ ಆಗುತ್ತಿದೆ. ಕಾಟಾಚಾರಕ್ಕೆ ಎನ್ನುವಂತೆ ಅಧಿವೇಶನ ನಡೆಸಿ, ಹಣ ಮತ್ತು ಸಮಯ ಎರಡನ್ನೂ ವ್ಯರ್ಥಗೊಳಿಸುತ್ತಿರುವ ಪ್ರವೃತ್ತಿಯು ಪ್ರಜ್ಞಾವಂತ ನಾಗರಿಕರಲ್ಲಿ ಹೇವರಿಕೆಯನ್ನು ಉಂಟು ಮಾಡುತ್ತದೆ. ರಾಜ್ಯವನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆಗಳ ಕುರಿತು ಅರ್ಥಪೂರ್ಣ ಚರ್ಚೆಗಳು ನಡೆಯುವುದು ಆಡಳಿತ ಹಾಗೂ ವಿರೋಧ ಪಕ್ಷಗಳಿಗೆ ಬೇಡವಾದಂತಿದೆ. ಬೆಳಗಾವಿ ಅಧಿವೇಶನದಲ್ಲಿ ಇಂತಹ ಪರಿಸ್ಥಿತಿಯನ್ನು ತಿರುವು-ಮುರುವು ಮಾಡುವ ಹೊಣೆ ಎರಡೂ ಪಾಳಯಗಳ ನೇತಾರರ ಮೇಲಿದೆ.



ವಿಧಾನಮಂಡಲದ ಕಲಾಪಗಳು ಜನರ ಆಶೋತ್ತರಗಳಿಗೆ ಧ್ವನಿ ಆಗಬೇಕೇ ಹೊರತು, ಆಡಳಿತ ಮತ್ತು ವಿರೋಧ ಪಕ್ಷಗಳ ಒಣಪ್ರತಿಷ್ಠೆಯ ಪ್ರದರ್ಶನಕ್ಕೆ ವೇದಿಕೆ ಆಗಬಾರದು.

ಬೆಳಗಾವಿಯಲ್ಲಿ ಅಧಿವೇಶನ ನಡೆಯಲಿರುವ ಕಾರಣ ಸಹಜವಾಗಿಯೇ ಉತ್ತರ ಕರ್ನಾಟಕದ ಸಮಸ್ಯೆಗಳು ಚರ್ಚೆಗೆ ಒಳಗಾಗುತ್ತವೆ ಎನ್ನುವುದು ಆ ಭಾಗದ ಜನರ ನಿರೀಕ್ಷೆ. ಬೆಳಗಾವಿಯಲ್ಲಿ ಈ ಹಿಂದಿನ ಅಧಿವೇಶನದಲ್ಲಿ ನೀಡಲಾಗಿದ್ದ ಭರವಸೆಗಳು ಏನಾದವು ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಕಬ್ಬು ಬೆಳೆಗಾರರ ಸಮಸ್ಯೆ ದೊಡ್ಡದಾಗಿರುವಾಗಲೇ ಮೆಕ್ಕೆಜೋಳ ಬೆಳೆದ ರೈತರೂ ಸಂಕಷ್ಟ ಅನುಭವಿಸುತ್ತಿದ್ದಾರೆ. ಭತ್ತ, ರಾಗಿ ಬೆಳೆದವರೂ ಅಗತ್ಯ ಪ್ರಮಾಣದಷ್ಟು ಖರೀದಿ ಕೇಂದ್ರಗಳು ಇಲ್ಲದಿರುವ ಕಾರಣ ತೊಂದರೆ ಎದುರಿಸುತ್ತಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ತೆವಳುತ್ತಿದೆ ಎಂಬ ಆಕ್ರೋಶ ಈ ಭಾಗದ ಜನರಲ್ಲಿ ಲಾಗಾಯ್ತಿನಿಂದಲೂ ಮಡುಗಟ್ಟಿದೆ. ಕಳಸಾ-ಬಂಡೂರಿ ನಾಲೆ ತಿರುವು ಯೋಜನೆಯ ಭವಿಷ್ಯದ ಕುರಿತೂ ಅವರಲ್ಲಿ ಪ್ರಶ್ನೆಗಳಿವೆ. ತಮ್ಮ ಸಮಸ್ಯೆಗಳು ಹಾಗೂ ಪ್ರಶ್ನೆಗಳ ಕುರಿತು ವಿಸ್ತೃತ ಚರ್ಚೆ ನಡೆಯಬೇಕು ಎನ್ನುವ ಅಪೇಕ್ಷೆ ಅವರದ್ದಾಗಿದೆ. ಪ್ರಸಕ್ತ ಅಧಿವೇಶನದಲ್ಲಿ ಸರ್ಕಾರವು ಎರಡು ಮಹತ್ವದ ಮಸೂದೆಗಳನ್ನು– 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷಾಪರಾಧಗಳ (ಪ್ರತಿಬಂಧಕ) ಮಸೂದೆ–2025', 'ಕರ್ನಾಟಕ ಸಾಮಾಜಿಕ ಬಹಿಷ್ಕಾರದಿಂದ ಜನರ ರಕ್ಷಣೆ (ತಡೆ, ನಿಷೇಧ ಮತ್ತು ಪರಿಹಾರ) ಮಸೂದೆ–2025'– ಮಂಡಿಸಲು ಸಿದ್ಧತೆ ಮಾಡಿಕೊಂಡಿದೆ. ಈ ಎರಡೂ ಮಸೂದೆಗಳು ವ್ಯಾಪಕವಾಗಿ ಚರ್ಚೆಗೆ ಒಳಗಾಗಬೇಕಾದಂಥವು.

ಧರಣಿ ಹಾಗೂ ಕೋಲಾಹಲದ ನಡುವೆ ಕಲಾಪವನ್ನು ನಡೆಸಲು ಸಾಧ್ಯವಿಲ್ಲ. ವಿರೋಧ ಪಕ್ಷಗಳು ಒಣಪ್ರತಿಷ್ಠೆಗಾಗಿ ಕಲಾಪ ಬಹಿಷ್ಕರಿಸುವುದಾಗಲಿ, ಧರಣಿ ನಡೆಸುವುದನ್ನೇ ಕಾಯಕ ಮಾಡಿಕೊಳ್ಳುವುದಾಗಲಿ ಮಾಡದೆ ಚರ್ಚೆಗಳಲ್ಲಿ ರಚನಾತ್ಮಕವಾಗಿ ಪಾಲ್ಗೊಳ್ಳಬೇಕು. ಸರ್ಕಾರವನ್ನು ಉತ್ತರದಾಯಿ ಮಾಡುವ ಹಕ್ಕು ಮತ್ತು ಹೊಣೆಗಾರಿಕೆ ವಿರೋಧ ಪಕ್ಷಗಳಿಗೆ ಇದೆ. ವಿರೋಧ ಪಕ್ಷಗಳು ಎತ್ತಿದ ವಿಚಾರಗಳ ಕುರಿತು ತನ್ನ ನಿಲುವನ್ನು ಸ್ಪಷ್ಟಪಡಿಸುವುದು ಸರ್ಕಾರದ ಕರ್ತವ್ಯವಾಗಿದೆ. ಅದು, ಅಧಿಕಾರದ ಠೀವಿಯಿಂದ ಪ್ರತಿಕ್ರಿಯಿಸದೇ ಎದುರಿನ ಸಾಲುಗಳಲ್ಲಿ ಕುಳಿತ ಸದಸ್ಯರ ಸಲಹೆಗಳಿಗೆ ಕಿವಿಗೊಡಬೇಕು. ಎಲ್ಲರೂ ಒಗ್ಗೂಡಿ ಜನರ ಸಮಸ್ಯೆಗಳನ್ನು ಬಗೆಹರಿಸುವ ಯತ್ನ ಮಾಡಬೇಕು. ವಾಸ್ತವವಾಗಿ, ನಾಯಕತ್ವದ ಮೇಲಾಟದಲ್ಲಿ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಲು ಮರೆತಿರುವ ಸರ್ಕಾರಕ್ಕೆ, ಆ ಮೈಮರೆವನ್ನು ನೆನಪಿಸುವ ಕೆಲಸ ವಿರೋಧ ಪಕ್ಷಗಳಿಂದ ಆಗಬೇಕು. ಆದರೆ, ದುರದೃಷ್ಟವಶಾತ್ ವಿರೋಧ ಪಕ್ಷಗಳಲ್ಲೂ ನಾಯಕತ್ವಕ್ಕಾಗಿಯೇ ಮುಸುಕಿನ ಗುದ್ದಾಟ ನಡೆದಿದೆ. ನಾಡಿನ ಹಿತಚಿಂತನೆ ಯಾರಿಗೂ ಬೇಡವಾಗಿದೆ. ಜನರ ಕುರಿತು ತಾವು ಸುರಿಸುವುದು ಮೊಸಳೆ ಕಣ್ಣೀರಲ್ಲ, ಆಡುವ ಮಾತು ಕಣ್ಣೊರೆಸುವ ತಂತ್ರವಲ್ಲ ಎಂಬುದು ನಿಜವಾದರೆ, ಆಡಳಿತ ಮತ್ತು ವಿರೋಧ ಪಕ್ಷಗಳು ರಾಜಕೀಯ ಹಿತಾಸಕ್ತಿ ಪಕ್ಕಕ್ಕೆ ಇಟ್ಟು ಕಲಾಪದಲ್ಲಿ ಸಕಾರಾತ್ಮಕವಾಗಿ ಪಾಲ್ಗೊಳ್ಳುವುದು ಅತ್ಯಗತ್ಯವಾಗಿದೆ.

ಚಾವಡಿ

ಪ್ರೀತಿ– ವೈಚಾರಿಕತೆ

ಪ್ರೀತಿ ತುಂಬಿದ ಅಂತಃಕರಣದಷ್ಟು ಪ್ರಖರವಾದ ವೈಚಾರಿಕತೆಯು ಇನ್ನೊಂದಿಲ್ಲ.

ಸವಿರಾಜ್ ಆನಂದೂರು, ಕಥೆಗಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಎಚ್‌.ಸಿ. ಮಹದೇವಪ್ಪನವರೇ ನಿಮ್ಮನ್ನು ಅಜ್ಞಾನಿ ಎನ್ನುವುದು ನನಗೆ ಇಷ್ಟವಿಲ್ಲ. ಸಂವಿಧಾನ, ಪ್ರಜಾಪ್ರಭುತ್ವ ಎಂದು ಸದಾ ಜಪಿಸುವ ನೀವು, ಭಗವದ್ಗೀತೆಯ ಜತೆಗೆ ರಾಮಾಯಣ, ಮಹಾಭಾರತವನ್ನೂ ಓದಿ.

ಎಚ್‌.ಡಿ. ಕುಮಾರಸ್ವಾಮಿ, ಕೇಂದ್ರ ಬೃಹತ್ ಕೈಗಾರಿಕಾ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 8-12-2000

• ಅಯೋಧ್ಯೆ: ಮಂದಿರ, ಮಸೀದಿ ನಿರ್ಮಾಣ– ಪ್ರಧಾನಿ ಸಲಹೆ

ನವದೆಹಲಿ, ಡಿ. 7 (ಯುಎನ್‌ಐ)– ಹಿಂದೂ ಮತ್ತು ಮುಸ್ಲಿಂ ಸಮುದಾಯ ಒಪ್ಪಿದರೆ ರಾಮಮಂದಿರ ಮತ್ತು ಮಸೀದಿಯನ್ನು ಅಯೋಧ್ಯೆಯಲ್ಲಿ ನಿರ್ಮಾಣ ಮಾಡಬಹುದಾಗಿದೆ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು, ಇಂದು ರಾತ್ರಿ ಇಲ್ಲಿ ಹೇಳಿದರು.

'ಇಫ್ತಾರ್' ಕೂಟದಲ್ಲಿ ಪಾಲ್ಗೊಂಡಿದ್ದ ಅವರು, ಅಯೋಧ್ಯೆ ಸಮಸ್ಯೆಗೆ ಎರಡು ರೀತಿಯಲ್ಲಿ ಪರಿಹಾರ ಕಂಡುಕೊಳ್ಳಬಹುದು. ನ್ಯಾಯಾಲಯದ ಮೂಲಕ ಅಥವಾ ಎರಡೂ ಸಮುದಾಯದವರ ಏಕಾಭಿಪ್ರಾಯದ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದರು.

• ಕರಾವಳಿ ಪರಿಸರ: 1,062 ಕೋಟಿ ರೂ. ಯೋಜನೆ

ಬೆಂಗಳೂರು, ಡಿ. 7– ಕರಾವಳಿ ಪ್ರದೇಶದ ಹತ್ತು ನಗರ ಮತ್ತು ಪಟ್ಟಣಗಳ ಮೂಲಸೌಕರ್ಯದ ಅಭಿವೃದ್ಧಿಗಾಗಿ ಏಷ್ಯಾ ಅಭಿವೃದ್ಧಿ ಬ್ಯಾಂಕ್ ಮತ್ತು ರಾಜ್ಯ ಸರ್ಕಾರದ ಜಂಟಿ ಆಶ್ರಯದಲ್ಲಿ 1,062 ಕೋಟಿ ರೂಪಾಯಿ ವೆಚ್ಚದ 'ಕರ್ನಾಟಕ ಕರಾವಳಿ ಪರಿಸರ ನಿರ್ವಹಣೆ ಯೋಜನೆ'ಯ ಅನುಷ್ಠಾನಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ.

ಕರ್ನಾಟಕ ಪಟ್ಟಣ ಮೂಲಸೌಲಭ್ಯ ಅಭಿವೃದ್ಧಿ ಹಣಕಾಸು ನಿಗಮವು ಸ್ಥಳೀಯ ಸಂಸ್ಥೆಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಪಟ್ಟಣ ನೀರು ಸರಬರಾಜು ಹಾಗೂ ಕೊಳಚೆ ಮಂಡಳಿಗಳ ನೆರವಿನಿಂದ ಈ ಯೋಜನೆಯನ್ನು ಜಾರಿಗೊಳಿಸಲಿದೆ.

75 ವರ್ಷಗಳ ಹಿಂದೆ

ಶುಕ್ರವಾರ, 8-12-1950

• ಕೃತಕ ಬೆಳಕಿನಲ್ಲಿ ಹಣ್ಣುಹಂಪಲು ಬೆಳೆ

ಲಂಡನ್, ಡಿ. 7– ರಷ್ಯಾದ ವಿಜ್ಞಾನಿಗಳು ಕೃತಕ ಬೆಳಕಿನಿಂದ ಹಣ್ಣು ಮತ್ತು ತರಕಾರಿ ಬೆಳೆಯುವ ವಿಧಾನ ಕಂಡುಹಿಡಿದಿರುವರೆಂದು ಟಾಸ್ ಸುದ್ದಿ ತಿಳಿಸಿದೆ.

ಇದರಿಂದ ಅನೇಕ ಹಣ್ಣುಹಂಪಲುಗಳನ್ನು ಸುಲಭವಾಗಿ ಬೆಳೆಯಬಹುದು. ವರ್ಷದ ಎಲ್ಲಾ ಕಾಲದಲ್ಲೂ, ಎಲ್ಲಾ ಮಾಸಗಳಲ್ಲೂ ಬೆಳೆಯುವುದೇ ಅಲ್ಲದೆ ಉತ್ತರಶೀತ ವಲಯಗಳಲ್ಲೂ ಈ ಹಣ್ಣುಗಳನ್ನು ಬೆಳೆಯಬಹುದು.

• ಭಾರತಕ್ಕೆ ಸ್ಟರ್ಲಿಂಗ್ ಉಳಿತಾಯದ ಪಾವತಿ

ನವದೆಹಲಿ, ಡಿ. 7– ಬ್ರಿಟನ್ನು ಭಾರತಕ್ಕೆ ತೆರಬೇಕಾಗಿರುವ ಸ್ಟರ್ಲಿಂಗ್ ಉಳಿತಾಯದಲ್ಲಿ ವರ್ಷಕ್ಕೆ ಮೂರು ಕೋಟಿ ಐವತ್ತು ಲಕ್ಷ ಪೌಂಡುಗಳಂತೆ 1951ರ ಜುಲೈ 1ರಿಂದ 6 ವರ್ಷಗಳ ಕಾಲ ಭಾರತಕ್ಕೆ ಒದಗಿಸುವಂತೆ ಉಭಯ ರಾಷ್ಟ್ರಗಳ ನಡುವೆ ಒಪ್ಪಂದವಾಗಿದೆ ಎಂಬುದಾಗಿ ಭಾರತದ ಅರ್ಥ ಸಚಿವ ಚಿಂತಾಮಣಿ ದೇಶಮುಖ್ ಅವರು, ಇಂದು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಅಮೋನಿಯ: 'ಹಸಿರು' ನಾಯಕ?

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ರಸಾಯನ ವಿಜ್ಞಾನ ಓದಿದ ಎಲ್ಲರಿಗೂ ಗೊತ್ತಿರುವ ಅನಿಲ– ಅಮೋನಿಯ. ಕೃಷಿ ಕ್ಷೇತ್ರಕ್ಕೂ, ಉತ್ಪಾದನಾ ಉದ್ಯಮ ವಲಯಕ್ಕೂ ಮತ್ತು ಅಮೋನಿಯಕ್ಕೂ ಅವಿನಾಭಾವ ಸಂಬಂಧ. ಕೃಷಿಯಲ್ಲಿ ಬಳಕೆಯಾಗುವ ರಸಗೊಬ್ಬರ ತಯಾರಿಕೆಗೆ ಅಮೋನಿಯ ಬೇಕೇಬೇಕು. ಉತ್ಪಾದನೆಗೊಳ್ಳುವ ಶೇ 80ರಷ್ಟು ಅಮೋನಿಯ ರಸಗೊಬ್ಬರ ತಯಾರಿಕೆಗೆ ಬಳಕೆಗೊಳ್ಳುತ್ತದೆ. ಯೂರಿಯಾ, ಡೈ ಅಮೋನಿಯಂ ಫಾಸ್ಫೇಟ್ (ಡಿಎಪಿ) ಮತ್ತಿತರ ಸಂಕೀರ್ಣ ಗೊಬ್ಬರಗಳ ಅವಿಭಾಜ್ಯ ಘಟಕಗಳಲ್ಲೊಂದಾಗಿರುವ ಅಮೋನಿಯ, ಈಗ ಶಾಖವರ್ಧಕ ಅನಿಲ ಹೊಮ್ಮುವಿಕೆ (ಉತ್ಸರ್ಜನೆ) ತಡೆಯಲು 'ಹಸಿರು ಅಮೋನಿಯ'ದ ಅವತಾರ ಎತ್ತುತ್ತಿದೆ.

ಏನಿದು ಹಸಿರು ಅಮೋನಿಯ? ವಾತಾವರಣಕ್ಕೆ ಇಂಗಾಲದ ಡೈ ಆಕ್ಸೈಡ್ (ಇಂಡೈ) ಹೊಮ್ಮಿಸುವ ಕಲ್ಲಿದ್ದಲು ಮತ್ತು ನೈಸರ್ಗಿಕ ಅನಿಲಗಳನ್ನು ಉರಿಸಿ ಉತ್ಪಾದಿಸಲಾಗುವ ಅಮೋನಿಯವನ್ನು ಕಂದು ಅಥವಾ ಬೂದು ಅಮೋನಿಯ ಎಂದು ಕರೆಯಲಾಗುತ್ತದೆ. ಇದರ ಬದಲಿಗೆ ಹಸಿರು ಜಲಜನಕ ಬಳಸಿ ಉತ್ಪಾದಿಸುವ ಅಮೋನಿಯವನ್ನು 'ಹಸಿರು ಅಮೋನಿಯ' ಎನ್ನುತ್ತೇವೆ. ವಾತಾವರಣಕ್ಕೆ ಶಾಖವರ್ಧಕ ಅನಿಲಗಳನ್ನು ಹೊಮ್ಮಿಸದ ಇದನ್ನು ಭವಿಷ್ಯದ ಇಂಧನ ಕ್ರಾಂತಿಯ ವಾಹಕ ಎನ್ನಲಾಗುತ್ತಿದೆ.

ವಾಯುಗುಣ ವೈಪರೀತ್ಯ ಎದುರಿಸಲು ಮತ್ತು ನಿವ್ವಳ ಶೂನ್ಯ ಇಂಗಾಲ ಉತ್ಸರ್ಜನೆಯ ಗುರಿ ಸಾಧಿಸಲು ವಿಶ್ವವೇ ಒಂದಾಗಿ ಶ್ರಮಿಸುತ್ತಿರುವಾಗ– ಹಸಿರು ಅಮೋನಿಯ ಹೆಚ್ಚಿನ ಖ್ಯಾತಿ ಗಳಿಸುತ್ತಿದೆ. 2050ರ ವೇಳೆಗೆ ಶೂನ್ಯ ಇಂಗಾಲ ಉತ್ಸರ್ಜನೆಯ ಗುರಿ ಸಾಧಿಸಲು ನಮ್ಮ ವಾಹನಗಳಿಗೆ ತುಂಬುವ ಇಂಧನದಲ್ಲಿ ಶೇ 30ರಷ್ಟು ಹಸಿರು ಜಲಜನಕ ಮತ್ತು ಹಸಿರು ಅಮೋನಿಯ ಇರಬೇಕು. ಹಸಿರು ಜಲಜನಕ ಉತ್ಪಾದನೆಗಾಗಿ ಭಾರತದಲ್ಲಿ ಪ್ರಾರಂಭವಾಗಿರುವ 'ನ್ಯಾಷನಲ್ ಗ್ರೀನ್ ಹೈಡ್ರೋಜನ್ ಮಿಷನ್' 2030ರ ವೇಳೆಗೆ 50 ಲಕ್ಷ ಟನ್ ಹಸಿರು ಜಲಜನಕ ಮತ್ತು ಒಂದೂವರೆ ಕೋಟಿ ಟನ್ ಹಸಿರು ಅಮೋನಿಯ ಉತ್ಪಾದಿಸುವ ಗುರಿ ಹೊಂದಿದೆ.

ಭಾರತದಲ್ಲಿ ಬಳಕೆಯಾಗುತ್ತಿರುವ ಒಟ್ಟು ಅಮೋನಿಯದ ಶೇ 86ರಷ್ಟು ಆಮದಾಗುತ್ತದೆ. ಶೀತಲೀಕರಣ, ಗಣಿಗಾರಿಕೆ, ನೀರಿನ ಶುದ್ಧೀಕರಣ, ಪ್ಲಾಸ್ಟಿಕ್, ಬಣ್ಣದ ಉದ್ಯಮ, ಔಷಧ ತಯಾರಿಕೆ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಬಳಕೆಗೊಳ್ಳುವ ಅಮೋನಿಯವನ್ನು ಪರಿಸರಸ್ನೇಹಿ ಕ್ರಮಗಳ ಮೂಲಕ ನಾವೇ ಉತ್ಪಾದಿಸಿ ಬಳಸಿದರೆ, ಈ ಎಲ್ಲ ಕ್ಷೇತ್ರಗಳಲ್ಲಿ ಇಂಗಾಲ ಉತ್ಸರ್ಜನೆಯ ಪ್ರಮಾಣವನ್ನು ಗಣನೀಯವಾಗಿ ಕಡಿತಗೊಳಿಸಬಹುದು.

ಅಮೋನಿಯ (ಕಂದು ಅಥವಾ ಬೂದು) ತಯಾರಿಸಲು ಬೇಕಾದ ಜಲಜನಕವನ್ನು ಸ್ಟೀಮ್ ಮೀಥೇನ್ ರಿಫಾರ್ಮಿಂಗ್ ವಿಧಾನ ಮತ್ತು ಹೇಬರ್– ಬಾಷ್ ಪ್ರಕ್ರಿಯೆ ಬಳಸಿ ತಯಾರಿಸಲಾಗುತ್ತದೆ. ನಂತರ ಗಾಳಿಯಿಂದ ತೆಗೆದ ಸಾರಜನಕ ಮತ್ತು ಮೀಥೇನ್‌ನಿಂದ ಪಡೆಯಲಾದ ಜಲಜನಕಗಳನ್ನು ಹೆಚ್ಚಿನ ಒತ್ತಡ ಮತ್ತು ತಾಪಮಾನದಲ್ಲಿ ಸಂಯೋಜಿಸಿ, ಅಮೋನಿಯ ತಯಾರಿಸಲಾಗುತ್ತದೆ. ಒಂದು ಟನ್ ಅಮೋನಿಯ ಉತ್ಪಾದನೆಗೆ 178 ಕಿಲೋಗ್ರಾಂ ಜಲಜನಕ ಬೇಕು. ಒಂದು ಟನ್ ಅಮೋನಿಯ ಉತ್ಪಾದನೆಯಾದಾಗ ಸುಮಾರು ಎರಡು ಟನ್ ಇಂಡೈ ಹೊಮ್ಮುತ್ತದೆ. ಸಾಂಪ್ರದಾಯಿಕ ಅಮೋನಿಯ ಉತ್ಪಾದನಾ ವಿಧಾನಗಳಿಂದ ಈಗ ಹೊಮ್ಮುತ್ತಿರುವ ಶಾಖವರ್ಧಕ ಅನಿಲಗಳ ಪ್ರಮಾಣ ಶೇ 1.8ರಷ್ಟು ಎಂಬ ಮಾಹಿತಿ ಇದೆ.

ಹಸಿರು ಅಮೋನಿಯ ಉತ್ಪಾದನೆಯಲ್ಲೂ ಹೇಬರ್–ಬಾಷ್ ಪ್ರಕ್ರಿಯೆಯನ್ನು ಬಳಸಲಾಗುತ್ತದೆ. ಆದರೆ, ಇಲ್ಲಿ ಅಮೋನಿಯ ಸಂಶ್ಲೇಷಣೆಗೆ ಬೇಕಾಗುವ ಪ್ರಮುಖ ಕಚ್ಚಾ ವಸ್ತುವಾದ ಜಲಜನಕವನ್ನು ಪಳೆಯುಳಿಕೆ ಇಂಧನಗಳಿಂದ ಪಡೆಯುವ ಬದಲು, ಹಸಿರು ಹೈಡ್ರೋಜನ್‌ನಿಂದ ಪಡೆಯಲಾಗುತ್ತದೆ.

ಹಸಿರು ಜಲಜನಕವನ್ನು ಸೌರ ಮತ್ತು ಪವನಶಕ್ತಿ ಬಳಸಿಕೊಂಡು ನೀರಿನ ವಿದ್ಯುದ್ವಿಭಜನೆಯ ಮೂಲಕ ತಯಾರಿಸಲಾಗುತ್ತದೆ. ಹೀಗೆ ಉತ್ಪಾದಿಸಿದ ಹಸಿರು ಹೈಡ್ರೋಜನ್ ಅನ್ನು ಗಾಳಿಯಿಂದ ಬೇರ್ಪಡಿಸಿದ ನೈಟ್ರೋಜನ್‌ನೊಂದಿಗೆ ನವೀಕರಿಸಬಹುದಾದ ಶಕ್ತಿಯನ್ನೇ ಬಳಸಿಕೊಂಡು ಸಂಯೋಜಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಯಾವುದೇ ಶಾಖವರ್ಧಕ ಅನಿಲಗಳು ಹೊಮ್ಮುವುದಿಲ್ಲ. ಆದ್ದರಿಂದ ಹಸಿರು ಅಮೋನಿಯವು ಸುಸ್ಥಿರ ಮತ್ತು ಇಂಗಾಲಮುಕ್ತ ಪರ್ಯಾಯವಾಗಿದ್ದು, ಕೃಷಿಯಲ್ಲಿ ಮಾತ್ರವಲ್ಲದೆ, ಇಂಧನ ಮತ್ತು ಸಾಗರ ಸಾಗಣೆ ಕ್ಷೇತ್ರಗಳಲ್ಲೂ ಕ್ರಾಂತಿಯನ್ನುಂಟು ಮಾಡುವ ಸಾಮರ್ಥ್ಯ ಪಡೆದಿದೆ.

> ಭವಿಷ್ಯದ ಇಂಧನ ವಾಹಕದಂತೆ ಕಾಣಿಸುತ್ತಿರುವ 'ಹಸಿರು ಅಮೋನಿಯ', ಜಾಗತಿಕ ಮಾರುಕಟ್ಟೆಯಲ್ಲಿ ಹೊಸ ಸಾಧ್ಯತೆಗಳನ್ನು ಅನಾವರಣಗೊಳಿಸುತ್ತಿದೆ. ಇಂಗಾಲದ ಹೊರಸೂಸುವಿಕೆಯ ನಿಯಂತ್ರಣದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಹೇಳಲಾಗುತ್ತಿರುವ ಈ ಇಂಧನ, ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಹೊಸ ನಿರೀಕ್ಷೆ ಹುಟ್ಟುಹಾಕಿದೆ.

ವಾರ್ಷಿಕ 17.5 ಕೋಟಿ ಟನ್ ಬೂದು ಅಮೋನಿಯ ಉತ್ಪಾದನೆಯಾಗುತ್ತಿದೆ. ಅದಕ್ಕಾಗಿ ಪಳೆಯುಳಿಕೆ ಇಂಧನ ನೈಸರ್ಗಿಕ ಅನಿಲವನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ಸ್ಟೀಮ್ ಮೀಥೇನ್ ರಿಫಾರ್ಮಿಂಗ್ ಮತ್ತು ಹೇಬರ್–ಬಾಷ್ ಪ್ರಕ್ರಿಯೆಗಳ ಮೂಲಕ ಉತ್ಪಾದನೆ ಆಗುತ್ತದೆಯಾದ್ದರಿಂದ ಅಮೋನಿಯದ ಎರಡು ಪಟ್ಟು ಇಂಡೈ ಹೊಮ್ಮುತ್ತಿದೆ. ಇದು ಸುಸ್ಥಿರ ಕ್ರಮವಲ್ಲ.

ಹಸಿರು ಅಮೋನಿಯ ಉತ್ಪಾದನೆಯ ಇಡೀ ಪ್ರಕ್ರಿಯೆಯು ಹಸಿರು ಶಕ್ತಿಯ ಬಳಕೆಯಿಂದ ನಡೆಯುತ್ತದೆ. ಹೊಮ್ಮುವ ಉಪ ಉತ್ಪನ್ನಗಳು ನೀರು ಮತ್ತು ಆಮ್ಲಜನಕ ಆಗಿರುವುದರಿಂದ, ವಾತಾವರಣಕ್ಕೆ ಇಂಡೈ ಹೊಮ್ಮುವುದಿಲ್ಲ; ಓಝೋನ್ ಪದರಕ್ಕೆ ಹಾನಿಯಿಲ್ಲ. ಹಸಿರು ಅಮೋನಿಯದಿಂದ ವಾರ್ಷಿಕ 50 ಕೋಟಿ ಟನ್ ಇಂಡೈ ಹೊಮ್ಮುವುದನ್ನು ತಡೆಯಬಹುದು. ಹಾಗಾಗಿ, ಪರಿಸರಸ್ನೇಹಿ ಹಸಿರು ಅಮೋನಿಯವು ಶುದ್ಧ ಇಂಧನ ವಾಹಕವಾಗುವ ಸಾಧ್ಯತೆ ಒಳಗೊಂಡಿದೆ.

ಒಂದು ಕೆ.ಜಿ ಹಸಿರು ಜಲಜನಕದ ಬೆಲೆ ₹260ರಿಂದ ₹310. ಆದರೆ, ಒಂದು ಕೆ.ಜಿ ಹಸಿರು ಅಮೋನಿಯದ ಬೆಲೆ ₹55 ಮಾತ್ರ. ಇದು ದೇಶದ ಆರ್ಥಿಕತೆ ಮತ್ತು ರಸಗೊಬ್ಬರ ಉದ್ಯಮಕ್ಕೆ ದೊಡ್ಡ ರೀತಿಯಲ್ಲಿ ನೆರವಾಗಲಿದೆ. ಆದರೆ, ಅಮೋನಿಯ ಉತ್ಪಾದನೆಗೆ ಬೇಕಾದ ಹಸಿರು ಜಲಜನಕವನ್ನು ಶೇಖರಿಸುವುದು ಮತ್ತು ಸಾಗಿಸುವುದು ಬಹಳ ಕಷ್ಟ ಮತ್ತು ದುಬಾರಿಯ ಕೆಲಸ. ದ್ರವೀಕೃತ ಜಲಜನಕದ ಶೇಖರಣೆಗೆ ತಾಪಮಾನ –250°ಸೆ. ಇರಬೇಕು. ಅನಿಲ ರೂಪದ ಜಲಜನಕವನ್ನು ಅತೀ ಒತ್ತಡದಲ್ಲಿ ಶೇಖರಿಸಬೇಕು. ಆದರೆ, ಅಮೋನಿಯವನ್ನು –33°ಸೆ. ತಾಪಮಾನದಲ್ಲಿ ಮತ್ತು ಸಾಧಾರಣ ಒತ್ತಡದಲ್ಲಿ ದ್ರವೀಕರಿಸಿ ಸುಲಭವಾಗಿ ಶೇಖರಿಸಬಹುದು, ಸಾಗಣೆಯೂ ಸುಲಭ.

ಅಮೋನಿಯ ಉರಿಸಿ ನೌಕೆಗಳನ್ನು ಓಡಿಸಬಹುದು. ಅಮೋನಿಯ ದಹಿಸಿದಾಗ ಸಾರಜನಕ ಮತ್ತು ನೀರಿನ ಆವಿ ಬಿಡುಗಡೆ ಆಗುವುದರಿಂದ ವಾಯುಗುಣ ಹದಗೆಡುವುದಿಲ್ಲ. ಹಡಗುಗಳಲ್ಲಿ ಹಸಿರು ಅಮೋನಿಯವನ್ನು ಇಂಧನವನ್ನಾಗಿ ಬಳಸಿದರೆ, ಸಾಗರೋತ್ತರ ಸಾಗಣೆ ಕ್ಷೇತ್ರದ ಇಂಗಾಲವನ್ನು ದೊಡ್ಡ ಪ್ರಮಾಣದಲ್ಲಿ ಕಡಿತಗೊಳಿಸಬಹುದು.

ಅಮೋನಿಯದ ಶೇಖರಣೆ ಮತ್ತು ದಹನಕಾರ್ಯ ಸೂಕ್ತ ನಿಯಂತ್ರಣದಲ್ಲಿ ನಡೆಯದೆ ಹೋದರೆ ಅಪಾಯ ಖಚಿತ. ಕಳೆದ ಫೆಬ್ರುವರಿಯಲ್ಲಿ ತಮಿಳುನಾಡಿನ ಎನ್ನೂರಿನಲ್ಲಿರುವ ರಸಗೊಬ್ಬರ ಕಾರ್ಖಾನೆಯಿಂದ ಹದಿನೈದು ನಿಮಿಷಗಳಲ್ಲಿ 67 ಟನ್ ಅಮೋನಿಯ ಸೋರಿಕೆಯಾಗಿತ್ತು. ಇದೇ ಜುಲೈನಲ್ಲಿ ಮುಂಬೈನ ಹಾಲಿನ ಡೇರಿಯಿಂದ ಮೂರು ಸಾವಿರ ಕಿಲೋ ತೂಕದ ಅಮೋನಿಯ ಸೋರಿಕೆಗೊಂಡಿತ್ತು. 1992ರಲ್ಲಿ ಸೆನೆಗಲ್‌ನ ಡಕರ್ ನಗರದ ಎಣ್ಣೆಬೀಜ ಸಂಸ್ಕರಣಾ ಘಟಕದಲ್ಲಿ ಟ್ಯಾಂಕ್ ಸ್ಫೋಟಗೊಂಡು, 22 ಟನ್ ಅಮೋನಿಯ ಸೋರಿಕೆಯಾಗಿ, 129 ಜನ ಸಾವಿಗೀಡಾಗಿದ್ದರು. ಅಮೋನಿಯ ವಿಷಕಾರಿ ಅನಿಲವಾಗಿದ್ದು, ಸುರಕ್ಷತೆಗೆ ಒತ್ತು ನೀಡಲೇಬೇಕು. ಅಮೋನಿಯ ದಹಿಸಿದಾಗ ಸಾರಜನಕದ ಆಕ್ಸೈಡ್‌ಗಳು ಬಿಡುಗಡೆಗೊಂಡು, ಆಮ್ಲಮಳೆ ತರಬಹುದು. ಪೂರ್ಣವಾಗಿ ದಹಿಸದ ಅಮೋನಿಯ ತೇಲುಕಣ ಸೃಷ್ಟಿಸಿ ಗಾಳಿಯನ್ನು ಕಲುಷಿತಗೊಳಿಸುತ್ತದೆ. ಇದನ್ನು ತಡೆಯುವ ತಂತ್ರಜ್ಞಾನ ರೂಪುಗೊಳ್ಳಬೇಕು.

ನಮ್ಮಲ್ಲಿ ಉಷ್ಣ ಸ್ಥಾವರಗಳಲ್ಲಿ ಸುಡುವ ಕಲ್ಲಿದ್ದಲಿನಿಂದ ಅಪಾರ ಪ್ರಮಾಣದ ಇಂಡೈ ಹೊಮ್ಮುತ್ತದೆ. ಈ ಸ್ಥಾವರಗಳಲ್ಲಿ ಹಸಿರು ಅಮೋನಿಯವನ್ನು ಕಲ್ಲಿದ್ದಲಿನೊಂದಿಗೆ ಬೆರೆಸಿ ಸುಡುವ ಮೂಲಕ ಇಂಗಾಲದ ಉತ್ಸರ್ಜನೆಯನ್ನು ಕಡಿತಗೊಳಿಸಬಹುದು ವಿಶೇಷ ಅಮೋನಿಯಚಾಲಿತ ಟರ್ಬೈನ್‌ಗಳನ್ನು ಬಳಸಿ ವಿದ್ಯುತ್ ಉತ್ಪಾದಿಸಬಹುದು. ಹಾಗಾದಲ್ಲಿ ಭಾರತವು ಶುದ್ಧ ವಿದ್ಯುತ್ ಉತ್ಪಾದನೆಯ ಜಾಗತಿಕ ಹಬ್ ಆಗಬಲ್ಲದು.

ಭಾರತದ ಪಾಲಿಗೆ, ಹಸಿರು ಅಮೋನಿಯ ಎರಡು ಮುಖ್ಯ ಪ್ರಯೋಜನ ತರಲಿದೆ. ರಸಗೊಬ್ಬರ ಉತ್ಪಾದನೆಗಾಗಿ ಆಮದು ಮಾಡಿಕೊಳ್ಳುವ ಪಳೆಯುಳಿಕೆ ಇಂಧನ ಮತ್ತು ಕಚ್ಚಾವಸ್ತುಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಹಸಿರು ಅಮೋನಿಯವನ್ನು ಅಂತರರಾಷ್ಟ್ರೀಯ ಮಾರುಕಟ್ಟೆಗೆ ರಫ್ತು ಮಾಡಿದರೆ ಹೆಚ್ಚಿನ ವಿದೇಶಿ ವಿನಿಮಯ ಗಳಿಸುವ ಅವಕಾಶವಿದೆ. ಹೊರದೇಶಗಳಿಗೆ ಸಾಗಣೆಯಾಗುವ ಹಸಿರು ಅಮೋನಿಯವನ್ನು ಬಂದರುಗಳ ಬಳಿಯೇ ಬಂಕರ್‌ಗಳಲ್ಲಿ ಸಂಗ್ರಹಿಸಿಟ್ಟರೆ, ಜನವಸತಿ ಪ್ರದೇಶಗಳ ಬಳಿ ಸಾಗಣೆ ವಾಹನಗಳ ಒತ್ತಡ ತಪ್ಪಿಸಬಹುದು. ಹಸಿರು ಅಮೋನಿಯವು ಭವಿಷ್ಯದ ಇಂಧನ ಪರಿಹಾರವೆಂಬಂತೆ ಬಿಂಬಿತವಾಗಿದ್ದರೂ, ಅದರ ಉತ್ಪಾದನೆ ಮತ್ತು ವ್ಯಾಪಕ ಬಳಕೆ ಸುಲಭವಲ್ಲ. ಅಮೋನಿಯ ಉತ್ಪಾದಿಸಲು ಬೇಕಾಗುವ ಹಸಿರು ಜಲಜನಕದ ಉತ್ಪಾದನಾ ವೆಚ್ಚ ಜಾಸ್ತಿ ಇದೆ. ಇದು ತಗ್ಗಬೇಕು.

ಹಸಿರು ಅಮೋನಿಯವು ಇಂಧನ, ಜಲಜನಕ ಸಾಗಣೆ ಮತ್ತು ಕೈಗಾರಿಕಾ ಇಂಗಾಲ ನಿರ್ಮೂಲನೆಗೆ ದೊಡ್ಡ ಅವಕಾಶವಾಗಿ ಕಾಣಿಸುತ್ತಿದೆ. ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಮತ್ತು ಜಾಗತಿಕ ಶುದ್ಧ ಇಂಧನ ಮಾರುಕಟ್ಟೆಯಲ್ಲಿ ನಮ್ಮ ನಾಯಕತ್ವವನ್ನು ಸ್ಥಾಪಿಸಲು, ನಮಗೆ ಒದಗಿ ಬಂದಿರುವ ಸುವರ್ಣಾವಕಾಶದಂತಿದೆ.



ವಾಚಕರ ವಾಣಿ

ಬೆಳೆ ವಿಮೆ ಪರಿಹಾರದಲ್ಲೂ ತಾರತಮ್ಯ

ಮಲೆನಾಡಿನ ಭಾಗದಲ್ಲಿ ಬೆಳೆ ವಿಮೆಯ ನಷ್ಟ ಪರಿಹಾರ ಪಾವತಿಯಲ್ಲೂ ತಾರತಮ್ಯ ಎಸಗಲಾಗುತ್ತಿದೆ. ಕೆಲವು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿ ಗುಂಟೆಗೆ ₹700ರಂತೆ ನೀಡಿದರೆ, ಕೆಲವೆಡೆ ಗುಂಟೆಗೆ ₹130ರ ಲೆಕ್ಕದಲ್ಲಿ ಪಾವತಿಸಲಾಗಿದೆ. ಒಂದೇ ಹೋಬಳಿ ವ್ಯಾಪ್ತಿಗೆ ಬರುವ ಅಕ್ಕಪಕ್ಕದ ಪಂಚಾಯಿತಿಗಳಲ್ಲಿ ಈ ರೀತಿಯ ತಾರತಮ್ಯ ಎಸಗುವುದು ಎಷ್ಟು ಸರಿ? ಮಳೆಮಾಪನ ಮಾಡಲು ಅಳವಡಿಸಿರುವ ವ್ಯವಸ್ಥೆಯ ದೋಷದಿಂದಾಗಿ ಈ ವ್ಯತ್ಯಾಸವಾಗಿದೆ ಎಂದು ವಿಮಾ ಕಂಪನಿಯ ಅಧಿಕಾರಿಗಳು ಕುಂಟು ನೆಪ ಹೇಳುತ್ತಾರೆ. ಇದು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಹುನ್ನಾರವಷ್ಟೆ. ಸರ್ಕಾರ ರೈತರಿಗೆ ಆಗಿರುವ ಈ ಅನ್ಯಾಯವನ್ನು ಸರಿಪಡಿಸಲು ಕ್ರಮವಹಿಸಬೇಕಿದೆ.

ಗಣಪತಿ ನಾಯ್ಕ್, ಕಾನಗೋಡ

ಬಾಯಿ ಬಡುಕರಿಗೆ ಮೂಗುದಾರ ಹಾಕಿ

ಇತ್ತೀಚೆಗೆ ಸತ್ಯದ ನೆತ್ತಿಯ ಮೇಲೆ ಸುತ್ತಿಗೆಯಿಂದ ಹೊಡೆದಂತೆ ಸುಳ್ಳು ಹೇಳುವವರ ಸಂಖ್ಯೆ ದುಪ್ಪಟ್ಟಾಗುತ್ತಿದೆ. ಆ ಮೂಲಕ ಸಾಮಾಜಿಕ ಸ್ವಾಸ್ಥ್ಯ ಹಾಳು ಮಾಡಲಾಗುತ್ತಿದೆ. ಇದು ಅರಾಜಕತೆಗೂ ದಾರಿಯಾಗುತ್ತದೆ. ಇದಕ್ಕೆ ಕಡಿವಾಣ ಹಾಕುವ ದೃಷ್ಟಿಯಿಂದ ರಾಜ್ಯ ಸರ್ಕಾರವು, ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷಾಪರಾಧಗಳ (ಪ್ರತಿಬಂಧಕ) ಮಸೂದೆ ಮಂಡನೆಗೆ ಸಜ್ಜಾಗಿರುವುದು ದಿಟ್ಟಹೆಜ್ಜೆಯಾಗಿದೆ. ಅಚ್ಚರಿಯೆಂದರೆ, ಯಾರು ಅದನ್ನು ಸ್ವಾಗತಿಸಬೇಕಿತ್ತೊ ಅವರೇ ಅದನ್ನು ವಿರೋಧಿಸುತ್ತಿದ್ದಾರೆ. ಈ ಧೋರಣೆಯು ಕುಂಬಳಕಾಯಿ ಕಳ್ಳನ ಗಾದೆಯನ್ನು ನೆನಪಿಸುತ್ತದೆ.

ಈರಪ್ಪ ಎಂ. ಕಂಬಳಿ, ಬೆಂಗಳೂರು

ಸಮಾವೇಶಕ್ಕೆ ಸರ್ಕಾರಿ ಬಸ್ ಬೇಡ

ರಾಜಕೀಯ ಸಮಾವೇಶಗಳಿಗೆ ಜನರನ್ನು ಕರೆತರಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಬಳಸುವುದು ಸರ್ವೇಸಾಮಾನ್ಯ. ಈ ಹಿಂದೆ ಹಾಸನದಲ್ಲಿ ನಡೆದ ಸರ್ಕಾರದ ಸೇವೆಗಳ ಸಮರ್ಪಣಾ ಸಮಾವೇಶಕ್ಕೂ ಇದೇ ಬಸ್‌ಗಳನ್ನು ಬಳಸಲಾಗಿತ್ತು. ಇದರಿಂದ ಸಾರ್ವಜನಿಕ ಸಾರಿಗೆ ಅವಲಂಬಿಸಿರುವ ಜನರಿಗೆ ತೊಂದರೆಯಾಗುತ್ತದೆ. ಅಲ್ಲದೆ, ಈ ಬಸ್‌ಗಳನ್ನು ಅವಲಂಬಿಸಿರುವ ಶಾಲಾ ಮಕ್ಕಳಿಗೂ ತೊಡಕಾಗಲಿದೆ. ಕಾಲೇಜು ವಿದ್ಯಾರ್ಥಿಗಳ ಸಂಕಷ್ಟ ಹೇಳತೀರದು. ಇನ್ನಾದರೂ ರಾಜಕೀಯ ಸಮಾವೇಶಗಳಿಗೆ ಸರ್ಕಾರಿ ಬಸ್‌ಗಳ ಬಳಕೆ ಕೊನೆಯಾಗಲಿ.

ಸುನೀಲ್ ಟಿ.ಪಿ. ತಳಗವಾದಿ, ಮಳವಳ್ಳಿ

ಕಳಚಿದ ನೈತಿಕ ರಾಜಕಾರಣದ ಕೊಂಡಿ

2019ರ ಭ್ರಷ್ಟಾಚಾರ ಸರ್ವೇಕ್ಷಣಾ ವರದಿ ಬಗ್ಗೆ ಮಾತನಾಡುವ ನೈತಿಕತೆ ಯಾವುದೇ ರಾಜಕೀಯ ಪಕ್ಷಕ್ಕೂ ಇಲ್ಲ. ಭ್ರಷ್ಟಾಚಾರ ಒಂದು ಪಕ್ಷಕ್ಕೆ, ಒಂದು ಅವಧಿಗೆ ಸೀಮಿತವಾಗಿಲ್ಲ. ಕ್ಯಾನ್ಸರ್‌ನಂತೆ ಇಡೀ ರಾಜ್ಯವನ್ನೇ ವ್ಯಾಪಿಸಿದೆ. ವಿಪಕ್ಷವು ಅಧಿಕಾರದ ಚುಕ್ಕಾಣಿ ಹಿಡಿಯಲು, ಆಡಳಿತ ಪಕ್ಷದ ಭ್ರಷ್ಟಾಚಾರವನ್ನೇ ಪ್ರಮುಖ ಅಸ್ತ್ರವಾಗಿ ಬಳಸಿಕೊಳ್ಳುತ್ತದೆ. ಅಧಿಕಾರಕ್ಕೆ ಬಂದ ನಂತರ ಭ್ರಷ್ಟಾಚಾರವನ್ನೇ ತನ್ನ ಕಾರ್ಯಸೂಚಿಯಾಗಿ ರೂಪಿಸಿಕೊಳ್ಳುತ್ತದೆ. ಅತಿಹೆಚ್ಚು ಭ್ರಷ್ಟಾಚಾರ ಎಸಗುವ ಅಧಿಕಾರಿಗಳಿಗೆ ಗೌರವ ಹೆಚ್ಚು! ನಿಷ್ಠಾವಂತರಿಗೆ ವರ್ಗಾವಣೆ, ಅಮಾನತು, ಕಿರುಕುಳದಂತಹ ಶಿಕ್ಷೆ ನೀಡಲಾಗುತ್ತದೆ. ಲೋಕಾಯುಕ್ತ ಅಧಿಕಾರಿಗಳ ದಾಳಿಯು ಕೇವಲ ಕೆಳಹಂತದ ಅಧಿಕಾರಿಗಳು, ಸಿಬ್ಬಂದಿಗೆ ಸೀಮಿತವಾಗಿದೆ. ಸಚಿವರು, ಶಾಸಕರು, ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳ ಮೇಲೆ ನಡೆಯುತ್ತಿಲ್ಲ. ತಪ್ಪಿತಸ್ಥರಿಗೆ ನಿಗದಿತ ಅವಧಿಯೊಳಗೆ ಶಿಕ್ಷೆ ವಿಧಿಸಿದರೆ ಲೋಕಾಯುಕ್ತ ಸಂಸ್ಥೆ ಮೇಲೆ ಜನಸಾಮಾನ್ಯರ ನಂಬಿಕೆ ಮತ್ತಷ್ಟು ಬಲಗೊಳ್ಳುತ್ತದೆ.

ಆಂಜನೇಯ ಎನ್., ಮಧುಗಿರಿ

'ಕಲ್ಯಾಣ'ದ ಮೇಲೆ ಕಳವಿನ ಕರಾಳ ನೆರಳು

ಕಳೆದ ಒಂದು ವರ್ಷದಲ್ಲಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ದಾಖಲಾಗಿರುವ 4,797 ಕಳವು ಪ್ರಕರಣಗಳು, ಆತಂಕದ ಗಂಟೆ ಬಾರಿಸುತ್ತಿವೆ. ಈ ಸಂಖ್ಯೆ ಬರೀ ಅಪರಾಧಗಳ ಲೆಕ್ಕಾಚಾರವಲ್ಲ; ದರೋಡೆ, ಸರಗಳ್ಳತನ, ವಾಹನ ಕಳ್ಳತನದಿಂದ ನೆಮ್ಮದಿ ಕಳೆದುಕೊಂಡ ಸಾವಿರಾರು ಜೀವಗಳ ನೋವಿನ ಪ್ರತಿಬಿಂಬವಾಗಿದೆ. ಬೀದಿ ಗಳಲ್ಲಿ, ಮನೆಗಳಲ್ಲಿ ಅಥವಾ ಹೊಲಗಳಲ್ಲಿ ಎಲ್ಲಿಯೂ ಸುರಕ್ಷತೆ ಇಲ್ಲವೆಂಬ ಭಾವನೆ ಜನಸಾಮಾನ್ಯರನ್ನು ಆವರಿಸಿದೆ. ಜನ ಇಡೀ ಜೀವನದಲ್ಲಿ ಕಷ್ಟಪಟ್ಟು ಸಂಪಾದಿಸಿದ ನಗದು, ಆಭರಣ ಕಳೆದುಕೊಂಡ ನಂತರ ನ್ಯಾಯಕ್ಕಾಗಿ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತುವ ದೃಶ್ಯಗಳು ಹೃದಯ ಕಲಕುತ್ತವೆ. ಜನರ ಬದುಕಿನ ಭದ್ರತೆಯನ್ನು ಕಸಿದುಕೊಳ್ಳುತ್ತಿರುವ ಈ ಕರಾಳ ನೆರಳಿನಿಂದ ಮುಕ್ತಿ ಯಾವಾಗ?

ಬಸವಚೇತನ ಎಂ.ಎಚ್., ಬೀದರ್

ಮನೆಯೊಳಗೂ ಪ್ರವೇಶಿಸಿದ ಫ್ಯಾಸಿಸಂ

ಇತ್ತೀಚೆಗೆ ಸಮಾಜದಲ್ಲಿ ಫ್ಯಾಸಿಸಂ ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಸಮುದಾಯಗಳ ನಡುವೆ ಯುವಜನರಲ್ಲಿ ತಪ್ಪು ಸಂದೇಶ ಬಿತ್ತಲಾಗುತ್ತಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಹಿಂಸೆಯನ್ನು ಹೊಗಳುವ ಪ್ರವೃತ್ತಿಯು ಫ್ಯಾಸಿಸಂಗೆ ಕಾರಣವಾಗುತ್ತಿದೆ. ಸಣ್ಣ ವಿಷಯಕ್ಕೂ ಗುಂಪು ಘರ್ಷಣೆ, ಹಲ್ಲೆ ಯತ್ನ ನಡೆಯುತ್ತಿದೆ. ಕೆಲವು ಸಿನಿಮಾಗಳು ಮತ್ತು ವೆಬ್ ಸರಣಿಗಳಲ್ಲಿ ರೌಡಿಸಂ ಅನ್ನು 'ಹೀರೊಯಿಸಂ' ಎಂದು ತೋರಿಸುತ್ತಿದ್ದು, ಯುವ ಮನಸ್ಸು ಗಾಸಿಗೊಳ್ಳುತ್ತಿದೆ. ಫ್ಯಾಸಿಸಂ ಹಾವಳಿಯು ನಗರ ಪ್ರದೇಶವಷ್ಟೇ ಅಲ್ಲದೆ, ಗ್ರಾಮೀಣ ಪ್ರದೇಶದಲ್ಲಿಯೂ ಹೆಚ್ಚುತ್ತಿರುವುದು ಆತಂಕಕಾರಿ. ಮನೆಯೊಳಗೂ ಪ್ರವೇಶಿಸಿದ್ದು, ಸಮಾಜದಲ್ಲಿ ಭಯದ ವಾತಾವರಣ ನಿರ್ಮಾಣವಾಗುತ್ತಿದೆ. ಬಹುಸಂಖ್ಯಾತರ ವಿರುದ್ಧ ದೊಡ್ಡ ಷಡ್ಯಂತ್ರ ನಡೆದಿದೆ. ಅದನ್ನು ಸರಿಪಡಿಸುತ್ತಿದ್ದೇವೆ ಎನ್ನುವ ಅರ್ಥದಲ್ಲಿ ನ್ಯಾಯದ ಪರಿಭಾಷೆ ಬದಲಿಸುವ ಮಟ್ಟಕ್ಕೆ ತಲುಪಿದೆ. ಇದಕ್ಕೆ ಕಡಿವಾಣ ಹಾಕಬೇಕಿದೆ.

ತೇಜಸ್, ತುಮಕೂರು

ಚುರುಮುರಿ



ಗುಂಡಿ ಯಾನ

• ಸಿ.ಎನ್. ರಾಜು

ಬಿಎಂಟಿಸಿ ಬಸ್ ಹತ್ತಿದ ಶಂಕ್ರಿ, ಸುಮಿ, 'ಬೆಂಗಳೂರಿನ ಗುಂಡಿ ರಸ್ತೆಗಳಲ್ಲಿ ಪ್ರಯಾಣ ಕ್ಷೇಮಕರವಾಗಿರುವುದಿಲ್ಲ. ನಮ್ಮ ಜೀವ ನಿಮ್ಮ ಕೈಯಲ್ಲಿರುತ್ತದೆ, ನೀವೇ ನಮ್ಮೆಲ್ಲರನ್ನೂ ಕಾಪಾಡಬೇಕು...' ಎಂದು ಡ್ರೈವರ್‌ಗೆ ಕೈ ಮುಗಿದರು.

ಡ್ರೈವರ್ ನಕ್ಕ.

'ಬಸ್ ಕುಲುಕುವುದೇ ಸಾರ್?' ಸುಮಿ ಕೇಳಿದಳು.

'ಗುಂಡಿಗಳ ರಸ್ತೆಯಲ್ಲಿ ಹೋಗುವ ಬಸ್ ಕುಲುಕದೆ ಬಳುಕುವುದೇ ಮೇಡಂ?'

'ಗುಂಡಿ ರಸ್ತೆಯ ಪ್ರಯಾಣ ಗಂಡಾಂತಕಾರಿ. ನಿತ್ಯ ಪ್ರಯಾಣಿಸುವ ನಿಮಗೆ ಭಯ ಆಗೋದಿಲ್ವಾ?'

'ಹಹ್ಹಹ್ಹಾ... ಇಲ್ಲಾ ಮೇಡಂ, ಗುಂಡಿ ಮಾರ್ಗದಲ್ಲಿ ಪಳಗಿಬಿಟ್ಟಿದ್ದೇನೆ. ಈ ರೂಟ್‌ನಲ್ಲಿ ಎಷ್ಟು ಗುಂಡಿಗಳಿವೆ, ಅವು ಎಲ್ಲೆಲ್ಲಿವೆ, ಗುಂಡಿಗಳ ಆಳ, ಅಗಲ ಎಷ್ಟು ಎನ್ನುವ ಗುಂಡಿ ಗಣಿತ ಗೊತ್ತಿದೆ' ಎನ್ನುತ್ತಲೇ ಎದುರಾದ ಗುಂಡಿ ಇಳಿಸಲು ಡ್ರೈವರ್ ಸಡನ್ ಬ್ರೇಕ್ ಹಿಡಿದರು. ಹಿಂದಿನ ಸೀಟಿನಲ್ಲಿ ಕುಳಿತಿದ್ದ ಪ್ರಯಾಣಿಕರೊಬ್ಬರು 'ಅಯ್ಯಯ್ಯೋ!...' ಎಂದು ಕಿರುಚಿದರು.

'ಯಾರು, ಏನಾಯ್ತು?' ಶಂಕ್ರಿ ಕೇಳಿದ.

'ಬ್ರೇಕ್ ಹಾಕಿದೆನಲ್ಲಾ, ಯಾರೋ ಮುಗ್ಗರಿಸಿ ಮುಂದಿನ ಸೀಟಿಗೆ ತಲೆ ಗುದ್ದಿಕೊಂಡಿರಬೇಕು. ಇದೆಲ್ಲಾ ಕಾಮನ್!' ಅಂದ್ರು ಡ್ರೈವರ್.

ಪಕ್ಕದಲ್ಲಿದ್ದ ಇಬ್ಬರು ಹೆಂಗಸರು ತಲೆಗೆ ಬ್ಯಾಂಡೇಜ್ ಕಟ್ಟಿಕೊಂಡಿದ್ದರು. 'ನೀವೂ ಮುಂದಿನ ಸೀಟಿಗೆ ತಲೆ ಗುದ್ದಿಕೊಂಡಿರಾ?' ಸುಮಿ ಕೇಳಿದಳು.

'ಇಲ್ಲಾ ಮೇಡಂ, ನಾವು ಸ್ಟಾಂಡಿಂಗ್ ಇದ್ವಿ, ಬ್ರೇಕ್ ಹೊಡೆದ ರಭಸಕ್ಕೆ ಒಬ್ಬರಿಗೊಬ್ಬರು ತಲೆ ಗುದ್ದಿಕೊಂಡ್ವಿ, ಕಂಡಕ್ಟರ್ ಬಂದು ಪ್ರಥಮ ಚಿಕಿತ್ಸೆ ಮಾಡಿದ್ರು, ದ್ವಿತೀಯ ಚಿಕಿತ್ಸೆಗೆ ಆಸ್ಪತ್ರೆಗೆ ಹೋಗಬೇಕು' ಅಂದರು.

'ರಸ್ತೆಯಲ್ಲಿ ಅಪಘಾತವಾಗೋದನ್ನು ನೋಡಿದ್ದೀನಿ, ಬಸ್ ಒಳಗೂ ಅಪಘಾತನಾ? ಇವರ ತಲೆ ರಿಪೇರಿ ಖರ್ಚನ್ನು ಸರ್ಕಾರವೇ ಭರಿಸಬೇಕು' ಒತ್ತಾಯಿಸಿದಳು ಸುಮಿ.

'ನಾವೇ ತಲೆ ರಿಪೇರಿ ಮಾಡಿಕೊಳ್ತೀವಿ, ಸರ್ಕಾರ ರಸ್ತೆ ಗುಂಡಿಗಳನ್ನು ರಿಪೇರಿ ಮಾಡಲಿ...' ಎಂದು ಹೆಂಗಸರು ಬಸ್ ಇಳಿದುಹೋದರು.

ಸಂಗತ

ಯಕ್ಷಗಾನ: ರಚನಾತ್ಮಕ ಬದಲಾವಣೆ ಅಗತ್ಯ

ಮನರಂಜನೆ ಹೆಸರಿನಲ್ಲಿ ಕರಾವಳಿಯ ಯಕ್ಷಗಾನ ಕಲೆಯ ಸಾಂಪ್ರದಾಯಿಕ ಹಾಗೂ ಕಲಾತ್ಮಕ ಸ್ವರೂಪಕ್ಕೆ ಧಕ್ಕೆ ತರುವ ಪ್ರಯತ್ನಗಳು ವ್ಯಾಪಕವಾಗಿವೆ.

• ರವಿ ಮಡೋಡಿ

ಕರಾವಳಿ– ಮಲೆನಾಡಿನ ಸಂಸ್ಕೃತಿಯ ನುಡಿಹಬ್ಬವಾಗಿ, ನಾಡಿಮಿಡಿತವಾಗಿ ಬೆಳೆದಿರುವ ಯಕ್ಷಗಾನವು ಹಲವು ಶತಮಾನಗಳಿಂದ ತನ್ನದೇ ಆದ ಸಾಂಸ್ಕೃತಿಕ, ಆಧ್ಯಾತ್ಮಿಕ ಮತ್ತು ಕಲಾತ್ಮಕ ಶಕ್ತಿಯಿಂದ ಬಾಳಿದೆ. ಕಾಲಕ್ರಮದಲ್ಲಿ ಬದಲಾವಣೆಗಳನ್ನು ಅಳವಡಿಸಿಕೊಂಡಿದ್ದರೂ– ಪೌರಾಣಿಕ ಚೌಕಟ್ಟು, ನಡುಗನ್ನಡದ ಪದ್ಯಸಾಹಿತ್ಯ, ವಿಶೇಷ ಸಂಗೀತ, ಹೆಜ್ಜೆಗಾರಿಕೆಯ ಅಂತಃಸತ್ವ, ಆಹಾರ್ಯ, ವೇಷಭೂಷಣ ಮುಂತಾದ ವಿಷಯಗಳಲ್ಲಿ ಹೆಚ್ಚು ಬದಲಾವಣೆ ಕಂಡಿರಲಿಲ್ಲ. ಆದರೆ, ಕಳೆದ ಕೆಲವು ದಶಕಗಳಲ್ಲಿ ಯಕ್ಷಗಾನದ ರಂಗದಲ್ಲಿ ಗೋಚರಿಸುತ್ತಿರುವ ಅಪಸವ್ಯಗಳು ಕಲೆಯ ಭವಿಷ್ಯದ ಬಗ್ಗೆ ಗಂಭೀರ ಚಿಂತನೆಗೆ ಕಾರಣವಾಗಿವೆ.

ಇತ್ತೀಚೆಗೆ ಪೆರ್ಡೂರು, ಸಾಲಿಗ್ರಾಮ ಸೇರಿದಂತೆ ಕೆಲ ವೃತ್ತಿ ಮೇಳಗಳಲ್ಲಿ ಹಿಂದಿ, ಪಂಜಾಬಿ ಹಾಗೂ ಕನ್ನಡ ಚಿತ್ರಗೀತೆಗಳ ಧಾಟಿಗಳನ್ನು ನೇರವಾಗಿ ಯಕ್ಷಗಾನೀಕರಿಸಿ ರಂಗದಲ್ಲಿ ಪ್ರದರ್ಶಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಬೋಲೋತರಾ ಎಂಬ ಪಂಜಾಬಿ ಹಾಡು, ಶ್ರೀ ಆಂಜನೇಯ ಪ್ರಸನ್ನಾಂಜನೇಯ ಎಂಬ ಕನ್ನಡಗೀತೆ, ಭಾವ ಬಂದರು, ಮಾನಸ ವೀಣೆ, ವರಾಹರೂಪಂ ಮುಂತಾದ ಜನಪ್ರಿಯ ಸಿನಿಮಾ ಹಾಡುಗಳು ಈಗ ಯಕ್ಷಗಾನದ ವೇದಿಕೆಯ ಭಾಗವಾಗುತ್ತಿರುವುದು ನೈಜ ಕಲಾಭಿಮಾನಿಗಳಲ್ಲಿ ಆಕ್ಷೇಪಕ್ಕೆ ಕಾರಣವಾಗಿದೆ. ಯಕ್ಷಗಾನದ ಭಾವ–ಲಯ–ಮಟ್ಟು–ಸಾಹಿತ್ಯ–ರಚನೆಗಳೊಂದಿಗೆ ನೇರ ಸಂಬಂಧವಿಲ್ಲದ ಮತ್ತು ಹೊಂದಿಕೆಯಾಗದ ಇವುಗಳನ್ನು ರಂಗದಲ್ಲಿ ಬಳಸುತ್ತಿರುವುದು ಕಲೆಯ ಆಶಯದ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವ ಹೆಜ್ಜೆಗಳೆಂದು ಭಾವಿಸಬಹುದು.



ಯಕ್ಷಗಾನದ ಸಂಗೀತವು ನಡುಗನ್ನಡದ ಕವಿತೆಯ ಲಯ, ತನ್ನದೇ ಆದ ಮಟ್ಟುಗಳು, ವಿಶಿಷ್ಟ ರಾಗಪದ್ಧತಿ ಮತ್ತು ಆಧ್ಯಾತ್ಮಿಕ ಭಾವಲಯಗಳ ಸಮನ್ವಯದಿಂದ ನಿರ್ಮಿತವಾಗಿದೆ. ಇದರೊಳಗೆ ಪಾಪ್, ಫಿಲ್ಮ್, ಪಂಜಾಬಿ ಅಥವಾ ಇತರ ಚಲನಚಿತ್ರಾಧಾರಿತ ಬೀಟ್‌ಗಳನ್ನು ಸೇರಿಸಿ ನಾಟಕೀಯ ಪರಿಣಾಮಕ್ಕಾಗಿ ಮಾಡುವ ಪ್ರಯತ್ನಗಳು ಯಕ್ಷಗಾನದ ಚೌಕಟ್ಟಿನಲ್ಲಿ ಹೊಂದಿಕೆಯಾಗುವುದಿಲ್ಲ; ಬದಲಾಗಿ ಅವು ಅಗ್ಗದ ಮನರಂಜನೆಯಂತೆ ಮಾತ್ರ ಕಾಣಿಸಿಕೊಳ್ಳುತ್ತವೆ. ಇದಕ್ಕೆ ಹಲವು ಕಾರಣಗಳಿದ್ದರೂ, ಕೆಲ ಕಲಾವಿದರು ತಮ್ಮ ಸಾಮರ್ಥ್ಯದ ಕೊರತೆಯನ್ನು ಮುಚ್ಚಿಕೊಳ್ಳಲು ಇಂತಹ ಅಪಸವ್ಯದ ಕೀಳು ಅಭಿರುಚಿಗಳಿಗೆ ಮನಮಾಡುತ್ತಿರುವಂತೆ ಕಾಣುತ್ತಿದೆ. 90ರ ದಶಕದಲ್ಲಿ ಸಾಮಾಜಿಕ ಪ್ರಸಂಗಗಳ ಪ್ರಯೋಗವು ಯಕ್ಷಗಾನದ ವಿಸ್ತಾರಕ್ಕೆ ಹೊಸ ಬಾಗಿಲು ತೆರೆದಿದ್ದರೂ, ನಂತರದ ದಶಕಗಳಲ್ಲಿ ಪ್ರೇಕ್ಷಕರನ್ನು ಸೆಳೆಯುವ ಪ್ರಕಾರದಲ್ಲಿ ಅನವಶ್ಯಕ ಅಭಿರುಚಿಗಳನ್ನು ರಂಗಕ್ಕೆ ಬಲವಂತವಾಗಿ ತಳ್ಳುವ ಪ್ರವೃತ್ತಿ ಹೆಚ್ಚಾಗಿದೆ. ಈ ಪೈಕಿ ಕೀಳುಮಟ್ಟದ ಹಾಸ್ಯ, ದ್ವಂದ್ವಾರ್ಥಗಳು, ಚಿತ್ರಗೀತೆ ಮಾದರಿಯ ಪದ್ಯಗಳು, ಬೇರೆ ಕಲಾ ಮಾಧ್ಯಮಗಳಿಂದ ಎರವಲು ತಂದ ವೇಷಭೂಷಣಗಳು ಮುಂತಾದ ಅಂಶಗಳು ಕಲಾತ್ಮಕ ಮಿತಿಯನ್ನು ಮೀರಿದ ಭಾಗಗಳಾಗಿ ಪ್ರದರ್ಶನಗಳಲ್ಲಿ ನೋಡುತ್ತಿದ್ದೇವೆ. ವರ್ಷಕ್ಕೆ ಹತ್ತು ಸಾವಿರದಷ್ಟು ಯಕ್ಷಗಾನ ಪ್ರದರ್ಶನಗಳು ನಡೆಯುತ್ತಿರುವುದರಲ್ಲಿ, ಇಂದಿನ ಪರಿಸ್ಥಿತಿಯಲ್ಲಿ ಶೇ 30–40ರಷ್ಟು ಪ್ರದರ್ಶನಗಳು ಅಪಸವ್ಯದ ಪ್ರಭಾವಕ್ಕೆ ಒಳಗಾಗಿವೆ ಎಂಬ ಅಂದಾಜಿದೆ.

ಯಕ್ಷಗಾನದ ತತ್ತ್ವ, ಸಂಪ್ರದಾಯ ಮತ್ತು ಕಲಾತ್ಮಕ ಶ್ರೇಷ್ಠತೆಗೆ ಇದು ಗಂಭೀರ ಸವಾಲಾಗಿದ್ದು, ಇದರ ವಿರುದ್ಧ ಜಾಗೃತಿಯ ಅಗತ್ಯ ಹೆಚ್ಚಾಗಬೇಕಿದೆ.

ಅಗ್ಗದ ಮನರಂಜನೆ ಒಂದು ಹಂತದಲ್ಲಿ ಪ್ರೇಕ್ಷಕರನ್ನು ಆಕರ್ಷಿಸಿದರೂ, ಅದು ಕಲೆಯ ಮೂಲತತ್ತ್ವಗಳಿಗೆ ಹಾನಿ ಮಾಡುತ್ತದೆ. ಯಕ್ಷಗಾನಕ್ಕೆ ಬದಲಾವಣೆಗಳು ಅವಶ್ಯವಾದರೂ, ಬದಲಾವಣೆ ಎಂದರೆ ಮೂಲ ಅಸ್ತಿತ್ವವನ್ನೇ ಕಳೆದುಕೊಳ್ಳುವುದಲ್ಲ ಎಂಬ ಅರಿವು ಅಗತ್ಯ. ಅಭಿರುಚಿಯನ್ನು ರೂಪಿಸುವ ಜವಾಬ್ದಾರಿ ಕಲೆಯ ಮೇಲಿಟ್ಟದ್ದು; 'ಪ್ರೇಕ್ಷಕರು ಬಯಸುತ್ತಾರೆ' ಎಂಬ ನೆಪದಿಂದ ಕಲಾತ್ಮಕ ತಪ್ಪುಗಳನ್ನು ಸಮರ್ಥಿಸುವುದು ಔಚಿತ್ಯವಲ್ಲ. ಪ್ರೇಕ್ಷಕರು ಏನು ನೋಡಬೇಕು, ಯಾವುದು ಯೋಗ್ಯ, ಯಾವುದು ಯೋಗ್ಯವಲ್ಲ ಎಂಬ ಅರಿವು ಕಲೆಯ ಮೂಲಕವೇ ರೂಪುಗೊಳ್ಳಬೇಕು.

ಇಂದು ವೃತ್ತಿ ಮೇಳಗಳು, ಪ್ರಸಂಗಕರ್ತರು, ಪ್ರೇಕ್ಷಕರು ಮತ್ತು ಕಲಾವಿದರು ಸೇರಿ ಯಕ್ಷಗಾನವನ್ನು ಪೌರಾಣಿಕ ಚೌಕಟ್ಟಿನಿಂದ ಹೊರಕ್ಕೆ ಎಳೆಯುವ ಪ್ರವೃತ್ತಿ ಮುಂದುವರಿಸುತ್ತಿರುವ ಪರಿಣಾಮ, ಕಲೆಯ ಮೇಲೆ ಇರುವ ಸಂಸ್ಕೃತಿಪರ ಹೊಣೆಗಾರಿಕೆಗೆ ಹಿನ್ನಡೆಯಾಗುತ್ತಿದೆ. ಇದಕ್ಕೆ ವಿರುದ್ಧವಾಗಿ ತೆಂಕಿನ ಕೆಲವು ಮೇಳಗಳು ಪ್ರತಿವರ್ಷ ಹೊಸ ಪೌರಾಣಿಕ ಪ್ರಸಂಗಗಳನ್ನು ರಚಿಸಿ, ಸಂಪ್ರದಾಯಬದ್ಧ ನಿರ್ದೇಶನದ ಮೂಲಕ ಉತ್ತಮ ಪ್ರದರ್ಶನಗಳನ್ನು ನೀಡುತ್ತಿವೆ. 'ಧರ್ಮ ಸಿಂಹಾಸನ', 'ಸಾಕೇತ ಸಾಮ್ರಾಜ್ಞಿ', 'ಶ್ರೀ ತುಳಸಿ' ಮುಂತಾದ ಪ್ರಸಂಗಗಳು ಸಂಪ್ರದಾಯದೊಳಗೆ ಹೊಸತನವನ್ನು ಸಾಹಿತ್ಯಬದ್ಧವಾಗಿ ತರುವ ಶ್ರೇಷ್ಠ ಉದಾಹರಣೆಗಳಾಗಿವೆ.

ಯಕ್ಷಗಾನದ ಸ್ವರೂಪ ಕೇವಲ ಮನರಂಜನೆಯಲ್ಲ; ಅದು ಬೌದ್ಧಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ವಿಕಸನದ ಶಕ್ತಿ ಹೊಂದಿರುವ ಸಮಗ್ರ ಕಲಾರೂಪ. ಇಂತಹ ಕಲೆಯೊಳಗೆ ಕೀಳುಮಟ್ಟದ ಹಾಡು–ಹಾಸ್ಯಗಳನ್ನು ತರುವುದು ಕಲೆಗೂ ಅದರ ಭವಿಷ್ಯಕ್ಕೂ ಸ್ಪಷ್ಟವಾದ ಹಾನಿ.

ಸಾಂಪ್ರದಾಯಿಕ ಕಲೆಯನ್ನು ಉಳಿಸುವ ಹೊಣೆಗಾರಿಕೆ ಮೇಳಗಳು, ಕಲಾವಿದರು, ಪ್ರಸಂಗಕರ್ತರು, ಮತ್ತು ಯಕ್ಷಗಾನ ಅಭಿಮಾನಿಗಳ ಮೇಲಿದೆ. ಎಲ್ಲರೂ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಿ ಕಲೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಿದಾಗ ಮಾತ್ರವೇ ಯಕ್ಷಗಾನ ತನ್ನ ನಿಜವಾದ ಹೊಳಪನ್ನು ತೋರಿಸಲು ಸಾಧ್ಯ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

‘ಉತ್ತರ’ದ ಸಮಸ್ಯೆಗಳಿಗೆ ಕಿವಿಯಾಗುವುದೇ ಸರ್ಕಾರ?



ಪ್ರಜಾವಾಣಿ ವಾರ್ತೆ

ರಾಜ್ಯದ ದಕ್ಷಿಣದ ಜಿಲ್ಲೆಗಳಿಗೆ ಹೋಲಿಸಿದರೆ ಉತ್ತರದ ಹಲವು ಜಿಲ್ಲೆಗಳು ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿವೆ. ಸರ್ಕಾರವು ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳುವುದಿಲ್ಲ ಎನ್ನುವುದು ಈ ಜಿಲ್ಲೆಗಳ ಹೋರಾಟಗಾರರ ಆರೋಪ. ಚುನಾವಣೆಯಲ್ಲಿ ಗೆಲವು ಸಾಧಿಸಿದ ಶಾಸಕರು, ಸಂಸದರು ಕೂಡ ತಮ್ಮ ಜಿಲ್ಲೆಗಳು ಎದುರಿಸುವ ಸಮಸ್ಯೆಗಳನ್ನು ವಿಧಾನಸಭೆ, ಲೋಕಸಭೆಗಳಲ್ಲಿ ಪ್ರಸ್ತಾಪಿಸುವುದಿಲ್ಲ. ಹೀಗಾಗಿ ತಮ್ಮ ನೋವು ನೀಗುವುದೆಂದು, ಅಭಿವೃದ್ಧಿಯ ಪ್ರಶ್ನೆಗಳಿಗೆ ಉತ್ತರ ಸಿಗುವುದೆಂದು ಎಂದು ಜನ ನೋವು ತೋಡಿಕೊಳ್ಳುತ್ತಿದ್ದಾರೆ. ಈ ಕಾರಣಕ್ಕೇ ಆಗಾಗ ಪ್ರತ್ಯೇಕ ರಾಜ್ಯದ ಕೂಗು ಏಳುತ್ತಿರುತ್ತದೆ.

ಕಲ್ಯಾಣ ಕರ್ನಾಟಕಕ್ಕೆ ಸಂವಿಧಾನ ಕಲಂ 371 (ಜೆ) ಅಡಿಯಲ್ಲಿ ವಿಶೇಷ ಸವಲತ್ತುಗಳನ್ನು ಕಲ್ಪಿಸಿದರೂ ಈ ಭಾಗದ ಜಿಲ್ಲೆಗಳು ಇನ್ನೂ ಅಭಿವೃದ್ಧಿಯತ್ತ ಹೆಜ್ಜೆ ಹಾಕಿಲ್ಲ. ಮೂಲಸೌಕರ್ಯ, ಕೈಗಾರಿಕೆ, ಶಿಕ್ಷಣ, ಕೃಷಿ, ನೀರಾವರಿ, ನಗರ ಅಭಿವೃದ್ಧಿ, ಪ್ರವಾಸೋದ್ಯಮ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಮಸ್ಯೆಗಳು ಹಾಗೆಯೇ ಉಳಿದುಕೊಂಡಿವೆ.

ವಿಧಾನಸಭೆಯ ಚಳಿಗಾಲದ ಅಧಿವೇಶನಕ್ಕೆ ಬೆಳಗಾವಿಯ ಸುವರ್ಣ ವಿಧಾನಸೌಧ ಸಜ್ಜುಗೊಂಡಿದೆ. ರಾಜ್ಯದ ಉತ್ತರದ ಜಿಲ್ಲೆಗಳು, ಅಲ್ಲಿನ ಜನರ ಸಂಕಷ್ಟಗಳ ಬಗ್ಗೆ ಚರ್ಚಿಸುವ ಉದ್ದೇಶದಿಂದ ಬೆಳಗಾವಿಯಲ್ಲಿ ಪ್ರತಿ ವರ್ಷ ಅಧಿವೇಶನ ನಡೆಸಲಾಗುತ್ತದೆ. ಆದರೆ, ಪ್ರತಿ ಬಾರಿಯೂ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವಿನ ವಾಗ್ವಾದ, ಕಲಹಗಳಲ್ಲೇ ಅಧಿವೇಶನ ಮುಗಿದು ಹೋಗುತ್ತಿದೆ. ಈ ಬಾರಿಯಾದರೂ ಹಲವು ವರ್ಷಗಳಿಂದ ಪರಿಹಾರವಾಗದೇ ಉಳಿದಿರುವ ತಮ್ಮ ಸಮಸ್ಯೆಗಳು, ಅಭಿವೃದ್ಧಿಗೆ ಪೂರಕವಾದ ಚರ್ಚೆಗಳು ನಡೆಯಲಿ ಎಂಬುದು ಉತ್ತರ ಕರ್ನಾಟಕದ ಜಿಲ್ಲೆಗಳ ಜನರ ಆಶಯ.

ಈ ಭಾಗದ ಜಿಲ್ಲೆಗಳು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಆಗಬೇಕಿರುವ ಕೆಲಸಗಳನ್ನು ಇಲ್ಲಿ ನೀಡಲಾಗಿದೆ.



ಬೆಳಗಾವಿ

- ಬೆಳಗಾವಿ ಜಿಲ್ಲೆಯನ್ನು ವಿಭಜಿಸಿ, ಗೋಕಾಕ ಹಾಗೂ ಚಿಕ್ಕೋಡಿ ಕೇಂದ್ರಗಳಾಗಿ ಇನ್ನೆರಡು ಹೊಸ ಜಿಲ್ಲೆ ರಚಿಸಬೇಕು ಎಂಬ ಬೇಡಿಕೆ ಎರಡು ದಶಕಗಳಿಂದ ಇದ್ದು, ಹೋರಾಟ ಮುಂದುವರಿದಿದೆ
- ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಮಾದರಿಯಲ್ಲೇ ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ಮಾಡಲಾಗುವುದು ಎಂದು ಹಿಂದಿನ ಬಿಜೆಪಿ ಸರ್ಕಾರ ಘೋಷಿಸಿತ್ತು. ಕಾಂಗ್ರೆಸ್ ಸರ್ಕಾರ ಈ ಬೇಡಿಕೆಗೆ ಸ್ಪಂದಿಸಿಲ್ಲ
- ಹಿಂದಿನ ಸರ್ಕಾರವು ಬೆಳಗಾವಿ ಜಿಲ್ಲೆಯ 14 ಏತ ನೀರಾವರಿಗಳಿಗೆ ಅನುಮೋದನೆ ನೀಡಿ, ₹5,000 ಕೋಟಿ ಅನುದಾನ ಒದಗಿಸಿತ್ತು. ಹಾಲಿ ಸರ್ಕಾರ ಬಂದ ಮೇಲೆ ಯಾವೊಂದು ಏತ ನೀರಾವರಿಗೂ ಹಣ ನೀಡಿಲ್ಲ
- ಗೋಕಾಕ ಜಲಪಾತವನ್ನು ಜೋಗದ ಮಾದರಿಯಲ್ಲಿ ಅಂತರರಾಷ್ಟ್ರೀಯ ಪ್ರವಾಸಿತಾಣವಾಗಿಸಬೇಕು ಎಂಬ ಕೂಗು ಮೂರು ದಶಕಗಳಿಂದ ಇದೆ
- ಬೆಳಗಾವಿ ಜಿಲ್ಲೆಯ ಅಥಣಿ, ರಾಯಬಾಗ, ಕಾಗವಾಡ ಹಾಗೂ ನೆರೆಯ ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಅಪಾರ ಪ್ರಮಾಣದ ದ್ರಾಕ್ಷಿ ಬೆಳೆಯಲಾಗುತ್ತದೆ. ಇದರಲ್ಲಿ ಶೇ 80ರಷ್ಟು ದ್ರಾಕ್ಷಿಯನ್ನು ಒಣಗಿಸಿ ಮಾರಾಟ ಮಾಡಲಾಗುತ್ತದೆ. ಶೇ 20ರಷ್ಟು ಮಾತ್ರ ಸ್ಥಳೀಯ ಮಾರುಕಟ್ಟೆಯಲ್ಲಿ ಲಭ್ಯವಿರುತ್ತದೆ. ದ್ರಾಕ್ಷಿ ಶೀಥಲೀಕರಣ ಘಟಕ ನಿರ್ಮಾಣ ಮಾಡುವುದು ಹಾಗೂ ರಫ್ತು ಮಾಡಲು ಕಾರ್ಗೋ ವಿಮಾನ ವ್ಯವಸ್ಥೆ ಮಾಡಬೇಕು ಎಂಬ ಬೇಡಿಕೆ ಇನ್ನೂ ಈಡೇರಿಲ್ಲ

ಧಾರವಾಡ

- ಧಾರವಾಡದ ವಿದ್ಯಾಲಯಗಳಲ್ಲಿ ಉತ್ತರ ಕರ್ನಾಟಕ ಭಾಗದ ವಿದ್ಯಾರ್ಥಿಗಳು ವಿವಿಧ ಕೋರ್ಸ್‌ಗಳನ್ನು ಮಾಡುತ್ತಿದ್ದಾರೆ. ಹಾಸ್ಟೆಲ್‌ಗಳ ಕೊರತೆಯಿಂದ ಬಹಳಷ್ಟು ವಿದ್ಯಾರ್ಥಿಗಳು ಪಿ.ಜಿ, ಬಾಡಿಗೆ ಕೊಠಡಿ ಮೊದಲಾದವನ್ನು ಅವಲಂಬಿಸಬೇಕಾದ ಸ್ಥಿತಿ ಇದೆ
- ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ಘೋಷಣೆಯಾಗಿದೆ. ಆದರೆ, ಈವರೆಗೆ ಅಂತಿಮ ಅಧಿಸೂಚನೆ ಪ್ರಕಟವಾಗಿಲ್ಲ. ಧಾರವಾಡಕ್ಕೆ ವರ್ತುಲ ರಸ್ತೆ ನಿರ್ಮಾಣ ಪ್ರಸ್ತಾವ, ಮಹದಾಯಿ ಯೋಜನೆ ನನೆಗುದಿಗೆ ಬಿದ್ದಿವೆ
- ಕ್ಯಾನ್ಸರ್ ರೋಗಿಗಳ ಚಿಕಿತ್ಸೆಗಾಗಿ ಹುಬ್ಬಳ್ಳಿಯಲ್ಲಿ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರ ಸ್ಥಾಪನೆಗೆ ಇಲ್ಲಿನ ಕೆಎಂಸಿಆರ್‌ಐ ಆಸ್ಪತ್ರೆಯಿಂದ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದ್ದು, ಅನುಮೋದನೆ ಸಿಕ್ಕಿಲ್ಲ
- ಧಾರವಾಡ ಜಿಲ್ಲೆಯ ನವಲಗುಂದದಲ್ಲಿ ಜವಳಿ ಪಾರ್ಕ್ ನಿರ್ಮಿಸುವುದಾಗಿ 2022ರ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಈವರೆಗೂ ಅದು ಕಾರ್ಯಗತವಾಗಿಲ್ಲ
- ಉತ್ತರ ಕರ್ನಾಟಕ ಭಾಗದ ಜನಪದ ಕಲೆಗಳನ್ನು ಉಳಿಸಿ, ಬೆಳೆಸಲು ಹುಬ್ಬಳ್ಳಿಯ ನೃಪತುಂಗ ಬೆಟ್ಟದ ಸಮೀಪದ ಅಧ್ಯಾಪಕ ನಗರದಲ್ಲಿ ನಿರ್ಮಿಸಲಾಗುತ್ತಿರುವ ‘ಜಾನಪದ ಜಗತ್ತು’ ಕಾಮಗಾರಿ 14 ವರ್ಷಗಳಿಂದ ನನೆಗುದಿಗೆ ಬಿದ್ದಿದೆ



ಗದಗ, ಬೆಳಗಾವಿ, ಧಾರವಾಡ, ಬಾಗಲಕೋಟೆ ಸೇರಿದಂತೆ ನಾಲ್ಕು ಜಿಲ್ಲೆಯ 11 ತಾಲ್ಲೂಕುಗಳಲ್ಲಿ ಹರಿಯುತ್ತಿರುವ ಮಲಪ್ರಭಾ ನದಿಗೆ ಮಹದಾಯಿ ನದಿ ಹಾಗೂ ಕಳಸಾ ಬಂಡೂರಿ ನಾಲೆಗಳನ್ನು ಜೋಡಿಸಿ ಈ ಭಾಗದ ಜಮೀನುಗಳಿಗೆ ನೀರಾವರಿ ರೂಪಿಸುವ ಮಹದಾಯಿ, ಕಳಸಾ ಬಂಡೂರಿ ಯೋಜನೆ ಎರಡು ದಶಕಗಳಿಂದ ಈಡೇರಿಲ್ಲ

ಬಳ್ಳಾರಿ

- ಜಿಲ್ಲೆಯಲ್ಲಿ ವ್ಯಾಪಕವಾಗಿ ಮೆಣಸಿನಕಾಯಿ ಬೆಳೆಯುತ್ತಿದ್ದರೂ ಮೆಣಸಿನಕಾಯಿ ಮಾರುಕಟ್ಟೆ ಇಲ್ಲ
- ಸಂಡೂರಿನಲ್ಲಿ ಮೈನಿಂಗ್ ಕಾಲೇಜು ಆರಂಭಿಸುವುದಾಗಿ ಹೇಳಿದ್ದ ಸರ್ಕಾರ ಈವರೆಗೆ ಕ್ರಮ ಜರುಗಿಸಿಲ್ಲ

ವಿಜಯನಗರ

- ಹೊಸಪೇಟೆಯಲ್ಲಿ 250 ಹಾಸಿಗೆಗಳ ಸುಸಜ್ಜಿತ ಜಿಲ್ಲಾ ಆಸ್ಪತ್ರೆ ಇನ್ನೂ ಆರಂಭವಾಗದ ಕಾರಣ ಆರೋಗ್ಯ ಸೇವೆಗಳ ಸ್ಥಿತಿಯು ಚಿಂತಾಜನಕ ಸ್ಥಿತಿಯಲ್ಲಿದೆ
- ರಾಜ್ಯದಲ್ಲಿಯೇ ಅತ್ಯಧಿಕ ಪ್ರಮಾಣದಲ್ಲಿ ಮಾಜಿ ದೇವದಾಸಿಯರು ಇರುವ ಜಿಲ್ಲೆ ಇದು. ಅಪೌಷ್ಟಿಕತೆ ಸಮಸ್ಯೆ ಇಲ್ಲಿನ ಮಕ್ಕಳನ್ನು ಕಾಡುತ್ತಿದ್ದು, ಸದ್ಯ ಜಿಲ್ಲೆಯಲ್ಲಿ 580 ಅಪೌಷ್ಟಿಕ ಮಕ್ಕಳಿರುವುದನ್ನು ಗುರುತಿಸಲಾಗಿದೆ. ಸುಮಾರು 100 ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಇಲ್ಲ. ಶಾಲಾ ಕಟ್ಟಡಗಳ ಸ್ಥಿತಿಯೂ ಅಷ್ಟೇ
- ಹಂಪಿ ಕನ್ನಡ ವಿಶ್ವವಿದ್ಯಾಲಯವು ಭಾಷೆಯ ಅಭಿವೃದ್ಧಿ, ಸಂಶೋಧನೆಗಾಗಿ ಸ್ಥಾಪನೆಯಾಗಿರುವ ದೇಶದ ಏಕೈಕ ವಿಶ್ವವಿದ್ಯಾಲಯ. ಇಲ್ಲಿ ಬೋಧಕರು, ಅನುದಾನದ ಕೊರತೆ ಕಾಡುತ್ತಿದೆ

ವಿಜಯಪುರ

- ಜಿಲ್ಲೆಯವರೇ ಆದ ಎಂ.ಬಿ.ಪಾಟೀಲ ಅವರು ಬೃಹತ್ ಕೈಗಾರಿಕಾ ಸಚಿವರಾಗಿದ್ದರೂ ಇದುವರೆಗೆ ಕೈಗಾರಿಕೆಗಳು ಆರಂಭವಾಗಿಲ್ಲ. ಮೈಸೂರು ಸ್ಯಾಂಡಲ್ ಸೋಪ್ ಘಟಕ ಮಾಡುತ್ತೇವೆ ಎಂದು ಘೋಷಣೆ ಮಾಡಿದ್ದರೂ ಆರಂಭವಾಗಿಲ್ಲ
- ವಿಜಯಪುರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಆರಂಭಿಸಬೇಕು, ಉದ್ದೇಶಿತ ಖಾಸಗಿ ಸಹಭಾಗಿತ್ವವನ್ನು (ಪಿಪಿಪಿ) ಕೈಬಿಡಬೇಕು ಎಂದು ಆಗ್ರಹಿಸಿ ವಿವಿಧ ವಿದ್ಯಾರ್ಥಿಪರ, ದಲಿತ ಪರ, ಮಹಿಳಾ ಪರ, ರೈತ, ಕಾರ್ಮಿಕ ಪರ, ರಾಜಕೀಯ ಪಕ್ಷಗಳು ಹಾಗೂ ವಿವಿಧ ಸಂಘಟನೆಗಳು ಒಗ್ಗೂಡಿ ಮೂರು ತಿಂಗಳಿಂದ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿವೆ
- ವಿಜಯಪುರ ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದರೂ ಕಾರ್ಯಾರಂಭಿಸಿಲ್ಲ
- ವಿಜಯಪುರದ ಇಟ್ಟಂಗಿಹಾಳದಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಫುಡ್ ಪಾರ್ಕ್ ಸ್ಥಾಪನೆ ಕಾರ್ಯ ಹಾಗೂ ಆಲಮೇಲದಲ್ಲಿ ತೋಟಗಾರಿಕೆ ಕಾಲೇಜು ಸ್ಥಾಪನೆ ಅನುಷ್ಠಾನವಾಗದೇ ನನೆಗುದಿಗೆ ಬಿದ್ದಿವೆ

ಗದಗ

- ಕಪ್ಪತ್ತಗುಡ್ಡವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವಂತೆ ಜನರ ಕೂಗಿಗೆ ಇನ್ನೂ ಬಲ ಬಂದಿಲ್ಲ. ನೀಲನಕ್ಷೆ ಸಿದ್ಧವಾಗಿದ್ದರೂ ಅನುದಾನ ಬಿಡುಗಡೆ ಆಗಿಲ್ಲ
- ಗದಗ ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರಗಳ ಸಮಗ್ರ ಅಭಿವೃದ್ಧಿಗಾಗಿ ತಜ್ಞರು ಅಧ್ಯಯನ ನಡೆಸಿ ಅಂದಾಜು ₹804 ಕೋಟಿ ಅನುದಾನ ಬೇಕು ಎಂದು ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ಆದರೆ, ಈವರೆಗೆ ಹಣ ಬಿಡುಗಡೆಯಾಗಿಲ್ಲ
- ಗದಗ-ಬೆಟಗೇರಿ ಅವಳಿ ನಗರದಲ್ಲಿ 24/7 ಕುಡಿಯುವ ನೀರಿನ ಯೋಜನೆ ಲೋಕಾರ್ಪಣೆಗೊಂಡು ಹಲವು ವರ್ಷಗಳು ಕಳೆದರೂ ಪ್ರತಿದಿನವೂ ನೀರು ಸಿಗುತ್ತಿಲ್ಲ. ಕೆಲವೊಮ್ಮೆ ಮಳೆಗಾಲದಲ್ಲೂ ನೀರಿಗೆ ತತ್ವಾರ ಎದುರಾಗುತ್ತಿದೆ

ಬಾಗಲಕೋಟೆ

1964ರಲ್ಲಿ ಆರಂಭಗೊಂಡ ಕೃಷ್ಣಾ ಮೇಲ್ದಂಡೆ ಯೋಜನೆ ಆರು ದಶಕಗಳು ಕಳೆದರೂ ಪೂರ್ಣಗೊಂಡಿಲ್ಲ. ಇದು ವಿಜಯಪುರ, ಕಲಬುರ್ಗಿ, ರಾಯಚೂರು, ಯಾದಗಿರಿ, ಕೊಪ್ಪಳ, ಬಾಗಲಕೋಟೆ ಸೇರಿದಂತೆ ಹಲವು ಜಿಲ್ಲೆಗಳ 12.14 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ಬೃಹತ್ ಯೋಜನೆಯಾಗಿದೆ. ಮೊದಲ ಹಾಗೂ ಎರಡನೇ ಹಂತದಲ್ಲಿ ಈಗಾಗಲೇ 6.12 ಲಕ್ಷ ಹೆಕ್ಟೇರ್‌ಗೆ ನೀರು ಒದಗಿಸಲಾಗಿದೆ. ಇನ್ನೂ 6 ಲಕ್ಷ ಹೆಕ್ಟೇರ್‌ಗೆ ನೀರು ಒದಗಿಸುವ ಮೂರನೇ ಹಂತದ ಕಾಮಗಾರಿ ಆಗಬೇಕಿದೆ

ಹಾವೇರಿ

- ಅಖಂಡ ಧಾರವಾಡ ಜಿಲ್ಲೆಯಿಂದ ವಿಭಜನೆಗೊಂಡು ಹೊಸ ಜಿಲ್ಲೆಯಾಗಿ 28 ವರ್ಷವಾದರೂ ಹಾವೇರಿ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ವರದಾ, ತುಂಗಭದ್ರಾ ನದಿಗಳು ಹರಿದಿರುವ ಜಿಲ್ಲೆಯಲ್ಲಿ, ನೀರನ್ನು ಸದ್ಬಳಕೆ ಮಾಡಿಕೊಳ್ಳುವ ಯೋಜನೆಗಳಿಲ್ಲ
- ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಗೊಟಗೋಡಿಯಲ್ಲಿ ವಿಶ್ವದ ಏಕೈಕ ಜಾನಪದ ವಿಶ್ವವಿದ್ಯಾಲಯವಿದೆ. ಹಾವೇರಿಯಲ್ಲಿಯೂ ನೂತನವಾಗಿ ಹಾವೇರಿ ವಿಶ್ವವಿದ್ಯಾಲಯ ಸ್ಥಾಪಿಸಲಾಗಿದೆ. ಎರಡು ವಿಶ್ವವಿದ್ಯಾಲಯಗಳಿಗೂ ಅನುದಾನವಿಲ್ಲ
- ಹಾವೇರಿ, ರಾಣೆಬೆನ್ನೂರು, ಹಿರೇಕೆರೂರು, ಬ್ಯಾಡಗಿ, ರಟ್ಟೀಹಳ್ಳಿ, ಶಿಗ್ಗಾವಿ ಹಾಗೂ ಸವಣೂರು ತಾಲ್ಲೂಕುಗಳು ಸಾಕಷ್ಟು ಹಿಂದುಳಿದಿವೆ. ಎಲ್ಲ ತಾಲ್ಲೂಕುಗಳ ಸಮಗ್ರ ಅಭಿವೃದ್ಧಿಗೆ ಹೊಸ ಯೋಜನೆಗಳ ಅಗತ್ಯವಿರುವುದಾಗಿ ಜನರು ಒತ್ತಾಯಿಸುತ್ತಿದ್ದಾರೆ

ಕಲಬುರಗಿ

- ಜಿಲ್ಲೆಯ ಬಹುತೇಕ ನೀರಾವರಿ ಯೋಜನೆಗಳು ವಿಫಲವಾಗಿದ್ದು, ಅಫಜಲಪುರ ತಾಲ್ಲೂಕಿನ ಸೊನ್ನ ಭೀಮಾ ಬ್ಯಾರೇಜ್, ಚಿಂಚೋಳಿ ತಾಲ್ಲೂಕಿನ ನಾಗರಾಳ, ಚಂದ್ರಂಪಳ್ಳಿ ಜಲಾಶಯದ ನೀರು ಹರಿಸಲು ವಿತರಣಾ ಜಾಲವನ್ನು ಬಲಪಡಿಸಲು ಅನುದಾನದ ಅಗತ್ಯವಿದೆ
- ಕಲಬುರಗಿ ತಾಲ್ಲೂಕಿನ ಹೊನ್ನಕಿರಣಗಿ ಬಳಿ ಪಿಎಂ ಮಿತ್ರಾ ಯೋಜನೆಯಡಿ ಆರಂಭಿಸಲು ಉದ್ದೇಶಿಸಿರುವ ಜವಳಿ ಪಾರ್ಕ್ ಅನುಷ್ಠಾನ ಮಾಡಲು ಅನುದಾನಕ್ಕಾಗಿ ಕೇಂದ್ರದ ಮೇಲೆ ಒತ್ತಡ ಹೇರಬೇಕಾಗಿದೆ
- ಹೊಸದಾಗಿ ರಚನೆಯಾದ ಶಹಬಾದ್, ಕಾಳಗಿ, ಕಮಲಾಪುರ, ಯಡ್ರಾಮಿ ತಾಲ್ಲೂಕುಗಳಿಗೆ ತಾಲ್ಲೂಕು ಆಸ್ಪತ್ರೆಗಳನ್ನು ಮಂಜೂರು ಮಾಡಬೇಕು ಎಂಬುದು ಇಲ್ಲಿನ ಜನರ ಆಗ್ರಹ

ಕೊಪ್ಪಳ

- ಕೊಪ್ಪಳ ಸಮೀಪದಲ್ಲಿ ಬಲ್ಡೋಟಾ, ಕಿರ್ಲೋಸ್ಕರ್, ಕಲ್ಯಾಣಿ ಸ್ಟೀಲ್, ಮುಕುಂದ ಸುಮಿ, ಎಕ್ಸ್ ಇಂಡಿಯಾ ಕಾರ್ಖಾನೆಗಳು ವಿಸ್ತರಣೆಗೆ ಮುಂದಾಗಿದ್ದು, ಈ ಕಾರ್ಖಾನೆಗಳು ಆರಂಭವಾದರೆ ಜಿಲ್ಲಾ ಕೇಂದ್ರ ದೂಳುಮಯವಾಗುತ್ತದೆ. ಈಗಾಗಲೇ ಇರುವ ಕಾರ್ಖಾನೆಗಳಿಂದ ಕೊಪ್ಪಳ ತಾಲ್ಲೂಕಿನ 20 ಹಳ್ಳಿಗಳು ನಲುಗಿ ಹೋಗಿವೆ. ಅದೇ ಪರಿಸ್ಥಿತಿ ಜಿಲ್ಲಾ ಕೇಂದ್ರಕ್ಕೂ ಬರುತ್ತದೆ ಎನ್ನುವ ಆತಂಕ ಜನರಲ್ಲಿದ್ದು ಜಿಲ್ಲಾ ಬಚಾವೊ ಆಂದೋಲನ ಸಮಿತಿ ಅನಿರ್ದಿಷ್ಟ ಅವಧಿ ಧರಣಿ ನಡೆಸುತ್ತಿದೆ. ಜಿಲ್ಲೆಯ ಎಲ್ಲ ಪಕ್ಷಗಳ ಜನಪ್ರತಿನಿಧಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಈಗಾಗಲೇ ಭೇಟಿಯಾಗಿದ್ದಾರೆ. ಬಲ್ಡೋಟಾ ವಿಸ್ತರಣೆ ನಿಲ್ಲಿಸಬೇಕು ಎಂದು ಮೌಖಿಕವಾಗಿ ಹೇಳಿದ್ದಾರೆ. ಈ ಕುರಿತು ಸರ್ಕಾರ ಸ್ಪಷ್ಟನಿರ್ಧಾರ ಕೈಗೊಳ್ಳಬೇಕು, ಲಿಖಿತವಾಗಿ ಆದೇಶ ಹೊರಡಿಸಬೇಕು ಎಂಬುದು ಜಿಲ್ಲೆಯ ಜನರ ಆಗ್ರಹ
- ತುಂಗಭದ್ರಾ ಜಲಾಶಯದಲ್ಲಿ ಅಂದಾಜು 30 ಟಿಎಂಸಿ ಅಡಿಯಷ್ಟು ಹೂಳು ತುಂಬಿಕೊಂಡಿದೆ. ಜಲಾಶಯ ತುಂಬಿದ ಬಳಿಕ ವ್ಯರ್ಥವಾಗಿ ಹರಿಯುವ ನೀರು ನದಿ ಪಾಲಾಗುವ ಬದಲು ಸಂಗ್ರಹಿಸಲು ಜಿಲ್ಲೆಯ ಕನಕಗಿರಿ ತಾಲ್ಲೂಕಿನ ನವಲಿ ಗ್ರಾಮದ ಬಳಿ ಸಮಾನಾಂತರ ಜಲಾಶಯ ನಿರ್ಮಿಸಲು ₹13,040 ಕೋಟಿ ಮೊತ್ತದ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿದೆ. ತುಂಗಭದ್ರಾ ಜಲಾಶಯದ ನೀರಿನಲ್ಲಿ ಆಂಧ್ರ ಹಾಗೂ ತೆಲಂಗಾಣ ರಾಜ್ಯಗಳು ಪಾಲು ಹೊಂದಿದ್ದು, ಆ ರಾಜ್ಯಗಳಿಂದ ಸ್ಪಂದನೆ ಸಿಗದ ಕಾರಣ ಯೋಜನೆ ಕಾರ್ಯರೂಪಕ್ಕೆ ಬಂದಿಲ್ಲ

ಬೀದರ್

- 1987ರಲ್ಲಿ ಕಾರಂಜಾ ಯೋಜನೆಯಲ್ಲಿ ಜಮೀನು ಕಳೆದುಕೊಂಡು ಸಂತ್ರಸ್ತರಾದ ರೈತರಿಗೆ ಪರಿಹಾರ ನೀಡಬೇಕೆನ್ನುವುದು ನಾಲ್ಕು ದಶಕಗಳ ಪ್ರಮುಖ ಬೇಡಿಕೆಯಾಗಿದೆ. ಹೋದ ವರ್ಷ ರೈತರು ಸುದೀರ್ಘ ಒಂದು ವರ್ಷ ಧರಣಿ ನಡೆಸಿದ್ದರು. ಸರ್ಕಾರ ವಿವಿಧ ರೀತಿಯ ನೆಪಗಳನ್ನು ಒಡ್ಡಿ ಪರಿಹಾರ ವಿಳಂಬ ಮಾಡುತ್ತಲೇ ಇದೆ
- ಕಾರಂಜಾ–ಮಾಂಜ್ರಾ ನದಿ ಜಲಾನಯನ ಪ್ರದೇಶದಲ್ಲಿ ಎರಡು ಏತ ನೀರಾವರಿ ವ್ಯವಸ್ಥೆಗಳನ್ನು ನಿರ್ಮಿಸುವ ಪ್ರಸ್ತಾವ ರಾಜ್ಯ ಸರ್ಕಾರದ ಮುಂದಿದೆ. ಈ ಯೋಜನೆಗಳು ಕೃಷ್ಣಾ ನದಿ ಜಲಾನಯನ ಪ್ರದೇಶದಿಂದ 8.4 ಟಿಎಂಸಿ ಅಡಿ ನೀರನ್ನು ಮತ್ತು ಬಚಾವತ್ ನದಿ ನೀರು ಹಂಚಿಕೆ ಪ್ರಕಾರ ಗೋದಾವರಿ ಜಲಾನಯನ ಪ್ರದೇಶದಿಂದ ಬಳಕೆಯಾಗದ ನೀರನ್ನು ಬಳಸಲು ಉದ್ದೇಶಿಸಲಾಗಿದೆ. ಆದರೆ, ಇದಕ್ಕೆ ಅನುದಾನ ನೀಡಿಲ್ಲ.
- ಕಲ್ಯಾಣ ಕರ್ನಾಟಕಕ್ಕೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ವಿಶೇಷ ಮೀಸಲಾತಿ ಸೌಲಭ್ಯ ಕಲ್ಪಿಸುವ 371 (ಜೆ) ಸಮರ್ಪಕ ಅನುಷ್ಠಾನಗೊಳಿಸಬೇಕು. ಬ್ಯಾಕ್‌ಲಾಗ್ ಸೇರಿದಂತೆ ಎಲ್ಲಾ ರೀತಿಯ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡಬೇಕು ಎನ್ನುವ ಆಗ್ರಹವೂ ಇದೆ

ಯಾದಗಿರಿ

- ಯಾದಗಿರಿ ಜಿಲ್ಲೆಯಾಗಿ 15 ವರ್ಷಗಳು ಕಳೆದರೂ ಜಿಲ್ಲಾ ಕೇಂದ್ರದಲ್ಲಿ ಒಳಚರಂಡಿ ವ್ಯವಸ್ಥೆಯೇ ಇಲ್ಲ. ಕೊಳಚೆ ನೀರನ್ನು ಸಂಸ್ಕರಣೆ ಮಾಡದೆ ಭೀಮಾ ನದಿಗೆ ಬಿಡಲಾಗುತ್ತಿದೆ. ಇದರ ಜೊತೆಗೆ ಯಾದಗಿರಿ ನಗರಕ್ಕೆ ರಿಂಗ್ ರಸ್ತೆಯೂ ಇಲ್ಲ
- ಯಾದಗಿರಿ ತಾಲ್ಲೂಕಿನ ಕಡೇಚೂರು–ಬಾಡಿಯಾಳ ಸೀಮೆಯಲ್ಲಿ ಕೈಗಾರಿಕಾ ವಲಯ ಸ್ಥಾಪನೆಗೆ 3,300 ಎಕರೆ ಜಮೀನು ವಶಪಡಿಸಿಕೊಳ್ಳಲಾಗಿದೆ. ಆದರೆ, ಸೂಕ್ತ ಕೈಗಾರಿಕೆಗಳು ಬರದೆ ಇದು ಈಗ ರಾಸಾಯನಿಕ ಔಷಧಿ ಕಂಪನಿಗಳಿಗೆ ಜಾಗ ಮಾಡಿಕೊಟ್ಟಂತೆ ಆಗಿದೆ. ಭೂಮಿ ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರವೂ ಬಂದಿಲ್ಲ
- ಜಿಲ್ಲೆಯು ಭತ್ತದ ಕಣಜ ಎಂದು ಕರೆಸಿಕೊಳ್ಳುತ್ತಿದ್ದರೂ ಅಕ್ಕಿ ಗಿರಣಿಗಳು ಸ್ಥಾಪನೆಯಾಗಿಲ್ಲ. ರೈತರು ಹೆಚ್ಚಾಗಿ ಹತ್ತಿ ಮತ್ತು ಬ್ಯಾಡಗಿ ಮೆಣಸಿನಕಾಯಿ ಬೆಳೆ ಬೆಳೆಯುತ್ತಾರೆ. ಆದರೆ ಸೂಕ್ತ ಮಾರುಕಟ್ಟೆ ಇಲ್ಲವಾಗಿದೆ. ಹತ್ತಿ ಸಂಶೋಧನಾ ಕೇಂದ್ರ ಸ್ಥಾಪಿಸುವ ಬೇಡಿಕೆಗೆ ಮನ್ನಣೆ ಸಿಗುತ್ತಿಲ್ಲ




ರಾಯಚೂರು



- ಜಿಲ್ಲೆಯ ನದಿ ತೀರದ ಗ್ರಾಮಗಳ ರೈತರ ಹೊಲಗಳಿಗೆ ಪ್ರಸ್ತುತ ಮಾರ್ಚ್ 30ರ ವರೆಗೆ ಮಾತ್ರ ನೀರು ಪೂರೈಕೆಯಾಗುತ್ತಿದೆ. ಆಲಮಟ್ಟಿ ಡ್ಯಾಂ ಎತ್ತರಿಸಿದರೆ ಏಪ್ರಿಲ್ 15ರ ವರೆಗೂ ನೀರು ಲಭಿಸಲಿದೆ. ಇದರಿಂದ ಬೇಸಿಗೆಯಲ್ಲಿ ನೀರಿನ ಕೊರತೆ ನೀಗಲಿದೆ. ಜಿಲ್ಲೆಯಲ್ಲಿ ಮುಖ್ಯ ಕಾಲುವೆಗಳು ನಿರ್ಮಾಣವಾಗಿವೆ. ಇದರ ಜತೆಗೆ ಹೊಲಗಾಲುವೆಗಳೂ ನಿರ್ಮಾಣವಾಗಬೇಕು ಎಂಬುದು ರೈತರ ಒತ್ತಾಯ
- ಜಿಲ್ಲೆಯಲ್ಲಿ ಕೃಷ್ಣಭಾಗ್ಯ ಜಲ ನಿಗಮದ ‘ಬಿ’ ಸ್ಕೀಮ್ (ಅಣೆಕಟ್ಟು ಎತ್ತರ ಕಾಮಗಾರಿ ನಡೆದಾಗ ನೀರು ಹರಿಸುವುದು) ಯೋಜನೆಯಡಿ ನಾರಾಯಣಪುರ ಬಲದಂಡೆ 9 (ಎ) ವಿತರಣಾ ಕಾಲುವೆ ಕಾಮಗಾರಿ 13 ವರ್ಷಗಳಿಂದ ನನೆಗುದಿಗೆ ಬಿದ್ದಿದೆ
- ಯುಕೆಪಿ–3ರಲ್ಲಿ ನಾರಾಯಣಪುರ ಬಲದಂಡೆ ಕಾಲುವೆ 150 ಕಿಮೀ ವರೆಗೆ ವಿಸ್ತರಣೆ ಹಾಗೂ ರಾಂಪುರ ಏತ ನೀರಾವರಿ ಯೋಜನೆ 20ರಿಂದ 27 ಕಿ.ಮೀ ವರೆಗೆ ವಿಸ್ತರಣೆ ಕಾಮಗಾರಿ ಮುಗಿದಿದೆ. ಲಿಂಗಸುಗೂರು ತಾಲ್ಲೂಕಿನ ಹೊನ್ನಹಳ್ಳಿ, ಯರಡೋಣಾ, ಗುಡದನಾಳ ಸೇರಿದಂತೆ ಇತರೆ ಗ್ರಾಮಗಳಲ್ಲಿನ ರೈತರ ಜಮೀನು ದಾಖಲೆಯಲ್ಲಿ ಕೆಲ ದೋಷಗಳು ಇರುವುದರಿಂದ ಭೂ ಪರಿಹಾರ ಬಂದಿಲ್ಲ
- ಜಿಲ್ಲೆಯಲ್ಲಿ ಹೆದ್ದಾರಿ ನಿರ್ಮಾಣ ಕಾಮಗಾರಿ ನಿಧಾನಗತಿಯಲ್ಲಿ ಸಾಗಿರುವ ಕಾರಣ ಸಾರಿಗೆ ಸಂಪರ್ಕ ಹಾಗೂ ವ್ಯಾಪಾರ ವಹಿವಾಟಿನ ಮೇಲೆ ಪರಿಣಾಮ ಬೀರಿದೆ. ರಸ್ತೆಗಳು ಸರಿಯಾಗಿ ಇಲ್ಲದ ಕಾರಣ ರೈತರರು ಕೃಷಿ ಉತ್ಪನ್ನಗಳನ್ನು ಎಪಿಎಂಸಿಗೆ ಸಾಗಿಸಲು ನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ
- ಜಿಲ್ಲೆಯಲ್ಲಿ 110 ಜಿನ್ನಿಂಗ್ ಫ್ಯಾಕ್ಟರಿಗಳಿದ್ದರೂ ಜವಳಿ ಪಾರ್ಕ್ ನಿರ್ಮಿಸಲು ಉದ್ಯಮಿಗಳು ಮುಂದೆ ಬರುತ್ತಿಲ್ಲ. ಸಾರಿಗೆ ಸಮಸ್ಯೆಯೇ ಅಭಿವೃದ್ಧಿಗೆ ತೊಡಕಾಗಿದೆ

ಅನ್ನದ್ರೋಹದ ಚರಿತ್ರೆಗೆ ಹಾಡಬೇಕಿದೆ ಅಂತ್ಯ



ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ಕಾಗೆ ತನ್ನ ಪರಿಶ್ರಮದಿಂದ ಸಂಪಾದಿಸಿದ ಅನ್ನವನ್ನು ಉಪಾಯ ಮಾಡಿ ಹೊಡೆದುಕೊಂಡು ಹೋದ ನರಿಯನ್ನು ‘ಜಾಣ’ನೆಂದೂ ಕಳೆದುಕೊಂಡ ಕಾಗೆಯನ್ನು ‘ದಡ್ಡ’ನೆಂದೂ ವ್ಯಾಖ್ಯಾನಿಸಿದ ನಮ್ಮ ಸಾಂಸ್ಕೃತಿಕ ಪರಂಪರೆ ಮಗ್ಗಲು ಬದಲಿಸಿದಂತಿದೆ. ನಯವಾದ ಮಾತುಗಳ ಮೂಲಕ ಒಬ್ಬರ ಬೆವರಿನ ಫಲವನ್ನು ಕಸಿದುಕೊಳ್ಳುವುದು ಮೋಸಗಾರ ಬುದ್ಧಿ. ಇಂಥ ಸಾಂಸ್ಕೃತಿಕ ವಿದ್ರೋಹದ ಚರಿತ್ರೆಯನ್ನು ಹೀಗೆ ಹೊಸ ಬಗೆಯಲ್ಲಿ ವ್ಯಾಖ್ಯಾನಿಸುತ್ತಿರುವುದು ಜಾಣರಿಗೆ ನಡುಕ ಹುಟ್ಟಿಸಿದಂತಿದೆ. ಕೈ ಕೆಸರು ಮಾಡಿಕೊಳ್ಳದೆಯೇ ತಾವು ಇದುವರೆಗೆ ಬಾಯ್ತುಂಬ ಉಣ್ಣುತ್ತಿದ್ದ ಮೊಸರಿನಲ್ಲಿ ಮರಳು ಸಿಕ್ಕಂತಾಗಿದೆ. ದುಡಿವವರ ಆಲೋಚನೆಗಳಿಗೆ ಚಲನೆ ಸಿಕ್ಕಂತೆಲ್ಲಾ ಜಾಗರೂಕರಾಗುವ ಚರಿತ್ರೆ ಹೊಂದಿರುವ ಜಾಣರ ಲೆಕ್ಕಾಚಾರ ಚುರುಕುಗೊಂಡಿದೆ. ತಮ್ಮ ಲಾಭದಾಯಕ ದಿಕ್ಕಿನ ಕಡೆಗೆ ಆ ಚಲನೆಯನ್ನು ತಿರುಗಿಸಬಲ್ಲ ಚಾಣಾಕ್ಷ ನಿರ್ದೇಶಕ ತಂತ್ರಗಳು ಅಲ್ಲಿವೆ.

ದುಡಿಯಲಾರದೆ ಮೈಬೆಳೆಸಿಕೊಂಡು ಕೊಬ್ಬಿದವರ ಮಿದುಳು ಬೆವರಿನವರ ಬದುಕಿಗೆ ಮೌಲ್ಯಾದರ್ಶಗಳ ಪಾಠ ಹೇಳಲಾರಂಭಿಸಿದೆ. ಇದು ಸಮಾಜದ ನಿಜವಾದ ಉತ್ಪಾದಕರನ್ನು ಎಂದಿನಂತೆ ತುಳಿದು ಕತ್ತಲಿಗೆ ತಳ್ಳುವ ಕುತಂತ್ರ. ದೇಶ ದೇವರು ಧರ್ಮ ಜಾತಿಗಳ ಹೆಸರಿನ ಜೊತೆಗೆ ದಿವ್ಯ ಸಂಸ್ಕೃತಿ, ಭವ್ಯ ಪರಂಪರೆಯಂತಹ ಆದರ್ಶಗಳನ್ನು ತಳುಕು ಹಾಕಲಾಗಿದೆ. ತಾವು ಹೇಳಿದಂತೆಲ್ಲಾ ಕೇಳಿದ ಸಿಂಹ ತನ್ನ ನೀರನೆರಳನ್ನು ತಾನು ಅರಿಯದೆ ಹೋದ ಕಥೆಯ ಜಾಣತನ ಇನ್ನು ಮುಂದೆಯೂ ನಡೆದೀತು ಎಂಬ ಭರವಸೆ ನರಿಗಳಿಗೆ ಇದ್ದಂತಿಲ್ಲ.

ಶತಶತಮಾನಗಳ ಇಂತಹ ಅನ್ನದ್ರೋಹದ ಪರಂಪರೆಗೆ ಕರುಳ ಕಾಳಜಿ ಇದ್ದದ್ದು ಕಡಿಮೆ. ಹಾಗಾಗಿ ನಮ್ಮ ನೆಲದಲ್ಲಿ ಹಸಿದು ಅಸುನೀಗಿದವರಿಗಿಂತ ತಿಂದು ತೀರಿಕೊಂಡವರೇ ಹೆಚ್ಚು. ಕಸಿದುಕೊಂಡವರ ಮುಂದೆ ದುಡಿಯುವವರ ಸಣ್ಣಪುಟ್ಟ ಸಂಭ್ರಮಗಳು ಮುಗಿಲು ಮುಟ್ಟಿವೆ. ಅನ್ನ ಕಸಿದವರ ವರಸೆಗಳು ಬದಲಾಗುತ್ತಿವೆ. ಬೆವರಿಗೆ ಬಾಗುವುದು ಕಾಣುತ್ತಿದೆ. ಗುಡಿಸಲುಗಳಲ್ಲಿ ಗುಡುಗು, ಬಂಗಲೆಯಲ್ಲಿ ನಡುಕ ಕಂಡುಬರುತ್ತಿದ್ದಂತೆ ಹಣೆಮುಟ್ಟಿ ನಮಿಸುವ ನಡೆನಟನೆ ತಣ್ಣಗೆ ಆವರಿಸಿಕೊಳ್ಳುತ್ತಿದೆ. ಅತಿವಿಧೇಯತೆಯ ನುಡಿಗಳು ಬಗೆಬಗೆಯ ಅರ್ಥವಿನ್ಯಾಸದಲ್ಲಿ ಅನಾವರಣಗೊಳ್ಳುತ್ತಿವೆ.

ದೇಶಕ್ಕಾಗಿ ದುಡಿಮೆ, ಬೆವರಿಗೆ ಭೇದವಿಲ್ಲ. ನಿಸ್ವಾರ್ಥ ದುಡಿಮೆ ಎಲ್ಲರ ಆದರ್ಶ, ನಿರಪೇಕ್ಷ ಕರ್ತವ್ಯ ಮುಖ್ಯ, ತ್ಯಾಗವೇ ನಮ್ಮ ಧರ್ಮ ಎಂಬ ದೊಡ್ಡ ದನಿಗೆ ಹೆಜ್ಜೆ ಹಾಕಲು ಕಾಗೆಸಂತತಿಯು ತುದಿಗಾಲಲ್ಲಿ ನಿಂತಂತಿದೆ. ಮೌಲ್ಯಗಳಿಗೆ ಹೆಗಲು ಕೊಟ್ಟು ರೂಢಿಯಿರುವ ಬೆವರ ಮಂದಿಗೆ ಈ ನೀತಿಗಳ ಆಳದಲ್ಲಿರುವ ಪಕ್ಷಪಾತದ ಅರಿವಿಲ್ಲ. ಉಳ್ಳವರಿಗಿಲ್ಲದ ಆದರ್ಶಗಳ ಹಂಗು ಬರಿಯ ಬಡಪಾಯಿಗಳಿಗೇಕೆ? ಕೆಲವರ ಹೊಟ್ಟೆ ತುಂಬಿಸಲು ಹಲವರು ಜೀವ ತೇಯುವ ನಿರಂತರ ಕಾಯಕದಲ್ಲಿ ನಿರತರಾದ ಇತಿಹಾಸ ನಮಗಿದೆಯಲ್ಲಾ. ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಎಂದು ‘ಬೇಡ’ ‘ಬೇಡ’ ಎಂದದ್ದನ್ನೆಲ್ಲಾ ಬೇಕು ಅಂತ ಮಾಡುತ್ತ ಬಂದವರ ನಡುವೆ ಕದಿಯದ ಕೊಲ್ಲದ ಸುಳ್ಳಾಡದ ಅಮಾಯಕ ಉತ್ಪಾದಕರಿದ್ದಾರೆ. ಬೆವರಿನ ಬದುಕಿಗೆ ಆದರ್ಶಗಳೇ ಆಸರೆಯಾಗಿವೆ. ಅನುತ್ಪಾದಕರಿಗೆ ಅವೇ ಆದರ್ಶಗಳು ಸುಲಿಗೆಯ ಸಾಧನಗಳಾಗಿವೆ.

ದುಡಿಮೆಯನ್ನೇ ನಂಬಿ ಬದುಕುತ್ತಾ ಅದರಲ್ಲೇ ದೇವರನ್ನೂ ಕಂಡುಕೊಳ್ಳುತ್ತಾ ಬಂದ ಬಡವರು ನಿಜವಾಗಿಯೂ ಅನ್ನದಾತರು. ಆದರೆ ಕುನೀತಿ ಕುತಂತ್ರಗಳ ಮೂಲಕ ಅವರನ್ನು ನಿತ್ಯವೂ ಶಿಲುಬೆಗೇರಿಸುವ ಪೂರ್ವಬುದ್ಧಿಯನ್ನು ಬಿಡಬೇಕು. ದುಡಿಯುವವರ ಅನ್ನ ಕಸಿಯುವ ಸಾಂಸ್ಕೃತಿಕ ವಿದ್ರೋಹದ ಚರಿತ್ರೆಗೆ ಇತಿಶ್ರೀ ಹಾಡಬೇಕು. ಹಾಗೇ ನಯವಂಚನೆಯನ್ನು ಜಾಣತನವೆನ್ನುವ, ತುತ್ತು ಕಳೆದುಕೊಂಡ ಬಿಡುಗಣ್ಣುಗಳ ನೋಟವನ್ನು ಅವಮಾನಿಸುವ ವ್ಯಾಖ್ಯಾನ ಇನ್ನಾದರೂ ನಿಲ್ಲಬೇಕು. ಅನ್ನದ್ರೋಹದಿಂದ ದೇಶಕ್ಕೂ ಧರ್ಮಕ್ಕೂ ಕೇಡು. ಅನ್ನಗೌರವದಿಂದ ಬೆವರಿಗೆ ಬಲ, ಭರವಸೆ. ಅನ್ನವಿದ್ದರೆ ಜೀವ. ಜೀವವಿದ್ದರೆ ದೇಶ. ಇಲ್ಲದಿದ್ದರೆ ಎಲ್ಲ ಬರಿ ಮಣ್ಣು, ಮಸಣ. ❖

ಗುಂಡಣ್ಣ



ಪದಬಂಧ 6247


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈ ಪರಿ ಹರಡಿರುವ ಸುವಾಸನೆ! (4)
5.ದೇವಾಲಯದ ಸಭಾಮಂಟಪ (4)
6.ಶ್ರೀ ಮಾರಿಕಾಂಬ ದೇವಸ್ಥಾನವಿರುವ ಈ ಊರು ಉತ್ತರಕನ್ನಡ ಜಿಲ್ಲೆಯಲ್ಲಿದೆ (3)
9.ಹಗರಣದಲ್ಲಿ ಸಿಕ್ಕಿರುವ ದುಡ್ಡು! (2)
10.ಅವಸರಕ್ಕೊಂದು ಪರ್ಯಾಯ ಪದ (3)
11.ಬಡಗಣ ದಿಕ್ಕಿನಲ್ಲಿ ಕಾಣುತ್ತಿರುವ ಗುಂಪು! (2)
13.ಕನಸು ಇಲ್ಲಿ ನಿಜವಾಗಿದೆ! (3)
15.ತಾಯಿಯ ಮನೆ ಕಿಟಕಿ (4)
17.ಹಾರ ಧರಿಸಿ ಮಾಡಿದ ಉದ್ಯೋಗ (4)

ಮೇಲಿಂದ ಕೆಳಕ್ಕೆ

1.ಪ್ರತ್ಯಯಸಹಿತವಾದ ಶಬ್ದ (2)
2.ಕನ್ನಡಿಗನು ಹಿಡಿದಿರುವ ಲೆನ್ಸು! (3)
3.ಅವನಿರುವ ಭೂಮಿ! (3)
4.ನಡುವೆ ಗರವಿದ್ದರೆ ಈ ಗೊಂದಲ! (4)
6.ತಲೆಯನ್ನು ಕಾಪಾಡುವ ಸಾಧನ (4)
7.ಕಿರಿಧಾನ್ಯವೆಂದು ಕರೆಯಲಾಗುತ್ತಿದ್ದ ಧಾನ್ಯಗಳಿಗೆ ಈ ಹೊಸ ಹೆಸರು ಬಂದಿದೆ (4)
8.ಓಟನ್ನು ನೀಡುವಿಕೆ (4)
9.ಹಸುವಿನ ಹತ್ತಿರವಿರುವ ಎಳೆಮಗು (4)
11.ಕದಂಬರ ರಾಜಧಾನಿಯಾಗಿದ್ದ ಈ ಊರಿನಲ್ಲಿ ಮಧುಕೇಶ್ವರ ದೇವಾಲಯವಿದೆ (4)
12.ಕಾಯ ಬಗ್ಗಿಸಿ ಮಾಡುವ ಕೆಲಸ! (3)
14.ಮುಖವಿಲ್ಲಿ ಉಲ್ಟಾ ಪಲ್ಟಾ ಕಾಣುತ್ತಿದೆ (3)
16.ಮದುವೆಯ ಗಂಡು (2)



6246ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಕಾಶ 3.ವಿಕೋಪ 4.ವಸ್ತುಸ್ಥಿತಿ 6.ವ್ಯಸನ 7.ಅಧಿಕಾರಿ 8.ತಪ್ಪಲೆ 9.ಸರಸ್ವತಿ 12.ಬುದ್ಭುದ 13.ವನಚರ 15.ಗಹ್ವರ 16.ಮಹಾರಾಜ

ಮೇಲಿಂದ ಕೆಳಕ್ಕೆ:
1.ಅಪವ್ಯಯ 2.ಶವ 3.ವಿಭ್ರಮ 5.ತಿಜೋರಿ 7.ಅಲೆ 8.ತತಿ 9.ಸದ್ಭಾವ 10.ಮದಗಜ 11.ಗಟಾರ 14.ರಮ

ಸುಡೊಕು 6631

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	1		3		8		2	
8		6				5		3
	5		4		6		7	
5			1		2		4	
	2	9						
6			8		9	2		5
	8		6		1		9	
7		2		8		3		1
	6		2		3		5	

6630 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

08 ಡಿಸೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಚತುರ್ಥಿ ಗಂ. 16-04 **ನಕ್ಷತ್ರ:** ಪುಷ್ಯ ಗಂ. 26-53 **ಯೋಗ:** ಬ್ರಹ್ಮ ಗಂ. 17-02 **ಕರಣ:** ಬಾಲವ ಗಂ. 16-04 ವೃಶ್ಚಿಕ ಮಾಸದ 22 ನೇ ದಿನ. **ಮಳೆ ನಕ್ಷತ್ರ :** ಜ್ಯೇಷ್ಠ 2 ನೇ ಪಾದ. **ರಾಹುಕಾಲ :** ಬೆಳಿಗ್ಗೆ 07-30 - 09-00, **ಸೂರ್ಯೋದಯ :** 06-45 **ಸೂರ್ಯಾಸ್ತ :** 05-59, ಮುಸ್ಲಿಂ ದಿನಾಂಕ : 16 ಜುಮಾದುಸ್ಸಾನಿ, **ದಿನ ವಿಶೇಷ :** ಸಂಕಷ್ಟಹರ ಚತುರ್ಥಿ (ಚಂದ್ರೋದಯ: ರಾತ್ರಿ 09-33). **ಅದೃಷ್ಟ ಸಂಖ್ಯೆ :** 3, 7

ಮೇಷ: ಹೊಸ ಕೆಲಸಗಳ ಜವಾಬ್ದಾರಿಯನ್ನು ನಿಮ್ಮದಾಗಿ ಮಾಡಿಕೊಳ್ಳುತ್ತಿರುವ ಕಾರಣ ಬಿಡುವಿಲ್ಲದ ದುಡಿಮೆಯ ದಿನಗಳು ನಿಮ್ಮದಾಗಲಿವೆ. ನಿಶ್ಚಿತ ಗುರಿ ಸಾಧಿಸಲು ಬಹಳ ಶ್ರಮಪಡಬೇಕಾಗಿಲ್ಲ.

ವೃಷಭ: ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾದವರನ್ನು ಆ ಜಾಲದಿಂದ ಹೊರ ತರಲು ಪ್ರಯತ್ನ ನಡೆಸುವಿರಿ. ಸರ್ಕಾರಿ ನೌಕರರಿಗೆ ವರ್ಗಾವಣೆಯ ಯೋಗ. ಮಂಗಳಕಾರ್ಯಗಳು ಜರಗುವಾಗ ಅಸಾಂದರ್ಭಿಕ ಮಾತುಗಳನ್ನು ಆಡದಿರಿ.

ಮಿಥುನ: ಇಷ್ಟವೆಂದು ಅಧಿಕವಾಗಿ ಸೇವಿಸಿದ ಆಹಾರವು ಅನಾರೋಗ್ಯಕ್ಕೆ ಎಡೆಮಾಡಿಕೊಡುತ್ತದೆ. ಕೋಪವನ್ನು ಶಮನ ಮಾಡಿಕೊಳ್ಳಲು ಸಾಧ್ಯವಿಲ್ಲ. ವೃತ್ತಿಯಲ್ಲಿ ಪೈಪೋಟಿಯನ್ನು ಎದುರಿಸುವಿರಿ.

ಕರ್ಕಾಟಕ: ಮುಕ್ತ ಭಾವನೆಯಿಂದ ಆಡಿದ ಮಾತುಗಳು ಉಳಿದವರಿಗೆ ಅಧಿಕ ಪ್ರಸಂಗದಂತೆ ತೋರುವುದರಲ್ಲಿ ಸಂಶಯವಿಲ್ಲ. ಅತಿ ಖರ್ಚು ವೆಚ್ಚಗಳು ತಗ್ಗುವುದು. ಮುಂದಿನ ಓದಿನ ಬಗ್ಗೆ ಯೋಚಿಸುವಿರಿ.

ಸಿಂಹ: ಸಾಮರ್ಥ್ಯದ ಅರಿವಿಲ್ಲದೆ ಲಘುವಾಗಿ ಮಾತನಾಡಿದವರಿಗೆ ಸರಿಯಾದ ಪಾಠವನ್ನು ಕಲಿಸುವಿರಿ. ಕಾಗದಪತ್ರಗಳಿಗೆ ಓದಿಯೇ ಸಹಿ ಹಾಕುವುದನ್ನು ಅಭ್ಯಾಸ ಮಾಡಿಕೊಳ್ಳಿ. ಸಾಧು ಸಂತರ ದರ್ಶನ ಮಾಡುವಿರಿ.

ಕನ್ಯಾ: ಶಿಬಿರಗಳಲ್ಲಿ ಭಾಗವಹಿಸಿದ ಕಾರಣವಾಗಿ ಚಟುವಟಿಕೆಯಿಂದ ಇರುವ ಮಕ್ಕಳು ಮನಸ್ಸಂತೋಷಕ್ಕೆ ಕಾರಣವಾಗಿರುತ್ತಾರೆ. ಸ್ವಾರ್ಥದಿಂದ ವ್ಯವಹರಿಸಬೇಡಿ.

ತುಲಾ: ಸಂಸಾರದ ಘನತೆ ಹೆಚ್ಚಿಸಲು ಸಾಹಸ ಪಡುತ್ತಿರುವ ನಿಮಗೆ ಹೆಂಡತಿ ಮಕ್ಕಳು ನೆರವಾಗುವರು. ಕೇಶವಿನ್ಯಾಸಗಾರರು ಇತರರರೊಂದಿಗೆ ಸ್ಪರ್ಧಿಸಬೇಕಾಗುತ್ತದೆ. ಪ್ರಾರ್ಥನೆಯ ಪರಿಣಾಮ ವಧು ದೊರೆಯುವಳು.

ವೃಶ್ಚಿಕ: ಕಣ್ಣಿನ ಆರೋಗ್ಯದ ವಿಚಾರವಾಗಿ ಎಷ್ಟು ಕಾಳಜಿ ವಹಿಸಿದರೂ ವೈದ್ಯರ ಭೇಟಿ ನಿಯಮಿತವಾಗಿ ಮಾಡುವುದು ತಪ್ಪುವುದಿಲ್ಲ. ಸಹೋದ್ಯೋಗಿಗಳೊಂದಿಗೆ ಉತ್ತಮ ಸಂಬಂಧ ಕಾಪಾಡಿಕೊಳ್ಳಿ. ಮಿತವಾದ ಆಹಾರ ಸೇವನೆ ಇರಲಿ.

ಧನು: ತಾಳಪತ್ರಗಳ ಅಧ್ಯಯನ ನಡೆಸಬೇಕೆಂದು ಇರುವವರಿಗೆ ಸರಿಯಾದ ಸ್ಥಳ ದೊರೆಯುತ್ತದೆ. ಹಳೆಯ ದಿನಚರಿಗೆ ಮರಳುವಿರಿ. ಸಾಕುಪ್ರಾಣಿಯ ಸಂಖ್ಯೆ ಹೆಚ್ಚಾಗುವುದು.

ಮಕರ: ದೃಢ ನಿಶ್ಚಯ ಮತ್ತು ಸಾಧಿಸಲೇಬೇಕೆಂಬ ಛಲದ ಮನೋಭಾವ ಯಶಸ್ಸಿಗೆ ಕಾರಣವೆನಿಸಲಿದೆ. ಕೆಲವು ವ್ಯಕ್ತಿಗಳ ದ್ವೇಷದ ಕೃತ್ಯಗಳ ಫಲವಾಗಿ ಸಂಕಷ್ಟ ಅನುಭವಿಸಬೇಕಾಗುತ್ತದೆ. ಅನವಶ್ಯಕ ವಸ್ತುಗಳನ್ನು ಖರೀದಿಸದಿರಿ.

ಕುಂಭ: ಹಿರಿಯರ ಜೀವನಾನುಭವ ಸಲಹೆಗಳನ್ನು ಕೇಳಿ ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ನಡೆಸಿಕೊಳ್ಳಿರಿ. ಚಿನ್ನಾಭರಣ ಅಥವ ಬೆಳ್ಳಿಯ ಸಾಮಗ್ರಿಗಳನ್ನು ಖರೀದಿಸುವ ಸಾಧ್ಯತೆ ಇದೆ.

ಮೀನ: ಹಲವು ದಿನಗಳ ಪ್ರತೀಕ್ಷೆಯ ಮನೋಭಿಲಾಷೆಯು ಪೂರ್ಣಗೊಳ್ಳುವ ದಿನ ಇದಾಗಲಿದೆ. ವಯಸ್ಸಿಗೆ ಮೀರಿದ ಗಾಂಭೀರ್ಯವನ್ನು ಹೊಗಳುವವರು ಕೆಲವರಾದರೆ ತೆಗಳುವವರು ಕೆಲವರಿರುತ್ತಾರೆ.

ವೈಮಾನಿಕ ಪ್ರದರ್ಶನ

ಪಿಟಿಐ ಚಿತ್ರ



ಅಬುಧಾಬಿಯ 'ಫಾರ್ಮುಲಾ ಒನ್ ಅಬುಧಾಬಿ ಗ್ರ್ಯಾಂಡ್ ಪ್ರಿಕ್ಸ್'ನಲ್ಲಿ ನಡೆದ ವಿಮಾನಗಳ ತಾಲೀಮು ಗಮನ ಸೆಳೆಯಿತು

ರೆಪೊ ಕಡಿತ: ಎಷ್ಟು ತಗ್ಗುತ್ತದೆ ಇಎಂಐ?

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕಳೆದ ಒಂದು ವರ್ಷದಲ್ಲಿ ರೆಪೊ ದರವನ್ನು ಭಾರೀ ಪ್ರಮಾಣದಲ್ಲಿ ಇಳಿಕೆ ಮಾಡಿದೆ. 2024ರ ಡಿಸೆಂಬರ್‌ನಲ್ಲಿ ಶೇ 6.5ರಷ್ಟಿದ್ದ ರೆಪೊ ದರ, 2025ರ ಡಿಸೆಂಬರ್‌ನಲ್ಲಿ ಶೇ 5.25ಕ್ಕೆ ಇಳಿದಿದೆ. ಇದಕ್ಕೆ ಅನುಗುಣವಾಗಿ ನಿಮ್ಮ ಗೃಹ ಸಾಲದ ಬಡ್ಡಿ ದರ ಶೇ 8.25ರಿಂದ ಶೇ 7ಕ್ಕೆ ಇಳಿದರೆ, ₹50 ಲಕ್ಷದ ಸಾಲದ ಮೇಲೆ ನೀವು ತಿಂಗಳಿಗೆ ಕಟ್ಟುವ ಇಎಂಐ ಮೊತ್ತದಲ್ಲಿ ಸುಮಾರು ₹3,800, ವರ್ಷಕ್ಕೆ ₹46 ಸಾವಿರ ಮತ್ತು 20 ವರ್ಷಗಳ ಸಾಲದ ಅವಧಿಯನ್ನು ಗಣನೆಗೆ ತೆಗೆದುಕೊಂಡರೆ ₹9.12 ಲಕ್ಷದಷ್ಟು ಬಡ್ಡಿ ಹಣ ಉಳಿತಾಯವಾಗುತ್ತದೆ!

ಅದು ಹೇಗೆ ಇಷ್ಟೊಂದು ಅನುಕೂಲವಾಗುತ್ತದೆ ಎಂಬುದನ್ನು ತಿಳಿಯುವ ಜೊತೆಗೆ ರೆಪೊ ದರ ಇಳಿಕೆಯ ಲಾಭವನ್ನು ಗ್ರಾಹಕರು ಪಡೆಯುವುದು ಹೇಗೆ ಎನ್ನುವುದನ್ನು ಆಳಕ್ಕಿಳಿದು ನೋಡೋಣ.

ರೆಪೊ ದರ ಅಂದರೆ: ರೆಪೊ ದರ ಅಂದರೆ ಆರ್‌ಬಿಐ ಇತರ ವಾಣಿಜ್ಯ ಬ್ಯಾಂಕುಗಳಿಗೆ ನೀಡುವ ಸಾಲಕ್ಕೆ ನಿಗದಿ ಮಾಡುವ ಬಡ್ಡಿ ದರ. ರೆಪೊ ದರ ಕಡಿಮೆಯಾದರೆ ಗ್ರಾಹಕರು ಪಡೆದಿರುವ ಸಾಲಗಳ ಬಡ್ಡಿ ಕಡಿಮೆಯಾಗುತ್ತದೆ. ರೆಪೊ ದರ ಹೆಚ್ಚಳವಾದರೆ ಸಾಲಗಳ ಮೇಲಿನ ಬಡ್ಡಿ ದರವೂ ಹೆಚ್ಚಳವಾಗುತ್ತದೆ. ರೆಪೊ ದರವನ್ನು ಯಾವಾಗ ಹೆಚ್ಚಳ ಮಾಡಬೇಕು ಯಾವಾಗ ಇಳಿಸಬೇಕು ಎನ್ನುವ ತೀರ್ಮಾನವನ್ನು ಆರ್‌ಬಿಐನ ಹಣಕಾಸು ನೀತಿ ಸಮಿತಿ ತೆಗೆದುಕೊಳ್ಳುತ್ತದೆ. ದೇಶದ ಆರ್ಥಿಕ ಸ್ಥಿತಿ, ಅರ್ಥ ವ್ಯವಸ್ಥೆಯಲ್ಲಿ ಹಣದ ಹರಿವಿನ ಪ್ರಮಾಣ ಸೇರಿದಂತೆ ಹಲವು ಮಾನದಂಡಗಳನ್ನು ಪರಿಗಣಿಸಿ ರೆಪೊ ದರ ನಿಗದಿಪಡಿಸಲಾಗುತ್ತದೆ.

12 ತಿಂಗಳಲ್ಲಿ ಇಳಿಕೆ ಎಷ್ಟು?: ಕಳೆದ 12 ತಿಂಗಳಲ್ಲಿ ಆರ್‌ಬಿಐ ಹಲವು ಬಾರಿ ರೆಪೊ ದರ ಕಡಿತ ಮಾಡಿದೆ. 2024ರ ಡಿಸೆಂಬರ್‌ನಲ್ಲಿ ಶೇ 6.50ರಷ್ಟು ಇದ್ದ ದರ 2025ರ ಫೆಬ್ರುವರಿಯಲ್ಲಿ ಶೇ 6.25ಕ್ಕೆ ಇಳಿಯಿತು, ಏಪ್ರಿಲ್‌ನಲ್ಲಿ ಶೇ 6ಕ್ಕೆ ಬಂತು. ಜೂನ್‌ನಲ್ಲಿ ರೆಪೊ ದರವನ್ನು ಶೇ 5.50ಕ್ಕೆ ಇಳಿಸಲಾಯಿತು. ಈಗ ರೆಪೊ ಶೇ 5.25ಕ್ಕೆ ಇಳಿದಿದೆ.

ಯಾವ ಸಾಲ ಅಗ್ಗ?: ರೆಪೊ ದರ ಇಳಿಕೆಯಿಂದ ನಿಜವಾಗಲೂ ಯಾರಿಗೆ ಲಾಭ ಆಗುತ್ತದೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳೋಣ. ಇಂದಿನ ದಿನಗಳಲ್ಲಿ ಬಹುತೇಕ ಹೊಸ ಸಾಲಗಳನ್ನು ಫ್ಲೋಟಿಂಗ್ ದರ ಅಥವಾ ರೆಪೊ ದರ ಆಧರಿಸಿ ನೀಡುತ್ತಿರುವುದರಿಂದ ರೆಪೊ ಇಳಿಕೆಯಾದಾಗ ಅದರ ಲಾಭ ಗ್ರಾಹಕರಿಗೆ ಸಿಗುತ್ತದೆ. ಗೃಹ ಸಾಲ, ವಾಹನ ಸಾಲ, ಆಯ್ದ ವೈಯಕ್ತಿಕ ಸಾಲ ಮತ್ತು ಬಿಸಿನೆಸ್ ಸಾಲಗಳಿಗೆ ಬಡ್ಡಿ ದರ ಇಳಿಕೆಯ ಪ್ರಯೋಜನ ದಕ್ಕಲಿದೆ.

50 ಲಕ್ಷ ಗೃಹ ಸಾಲ: ಉದಾಹರಣೆಗೆ, ನೀವು ಗೃಹಸಾಲ ಪಡೆದಿದ್ದು, ರೆಪೊ ದರ ಇಳಿಕೆಯ ಅನುಕೂಲ ಅದಕ್ಕೆ ಹೇಗೆ ಸಿಗುತ್ತದೆ ಎನ್ನುವುದನ್ನು ನೋಡೋಣ. ನಿಮ್ಮ ಗೃಹ ಸಾಲದ ಮೊತ್ತ ₹50 ಲಕ್ಷ ಆಗಿದ್ದು ಶೇ 8.25ರ ಆರಂಭಿಕ ಬಡ್ಡಿ ದರದಲ್ಲಿ 20 ವರ್ಷಗಳ ಅವಧಿಗೆ ಸಾಲ ಪಡೆದಿದ್ದೀರಿ ಎಂದುಕೊಳ್ಳೋಣ. ನಿಮ್ಮ ಮಾಸಿಕ ಇಎಂಐ ಮೊತ್ತ ಸುಮಾರು ₹42,600. ಒಂದು ವರ್ಷದ ಅವಧಿಯಲ್ಲಿ ಆಗಿರುವ ರೆಪೊ ದರ ಕಡಿತದ ಕಾರಣದಿಂದ ಸಾಲದ ಬಡ್ಡಿ ದರ ಶೇ 7ಕ್ಕೆ ಇಳಿಕೆಯಾಗಿದೆ ಎಂದುಕೊಳ್ಳೋಣ. ಆಗ ನಿಮ್ಮ ಸಾಲದ ಮಾಸಿಕ ಇಎಂಐ ₹38,800ರ ಆಸುಪಾಸಿಗೆ ಬರುತ್ತದೆ. ಅಂದರೆ ಪ್ರತಿ ತಿಂಗಳ ಇಎಂಐ ಮೊತ್ತದಲ್ಲಿ ಸುಮಾರು ₹3,800 ಉಳಿತಾಯವಾಗುತ್ತದೆ.

ಇದೇ ಲೆಕ್ಕಾಚಾರವನ್ನು ಸಾಲ ಪಡೆದಿರುವ ಇಡೀ ಅವಧಿಗೆ ಅನ್ವಯಿಸಿ ಲೆಕ್ಕ ಹಾಕಿದರೆ ಬಡ್ಡಿಯಲ್ಲಿ ಸುಮಾರು ₹9.12 ಲಕ್ಷದವರೆಗೂ ಉಳಿತಾಯವಾಗುತ್ತದೆ.

(ಗಮನಿಸಿ: 2024ರ ಡಿಸೆಂಬರ್‌ನಿಂದ ಈ ವರ್ಷದ ಡಿಸೆಂಬರ್‌ವರೆಗೆ ಆಗಿರುವ ಶೇ 1.25ರಷ್ಟು ರೆಪೊ ಇಳಿಕೆಯನ್ನು ಗಣನೆಗೆ ತೆಗೆದುಕೊಂಡು ಲೆಕ್ಕಾಚಾರ ನೀಡಲಾಗಿದೆ.)

ಪ್ರಯೋಜನ ಯಾವಾಗ ಸಿಗುತ್ತದೆ?

ಆರ್‌ಬಿಐ ರೆಪೊ ಇಳಿಕೆಯ ಘೋಷಣೆ ಮಾಡಿದ ದಿನವೇ ನಿಮ್ಮ ಇಎಂಐ ಕಡಿಮೆ ಆಗದು. ಅದು ನಿಮ್ಮ ಸಾಲದ ಮಾದರಿ ಮತ್ತು ಸಾಲದ ಒಪ್ಪಂದವನ್ನು ಅವಲಂಬಿತವಾಗಿರುತ್ತದೆ. ಈ ಅನುಕೂಲ ಪಡೆಯುವ ಮೊದಲು ನಿಮ್ಮ ಸಾಲ 'ರೆಪೊ-ಲಿಂಕ್ಡ್' (ರೆಪೊ ದರದ ಜೊತೆ ಜೋಡಣೆ) ಆಗಿದೆಯೇ ಅಥವಾ ಅನ್ಯ ಮಾನದಂಡದೊಂದಿಗೆ ಜೋಡಣೆ ಆಗಿದೆಯೇ ಎಂಬುದನ್ನು ನೋಡಿಕೊಳ್ಳಬೇಕು. ಬಡ್ಡಿ ದರ ಕಡಿತವಾಯಿತು ಅಂತ ಸಂಭ್ರಮಿಸುವ ಮೊದಲು ಕೆಲವು ವಿಚಾರಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಬ್ಯಾಂಕಿನವರು ಈವರೆಗೆ ಆಗಿರುವ ಶೇ 1.25ರಷ್ಟು ರೆಪೊ ಕಡಿತವನ್ನು ಪೂರ್ತಿಯಾಗಿ ಗ್ರಾಹಕರಿಗೆ ವರ್ಗಾವಣೆ ಮಾಡುವುದಿಲ್ಲ. ರೆಪೊ ಇಳಿಕೆಯ ಒಂದಷ್ಟು ಭಾಗ ಮಾತ್ರ ನಿಮಗೆ ವರ್ಗಾವಣೆಯಾಗುತ್ತದೆ.

ವೈಯಕ್ತಿಕ ಸಾಲ ಅಥವಾ ಕೆಲವು ಕ್ರೆಡಿಟ್ ಕಾರ್ಡ್ ಆಧಾರಿತ ಸಾಲಗಳಿದ್ದರೆ ರೆಪೊ ಕಡಿತದಿಂದ ಸಿಗುವ ಲಾಭ ತುಂಬಾ ಕಡಿಮೆ. ಬಡ್ಡಿ ದರ ಇಳಿಕೆ ಘೋಷಣೆ ಆದ ಮೇಲೆ ನಿಮ್ಮ ಸಾಲದ ಸ್ಟೇಟ್‌ಮೆಂಟ್ ಪರಿಶೀಲಿಸಿ, ಅದರ ಅನುಕೂಲ ನಿಮಗೆ ಸಿಕ್ಕಿದೆಯೇ ಅಥವಾ ಯಾವಾಗ ಸಿಗುತ್ತದೆ ಎಂಬುದನ್ನು ನೋಡಿಕೊಳ್ಳಿ. ನಿಮ್ಮ ಸಾಲದ ಬಡ್ಡಿ ದರ ಮತ್ತು ಇಎಂಐ ಅಥವಾ ಅವಧಿ ನಿಜವಾಗಿಯೂ ಪರಿಷ್ಕರಣೆ ಕಂಡಿದೆಯೇ ಅಂತ ಪರಿಶೀಲಿಸಿ. ಒಂದು ವೇಳೆ ನಿಮಗೆ ಪೂರ್ತಿ ಲಾಭ ಸಿಕ್ಕಿದೆ ಎಂದಾದರೆ ನೀವು ಕಡಿಮೆ ಮೊತ್ತದ ಇಎಂಐ ಪಾವತಿಸಿ ಸಂಭ್ರಮಿಸಬಹುದು ಅಥವಾ, ಇಎಂಐ ಮೊತ್ತವನ್ನು ಅಷ್ಟೇ ಉಳಿಸಿಕೊಂಡು ಸಾಲ ಮರುಪಾವತಿ ಅವಧಿ ಕಡಿಮೆ ಮಾಡಿಸಿಕೊಂಡು ಸಂಭ್ರಮಿಸಬಹುದು.

₹1.55 ಲಕ್ಷ ಕೋಟಿ ವಾಪಸ್

ಷೇರು ಮಾರಾಟಕ್ಕೆ ವಿದೇಶಿ ಹೂಡಿಕೆದಾರರ ಗಮನ

ನವದೆಹಲಿ (ಪಿಟಿಐ): ವಿದೇಶಿ ಹೂಡಿಕೆದಾರರು ಡಿಸೆಂಬರ್ ತಿಂಗಳ ಮೊದಲ ಒಂದು ವಾರದಲ್ಲಿ ಭಾರತದ ಬಂಡವಾಳ ಮಾರುಕಟ್ಟೆಗಳಿಂದ ಒಟ್ಟು ₹11,820 ಕೋಟಿ ಮೊತ್ತವನ್ನು ಹಿಂಪಡೆದಿದ್ದಾರೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ತೀವ್ರವಾಗಿ ಕುಸಿತ ಕಂಡಿದ್ದು ಕೂಡ ಅವರ ಈ ನಡೆಗೆ ಒಂದು ಕಾರಣ.

ವಿದೇಶಿ ಹೂಡಿಕೆದಾರರು ನವೆಂಬರ್‌ನಲ್ಲಿ ನಿವ್ವಳ ₹3,765 ಕೋಟಿ ಮೊತ್ತವನ್ನು ಮಾರುಕಟ್ಟೆಯಿಂದ ಹಿಂತೆಗೆದುಕೊಂಡಿದ್ದರು. ಆದರೆ ಅವರು ಅಕ್ಟೋಬರ್‌ನಲ್ಲಿ ನಿವ್ವಳ ₹14,610 ಕೋಟಿ ಮೊತ್ತವನ್ನು ಮಾರುಕಟ್ಟೆಯಲ್ಲಿ ತೊಡಗಿಸಿದ್ದರು.

ಅದಕ್ಕೂ ಹಿಂದಿನ ಮೂರು ತಿಂಗಳುಗಳಲ್ಲಿ ಕೂಡ ವಿದೇಶಿ ಹೂಡಿಕೆದಾರರು ಭಾರಿ ಮೊತ್ತವನ್ನು ಹಿಂಪಡೆದಿದ್ದರು. ಸೆಪ್ಟೆಂಬರ್‌ನಲ್ಲಿ ₹23,885 ಕೋಟಿ, ಆಗಸ್ಟ್‌ನಲ್ಲಿ ₹34,990 ಕೋಟಿ ಹಾಗೂ ಜುಲೈನಲ್ಲಿ ₹17,700 ಕೋಟಿಯಷ್ಟು ಮೊತ್ತವು ಭಾರತದ ಮಾರುಕಟ್ಟೆಗಳಿಂದ ವಾಪಸ್ ಹೋಗಿತ್ತು.

ಎನ್‌ಎಸ್‌ಡಿಎಲ್‌ನಲ್ಲಿ ಲಭ್ಯವಿರುವ ದತ್ತಾಂಶದ ಪ್ರಕಾರ, ಡಿಸೆಂಬರ್‌ನಲ್ಲಿಯೂ ವಿದೇಶಿ ಹೂಡಿಕೆದಾರರು ಹಣ ಹಿಂಪಡೆಯುವುದನ್ನು ಮುಂದುವರಿಸಿದ್ದಾರೆ. ಇದರಿಂದಾಗಿ ಈ ವರ್ಷದಲ್ಲಿ ಅವರು ಭಾರತದ ಬಂಡವಾಳ ಮಾರುಕಟ್ಟೆಗಳಿಂದ ಹಿಂಪಡೆದ ಒಟ್ಟು ಮೊತ್ತವು ₹1.55 ಲಕ್ಷ ಕೋಟಿಯಷ್ಟಾಗಿದೆ.

ಭಾರತದ ಕರೆನ್ಸಿಯ ಬಗ್ಗೆ ಇರುವ ಕಳವಳವು ಅವರು ಹಣ ಹಿಂಪಡೆಯುತ್ತಿರುವುದಕ್ಕೆ ಪ್ರಮುಖ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. 'ಈ ವರ್ಷದಲ್ಲಿ ರೂಪಾಯಿ ಮೌಲ್ಯವು ಸರಿಸುಮಾರು ಶೇ 5ರಷ್ಟು ಕುಸಿದಿದೆ. ಇಂತಹ ಸಂದರ್ಭಗಳಲ್ಲಿ ವಿದೇಶಿ ಹೂಡಿಕೆದಾರರು ಹೂಡಿಕೆಯನ್ನು ಹಿಂತೆಗೆದುಕೊಳ್ಳುವುದಿದೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಜಾಗತಿಕ ಮಟ್ಟದ ಹೂಡಿಕೆದಾರರು ವರ್ಷಾಂತ್ಯದಲ್ಲಿ ತಮ್ಮ ಪೋರ್ಟ್‌ಫೋಲಿಯೊದಲ್ಲಿ ತರುವ ಬದಲಾವಣೆಯ ಕಾರಣದಿಂದಾಗಿಯೂ ಷೇರು ಮಾರಾಟ ಹೆಚ್ಚಾಗಿದೆ ಎಂದು ಏಂಜಲ್ ಒನ್ ಬ್ರೋಕಿಂಗ್ ಕಂಪನಿಯ ಹಿರಿಯ ವಿಶ್ಲೇಷಕ ವಕಾರ್‌ಜಾವೇದ್ ಖಾನ್ ಹೇಳಿದ್ದಾರೆ.

ಬ್ಯಾಂಕ್ ಆಫ್ ಮಹಾರಾಷ್ಟ್ರ ಬಡ್ಡಿ ಇಳಿಕೆ

ನವದೆಹಲಿ (ಪಿಟಿಐ): ರೆಪೊ ದರದ ಜೊತೆ ಹೊಂದಿಕೊಂಡಿರುವ ಸಾಲಗಳ ಮೇಲಿನ ಬಡ್ಡಿ ದರವನ್ನು ಶೇಕಡ 0.25ರಷ್ಟು ಕಡಿಮೆ ಮಾಡುತ್ತಿರುವುದಾಗಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರ (ಬಿಒಎಂ) ಭಾನುವಾರ ಹೇಳಿದೆ.

ಗೃಹ ಸಾಲ, ಶಿಕ್ಷಣ ಸಾಲ, ಕಾರು ಸಾಲದ ಮೇಲಿನ ಬಡ್ಡಿಯು ಇದರಿಂದಾಗಿ ಕಡಿಮೆ ಆಗಲಿದೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ತಗ್ಗಿಸಿದ ಎರಡೇ ದಿನಗಳಲ್ಲಿ ಬಿಒಎಂ ಈ ಕ್ರಮವನ್ನು ಪ್ರಕಟಿಸಿದೆ.

ಬಡ್ಡಿ ಪರಿಷ್ಕರಣೆಯು ಶನಿವಾರದಿಂದಲೇ ಜಾರಿಗೆ ಬಂದಿದೆ ಎಂದು ಬ್ಯಾಂಕ್ ಹೇಳಿದೆ. ಈಗ ಬ್ಯಾಂಕ್‌ನ ಗೃಹ ಸಾಲದ ಬಡ್ಡಿ ದರವು ಶೇ 7.10ರಿಂದ, ಕಾರು ಸಾಲದ ಬಡ್ಡಿ ದರವು ಶೇ 7.45ರಿಂದ ಆರಂಭವಾಗುತ್ತದೆ. ಇದು ಬ್ಯಾಂಕಿಂಗ್ ಉದ್ಯಮದಲ್ಲಿ ಈಗ ಲಭ್ಯವಿರುವ ಅತ್ಯಂತ ಕಡಿಮೆ ಬಡ್ಡಿ ದರಗಳಲ್ಲಿ ಒಂದು ಎಂದು ಬಿಒಎಂ ಹೇಳಿದೆ.

ಬ್ಯಾಕ್ಟೀರಿಯಾ ಸೋಂಕಿನ ಶಂಕೆ • ತೀವ್ರ ನಿಗಾ

ಜಮ್ಷೆಡ್‌ಪುರ: 10 ಕೃಷ್ಣಮೃಗಗಳ ಸಾವು



ಸಾಂದರ್ಭಿಕ ಚಿತ್ರ

ರಾಂಚಿ (ಪಿಟಿಐ): ಜಾರ್ಖಂಡ್‌ನ ಜಮ್ಷೆಡ್‌ಪುರ ಪುರದಲ್ಲಿ ಬ್ಯಾಕ್ಟೀರಿಯಾ ಸೋಂಕಿನಿಂದಾಗಿ ಕಳೆದ ಒಂದು ವಾರದ ಅವಧಿಯಲ್ಲಿ 10 ಕೃಷ್ಣಮೃಗಗಳು ಮೃತಪಟ್ಟಿವೆ.

ಟಾಟಾ ಸ್ಟೀಲ್ ಜೈವಿಕ ಉದ್ಯಾನದಲ್ಲಿ (ಟಿಎಸ್‌ಝೆಡ್‌ಪಿ) ಡಿಸೆಂಬರ್ 1ರಿಂದ ಡಿಸೆಂಬರ್ 6ರವರೆಗೆ ಕೃಷ್ಣಮೃಗಗಳ ಸರಣಿ ಸಾವು ಸಂಭವಿಸಿದೆ.

'ಬ್ಯಾಕ್ಟೀರಿಯಾ ಸೋಂಕಿನಿಂದ ಸಾವು ಸಂಭವಿಸಿರುವ ಶಂಕೆ ಇದೆ. ಕೃಷ್ಣಮೃಗಗಳ ಮೃತದೇಹಗಳನ್ನು ರಾಂಚಿ ಪಶುವೈದ್ಯಕೀಯ ಕಾಲೇಜಿಗೆ ಕಳುಹಿಸಲಾಗಿದೆ' ಎಂದು ಉದ್ಯಾನದ ಉಪನಿರ್ದೇಶಕ ಡಾ. ನೈಮ್ ಅಖ್ತಾರ್ ಅವರು ತಿಳಿಸಿದ್ದಾರೆ.

'ಸೋಂಕು ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದೇವೆ. ಬ್ಯಾಕ್ಟೀರಿಯಾ ನಿರೋಧಕ ಚಿಕಿತ್ಸೆಯನ್ನು ಆರಂಭಿಸಿದ್ದು, ಪರಿಸ್ಥಿತಿ ನಿಯಂತ್ರಣದಲ್ಲಿದೆ' ಎಂದು ತಿಳಿಸಿದ್ದಾರೆ.

'ಪಾಸ್ಚೆರೆಲ್ಲಾ ಬ್ಯಾಕ್ಟೀರಿಯಾದಿಂದ ಉಂಟಾಗುವ ಎಚ್.ಎಸ್ ಕಾಯಿಲೆಯು ಕೃಷ್ಣಮೃಗಗಳಿಗೆ ತಗುಲಿರುವ ಶಂಕೆ ವ್ಯಕ್ತವಾಗಿದೆ. ಸೋಮವಾರ ಹೆಚ್ಚಿನ ಪರಿಶೀಲನೆ ನಡೆಸಿದ ಬಳಿಕ ದೃಢಪಡಿಸಲಾಗುವುದು' ಎಂದು ರಾಂಚಿ ಪಶುವೈದ್ಯಕೀಯ ಕಾಲೇಜಿನ ವೈದ್ಯರು ತಿಳಿಸಿದ್ದಾರೆ.

'18 ಕೃಷ್ಣಮೃಗಗಳು ಸೇರಿದಂತೆ ಟಿಎಸ್‌ಝೆಡ್‌ಪಿಯಲ್ಲಿ 370 ಪ್ರಾಣಿ–ಪಕ್ಷಿಗಳಿವೆ. 10 ಕೃಷ್ಣಮೃಗಗಳು ಮೃತಪಟ್ಟಿರುವುದರಿಂದ 8 ಕೃಷ್ಣಮೃಗಗಳು ಮಾತ್ರ ಉಳಿದಿವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಪಾಸ್ಚೆರುಲ್ಲಾ ಬ್ಯಾಕ್ಟೀರಿಯಾ ಸೋಂಕು ವೇಗವಾಗಿ ಹರಡುತ್ತದೆ ಮತ್ತು ಶ್ವಾಸಕೋಶವನ್ನು ಹಾನಿಗೊಳಿಸಿ, ದಿಢೀರ್ ಸಾವಿಗೆ ಕಾರಣವಾಗುತ್ತದೆ' ಎಂದು ರಾಂಚಿ ವೈದ್ಯಕೀಯ ಕಾಲೇಜಿನ ರೋಗಶಾಸ್ತ್ರ ವಿಭಾಗದ ಮುಖ್ಯಸ್ಥ ಎಂ.ಕೆ ಗುಪ್ತಾ ಅವರು ತಿಳಿಸಿದ್ದಾರೆ.

ರಾಂಚಿಯಲ್ಲಿರುವ ಭಗವಾನ್ ಬಿರ್ಸಾ ಜೈವಿಕ ಉದ್ಯಾನದಲ್ಲಿಯೂ ಕಟ್ಟೆಚ್ಚರ ವಹಿಸಲಾಗಿದೆ.

'ಇಲ್ಲಿ 69 ಕೃಷ್ಣಮೃಗಗಳಿದ್ದಾವೆ. ಈಗಾಗಲೇ ವೈರಸ್ ಮತ್ತು ಬ್ಯಾಕ್ಟೀರಿಯಾ ನಿರೋಧಕ ಔಷಧಿಗಳನ್ನು ಸಿಂಪಡಿಸಲಾಗಿದೆ' ಅಲ್ಲಿನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಾಕ್: ಜಾಫರ್ ಎಕ್ಸ್‌ಪ್ರೆಸ್ ಸ್ಫೋಟಕ್ಕೆ ಮತ್ತೆ ಯತ್ನ

ಕರಾಚಿ (ಪಿಟಿಐ): ಪಾಕಿಸ್ತಾನದ ಜಾಫರ್ ಎಕ್ಸ್‌ಪ್ರೆಸ್ ರೈಲಿನ ಮೇಲೆ ಮತ್ತೆ ದಾಳಿ ನಡೆಸುವ ಬಂಡುಕೋರರ ಪ್ರಯತ್ನವನ್ನು ಭದ್ರತಾ ಸಿಬ್ಬಂದಿ ಶನಿವಾರ ವಿಫಲಗೊಳಿಸಿದ್ದಾರೆ.

ಪೆಶಾವರಕ್ಕೆ ಹೋಗುತ್ತಿದ್ದ ರೈಲನ್ನು ಗುರಿಯಾಗಿಸಿಕೊಂಡು ಬಂಡುಕೋರರು ನಾಸೀರಬಾದ್ ಪ್ರದೇಶದಲ್ಲಿ ರೈಲು ಹಳಿಯ ಬಳಿ ಕಚ್ಚಾ ಬಾಂಬ್ ಇರಿಸಿದ್ದರು ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

ಈ ಬಗ್ಗೆ ಮಾಹಿತಿ ಪಡೆದ ಭದ್ರತಾ ಸಿಬ್ಬಂದಿ ಬಾಂಬ್ ಅನ್ನು ನಿಷ್ಕ್ರಿಯಗೊಳಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಾಫರ್ ಎಕ್ಸ್‌ಪ್ರೆಸ್ ಮೇಲೆ ಪದೇ ಪದೇ ದಾಳಿಗಳು ನಡೆಯುತ್ತಿರುತ್ತವೆ. ತಿಂಗಳ ಹಿಂದೆ ನಡೆದ ದಾಳಿಯಲ್ಲಿ 26 ಮಂದಿ ಮೃತಪಟ್ಟಿದ್ದರು.

ಆಧಾರ್: ಗುರುತು ತಾಳೆಗೆ ಹೊಸ ನಿಯಮ

ಮುಖ್ಯಾಂಶಗಳು
- ನೆರಳಚ್ಚು ಪ್ರತಿ ಬಳಕೆ ಕಡಿಮೆಗೊಳಿಸಲು ಕ್ರಮ
- ಗುರುತು ತಾಳೆ ತಂತ್ರಜ್ಞಾನ ಪಡೆಯಲು ನೋಂದಣಿ ಕಡ್ಡಾಯ
- ಶೀಘ್ರದಲ್ಲಿಯೇ ಅಧಿಸೂಚನೆ ಪ್ರಕಟ

ನವದೆಹಲಿ (ಪಿಟಿಐ): ಹೋಟೆಲ್‌ಗಳು, ಕಾರ್ಯಕ್ರಮ ಸಂಘಟಕರು ತಮ್ಮ ಗ್ರಾಹಕರಿಂದ ಆಧಾರ್ ಕಾರ್ಡ್‌ನ ನೆರಳಚ್ಚು ಪ್ರತಿ ಪಡೆದು, ಅವುಗಳನ್ನು ತಮ್ಮಲ್ಲಿ ಇರಿಸಿಕೊಳ್ಳುವುದನ್ನು ಕಡಿಮೆ ಮಾಡಲು ಹೊಸ ನಿಯಮಗಳನ್ನು ಶೀಘ್ರವೇ ಪ್ರಕಟಿಸಲಾಗುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹೀಗೆ ಆಧಾರ್ ಕಾರ್ಡ್ ಪ್ರತಿ ಪಡೆದುಕೊಳ್ಳುವುದು ಆಧಾರ್ ಕಾಯ್ದೆಗೆ ವಿರುದ್ಧ.

ಹೋಟೆಲ್ ಪ್ರತಿನಿಧಿಗಳು, ಕಾರ್ಯಕ್ರಮ ಸಂಘಟಕರು ಮುಂತಾದವರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ವ್ಯಕ್ತಿಯ ಗುರುತನ್ನು ತಾಳೆ ಮಾಡುವ ತಂತ್ರಜ್ಞಾನವನ್ನು ಪಡೆಯಬೇಕು ಎಂದಾದರೆ ತಮ್ಮ ಸಂಸ್ಥೆಯನ್ನು ನೋಂದಣಿ ಮಾಡಿಸುವುದು ಕಡ್ಡಾಯ ಎನ್ನುವ ನಿಯಮಕ್ಕೆ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು (ಯುಐಡಿಎಐ) ಒಪ್ಪಿಗೆ ನೀಡಿದೆ ಎಂದು ಅದರ ಸಿಇಒ ಭುವನೇಶ್ ಕುಮಾರ್ ಹೇಳಿದ್ದಾರೆ.

'ಹೊಸ ನಿಯಮವನ್ನು ಶೀಘ್ರದಲ್ಲಿಯೇ ಅಧಿಸೂಚನೆಯಲ್ಲಿ ಪ್ರಕಟಿಸಲಾಗುತ್ತದೆ. ಆಧಾರ್ ಸಂಖ್ಯೆಯನ್ನು ಆಧರಿಸಿ ವ್ಯಕ್ತಿಯ ಗುರುತು ತಾಳೆ ಮಾಡುವ ಸಂಸ್ಥೆಗಳು ತಮ್ಮ ಹೆಸರನ್ನು ನೋಂದಣಿ ಮಾಡುವುದನ್ನು ಈ ನಿಯಮವು ಕಡ್ಡಾಯಗೊಳಿಸುತ್ತದೆ' ಎಂದು ಕುಮಾರ್ ತಿಳಿಸಿದ್ದಾರೆ.

ಆಧಾರ್‌ನ ಕೇಂದ್ರ ದತ್ತಾಂಶ ಕೋಶದ ಜೊತೆ ಸಂಪರ್ಕ ಹೊಂದದೆಯೂ ವ್ಯಕ್ತಿಯ ಗುರುತು ತಾಳೆ ನೋಡುವ ಹೊಸ ಆ್ಯಪ್ ಒಂದನ್ನು ಯುಐಡಿಎಐ ಪರೀಕ್ಷಿಸುತ್ತಿದೆ. ಈ ಹೊಸ ಆ್ಯಪ್‌ಅನ್ನು ವಿಮಾನ ನಿಲ್ದಾಣಗಳಲ್ಲಿ, ಗ್ರಾಹಕರ ವಯಸ್ಸಿನ ಆಧಾರದಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡಬೇಕಿರುವ ಅಂಗಡಿಗಳಲ್ಲಿ ಬಳಕೆ ಮಾಡಬಹುದು.

ಸೌರ ಕೃಷಿ ಪಂಪ್ ಸೆಟ್ : ಮಹಾರಾಷ್ಟ್ರಕ್ಕೆ ಅಗ್ರ ಸ್ಥಾನ

ಮೂವತ್ತು ದಿನಗಳಲ್ಲಿ 45 ಸಾವಿರಕ್ಕೂ ಹೆಚ್ಚು ಕೃಷಿ ಪಂಪ್ ಅಳವಡಿಕೆ

ಪ್ರಜಾವಾಣಿ ವಾರ್ತೆ



ಮುಂಬೈ: ಮಹಾರಾಷ್ಟ್ರ ರಾಜ್ಯ ವಿದ್ಯುತ್ ವಿತರಣಾ ಕಂಪನಿ ನಿಯಮಿತವು (ಎಂಎಸ್‌ಇಡಿಸಿಎಲ್) 'ಪಿಎಂ–ಕುಸುಮ್ ಬಿ' ಯೋಜನೆಯಡಿ ಕೇವಲ 30 ದಿನಗಳಲ್ಲಿ ರಾಜ್ಯದಾದ್ಯಂತ 45,911 ಸೌರ ಕೃಷಿ ಪಂಪ್‌ಸೆಟ್‌ಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಈ ಸಾಧನೆಯ ಮೈಲಿಗಲ್ಲು ಗಿನ್ನೆಸ್ ವಿಶ್ವ ದಾಖಲೆಗೆ ಸೇರ್ಪಡೆಯಾಗಿದೆ.

ಈ ಸಾಧನೆಯ ಮೂಲಕ ಭಾರತದಲ್ಲಿ ವೇಗವಾಗಿ ಸೌರಶಕ್ತಿ ಆಧಾರಿತ ಚಟುವಟಿಕೆಗಳನ್ನು ಅಳವಡಿಸುತ್ತಿರುವ ರಾಜ್ಯಗಳಲ್ಲಿ ಮಹಾರಾಷ್ಟ್ರವು ಅಗ್ರಸ್ಥಾನದಲ್ಲಿದೆ. ಮಾತ್ರವಲ್ಲ, ಜಾಗತಿಕ ಮಟ್ಟದಲ್ಲಿ ಸರ್ಕಾರವೊಂದು ವೇಗವಾಗಿ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಸೌರ ಕೃಷಿ ಪಂಪ್‌ಗಳನ್ನು ಅಳವಡಿಸುತ್ತಿರುವುದರಲ್ಲಿ ಮಹಾರಾಷ್ಟ್ರ ಎರಡನೇ ಸ್ಥಾನದಲ್ಲಿದೆ. ಚೀನಾ ಮೊದಲ ಸ್ಥಾನದಲ್ಲಿದೆ.

ಈ ಸಾಧನೆಯು, ಕೇಂದ್ರ ಸರ್ಕಾರದ ಪಿಎಂ–ಕುಸಮ್ ಬಿ ಮತ್ತು ಮಗೇಲ್ ತ್ಯಾಲಾ ಸೌರ್ ಕೃಷಿ ಪಂಪ್ ಯೋಜನೆಗಳ (ಎಂಟಿಎಸ್‌ಕೆಪಿವೈ) ಪರಿಣಾಮಕಾರಿ ಅನುಷ್ಠಾನದ ಮೂಲಕ ಭಾರತದಲ್ಲಿ ಶುದ್ಧ ಇಂಧನದ ಪರಿವರ್ತನೆ, ರೈತರ ಜೀವನೋಪಾಯ ಸುಧಾರಣೆ ಮತ್ತು ಸುಸ್ಥಿರ ನೀರಾವರಿಯನ್ನು ಪ್ರೋತ್ಸಾಹಿಸುವ ರಾಜ್ಯ ಸರ್ಕಾರದ ಬದ್ಧತೆಯ ಪ್ರತಿಬಿಂಬವಾಗಿದೆ.

'ರಾಜ್ಯದಾದ್ಯಂತ ಒಂದು ತಿಂಗಳಲ್ಲಿ 45,911ಕ್ಕೂ ಹೆಚ್ಚು ಸೌರಶಕ್ತಿ ಆಧಾರಿತ ಕೃಷಿ ಪಂಪ್‌ಗಳನ್ನು ಅನುಷ್ಠಾನಗೊಳಿಸಲಾಗಿದೆ. ಈ ಮೂಲಕ ಸೌರ ಕೃಷಿ ಚಟುವಟಿಕೆಗಳ ಅನುಷ್ಠಾನದಲ್ಲಿ ಮಹಾರಾಷ್ಟ್ರವನ್ನು, ದೇಶದ ಪ್ರಥಮ ರಾಜ್ಯವನ್ನಾಗಿ ಮಾಡಿದ್ದೇವೆ. ಈ ಸಾಧನೆಯು ಸುಸ್ಥಿರ ನೀರಾವರಿಯನ್ನು ಖಚಿತಪಡಿಸುತ್ತದೆ. ಅಷ್ಟೇ ಅಲ್ಲದೇ, ಕೃಷಿಯಲ್ಲಿ ಉತ್ಪಾದಕತೆ ಮತ್ತು ರೈತರ ಆದಾಯವನ್ನು ಸುಧಾರಿಸುತ್ತದೆ, ಸಾಂಪ್ರದಾಯಿಕ ಇಂಧನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ' ಎಂದು ಮಹಾರಾಷ್ಟ್ರ ಸರ್ಕಾರದ ಇಂಧನ ಸಚಿವರೂ ಆಗಿರುವ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತಿಳಿಸಿದ್ದಾರೆ.

ಎಂಎಸ್‌ಇಡಿಸಿಎಲ್, ರಾಜ್ಯದಾದ್ಯಂತ ಈವರೆಗೆ 7.47 ಲಕ್ಷಕ್ಕೂ ಹೆಚ್ಚು ಸೌರ ಕೃಷಿ ಪಂಪ್‌ಗಳನ್ನು ಸ್ಥಾಪಿಸಲಾಗಿದೆ. 10.45 ಲಕ್ಷ ಕೃಷಿ ಪಂಪ್‌ಗಳ ಸ್ಥಾಪನೆಯ ಗುರಿ ಹೊಂದಿದೆ. ಇದು ರಾಜ್ಯ, ದೇಶವಲ್ಲದೇ, ಅಂತರರಾಷ್ಟ್ರೀಯ ಮಟ್ಟದಲ್ಲಿ ಅನುಷ್ಠಾನಗೊಳಿಸಬಹುದಾದ ಮಾದರಿಯನ್ನು ಸೃಷ್ಟಿಸಲಿದೆ ಎಂದು ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸುತ್ತಾರೆ.

'ಬೆನಿನ್: ಸೈನಿಕರ ದಂಗೆ ಪ್ರಯತ್ನಕ್ಕೆ ತಡೆ'

ಕೊಟೊನೌ (ಎಪಿ): ಪಶ್ಚಿಮ ಆಫ್ರಿಕಾದ ಬೆನಿನ್ ದೇಶದ ಅಧ್ಯಕ್ಷ ಪ್ಯಾಟ್ರಿಸ್ ಟ್ಯಾಲನ್ ಅವರನ್ನು ಪದಚ್ಯುತಿಗೊಳಿಸಿರುವುದಾಗಿ ಸೈನಿಕರ ಗುಂಪೊಂದು ಸರ್ಕಾರಿ ಸ್ವಾಮ್ಯದ ವಾಹಿನಿಯಲ್ಲಿ ಘೋಷಿಸಿದ್ದ ಬೆನ್ನಲ್ಲೇ, 'ಈ ದಂಗೆಯ ಪ್ರಯತ್ನವನ್ನು ವಿಫಲಗೊಳಿಸಲಾಗಿದೆ' ಎಂದು ಸರ್ಕಾರ ಭಾನುವಾರ ಹೇಳಿದೆ.

ಪಶ್ಚಿಮ ಆಫ್ರಿಕಾವು ಇತ್ತೀಚಿನ ವರ್ಷಗಳಲ್ಲಿ ಅನೇಕ ದಂಗೆಗಳನ್ನು ಕಂಡಿದೆ. ಬೆನಿನ್ ನೆರೆಹೊರೆಯ ನೈಜರ್ ಮತ್ತು ಬುರ್ಕಿನಾ ಫಾಸೊ, ಮಾಲಿ, ಗಿನಿ ಮತ್ತು ಗಿನಿ–ಬಸೌ ರಾಷ್ಟ್ರಗಳಲ್ಲಿ ದಂಗೆಗಳು ನಡೆದಿವೆ.

'ಜಮಾತ್ ನಾಯಕರನ್ನು ಭೇಟಿಯಾಗಿದ್ದೆ'

ಕೋಯಿಕ್ಕೋಡ್ (ಕೇರಳ) (ಪಿಟಿಐ): 'ಜಮಾತ್–ಇ–ಇಸ್ಲಾಮಿ' ನಾಯಕರ ಮನವಿಯಂತೆ ನಾನು ಈ ಹಿಂದೆ ಅವರ ಜತೆ ಮಾತುಕತೆ ನಡೆಸಿದ್ದೆ' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿಳಿಸಿದ್ದಾರೆ.

ಕೋಯಿಕ್ಕೋಡ್‌ನಲ್ಲಿ ಭಾನುವಾರ ಪತ್ರಕರ್ತರ ಜೊತೆ ಸಂವಾದ ನಡೆಸಿದ ಅವರು,'ಜಮಾತೆ ನಾಯಕರ ಜೊತೆಗೆ ಸಿಪಿಎಂ ರಾಜ್ಯ ಸಮಿತಿಯ ಕಚೇರಿಯಲ್ಲಿ ಸಭೆ ನಡೆಸಿದ್ದೆ. ಆದರೆ, ಆ ಸಭೆಯ ಕುರಿತಂತೆ ನಾನು ಯಾವುದೇ ಪ್ರಮಾಣಪತ್ರ ನೀಡಲು ಸಿದ್ಧನಿಲ್ಲ' ಎಂದು ತಿಳಿಸಿದ್ದಾರೆ.

'ಜಮಾತ್ ನಾಯಕರು ಇಡೀ ಸಭೆಯಲ್ಲಿ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಮುಂದಾದರು. ಯುವ ಚಳವಳಿಯ ನಾಯಕರು ಹಾಜರಿದ್ದರು. ನೀವು ಸಮಾಜ ವಿರೋಧಿ ನಾಯಕರು ಎಂದು ಅವರಿಗೆ ನೇರವಾಗಿ ಹೇಳಿದ್ದೆ. ಇದರಿಂದ ತೀವ್ರ ಆಘಾತಕ್ಕೆ ಒಳಗಾಗಿದ್ದರು' ಎಂದು ಹೇಳಿದ್ದಾರೆ.

'ರಾಜ್ಯದ ವಿಚಾರದಲ್ಲಿ ಯಾವುದೇ ಒಳ್ಳೆಯ ನಿರ್ಧಾರವನ್ನು ತೆಗೆದುಕೊಳ್ಳುವುದನ್ನು ಜಮಾತ್ ಮುಖಂಡರು ವಿರೋಧಿಸುತ್ತಾರೆ. ನಾವು ಸತ್ಯ ಹೇಳಲು ಯಾವಾಗಲೂ ಹಿಂಜರಿಯಬಾರದು, ಈಗ ಅಥವಾ ಮುಂದೆಯೂ ಇರಬಹುದು' ಎಂದು ತಿಳಿಸಿದ್ದಾರೆ.

ಜಮಾತ್–ಎ–ಇಸ್ಲಾಮಿ ಸಂಘಟನೆಯು ಮುಸ್ಲಿಂ ಸಂಘಟನೆಯಾಗಿದ್ದು, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಜೊತೆಗೆ ಉತ್ತಮ ಒಡನಾಟ ಹೊಂದಿದೆ. ಜಮಾತೆ ಸಂಘಟನೆಯು ಕೋಮುವಾದಿ ಸಂಘಟನೆಯಾಗಿದೆ ಎಂದು ಪಿಣರಾಯಿ ನಿರಂತರ ಟೀಕಿಸುತ್ತಿದ್ದಾರೆ.

'ವಂದೇ ಮಾತರಂ': ಲೋಕಸಭೆಯಲ್ಲಿ ಇಂದು ಪ್ರಧಾನಿ ಮೋದಿ ಮಾತು

ನವದೆಹಲಿ (ಪಿಟಿಐ): 'ವಂದೇ ಮಾತರಂ' ಗೀತೆಯ 150ನೇ ವಾರ್ಷಿಕೋತ್ಸವ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಮೊದಲಿಗೆ ಲೋಕಸಭೆಯಲ್ಲಿ ಸೋಮವಾರ ಮಾತನಾಡಲಿದ್ದಾರೆ.

'ಚರ್ಚೆಯಿಂದ ಗೀತೆಯ ಕುರಿತ ಮಹತ್ವದ ಮತ್ತು ಕೆಲವು ಗೊತ್ತಿಲ್ಲದ ಮಾಹಿತಿ ಲಭ್ಯವಾಗುವ ನಿರೀಕ್ಷೆ ಇದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಸಭೆಯಲ್ಲಿ 'ವಂದೇ ಮಾತರಂ' ಕುರಿತ ಚರ್ಚೆಗೆ 10 ತಾಸು ಮೀಸಲಿಡಲಾಗಿದೆ.

ಈ ವಿಚಾರದ ಕುರಿತು ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕಾಂಗ್ರೆಸ್ ನಾಯಕರಾದ ಗೌರವ್ ಗೊಗೊಯ್ ಮತ್ತು ಪ್ರಿಯಾಂಕಾ ಗಾಂಧಿ ಮತ್ತಿತರರು ಮಾತನಾಡುವ ಸಾಧ್ಯತೆ ಇದೆ.

ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು, 'ವಂದೇ ಮಾತರಂ' ಗೀತೆಯ ಕೆಲ ಪ್ರಮುಖ ಸಾಲುಗಳನ್ನು 1937ರಲ್ಲಿ ಕಾಂಗ್ರೆಸ್ ಕೈಬಿಟ್ಟಿದೆ. ಇದು ದೇಶ ವಿಭಜನೆಯ ಬೀಜ ಬಿತ್ತಲು ಕಾರಣವಾಯಿತು' ಎಂದು ಆರೋಪಿಸಿದ್ದರು.

ರಾಜ್ಯಸಭೆಯಲ್ಲಿ ಮಂಗಳವಾರ ಗೃಹ ಸಚಿವ ಅಮಿತ್ ಶಾ ಅವರು ಈ ವಿಷಯದ ಕುರಿತು ಮೊದಲಿಗೆ ಮಾತನಾಡಲಿದ್ದಾರೆ. ನಂತರ ಸಚಿವ ಜೆ.ಪಿ.ನಡ್ಡಾ ಅವರು ಮಾತನಾಡಲಿದ್ದಾರೆ.

'ವಂದೇ ಮಾತರಂ' ಗೀತೆ ಕುರಿತ ಚರ್ಚೆ ಬಳಿಕ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಚರ್ಚೆ ನಡೆಯಲಿದೆ.



ಕೇರಳದ ಕೊಲ್ಲಂನಲ್ಲಿನ ಅಷ್ಟಮುಡಿ ಕೆರೆಯಲ್ಲಿ 10 ಮೀನುಗಾರಿಕಾ ದೋಣಿಗಳು ಭಾನುವಾರ ಮುಂಜಾನೆ ಬೆಂಕಿಯಲ್ಲಿ ಸುಟ್ಟು ಕರಕಲಾದವು — ಪಿಟಿಐ ಚಿತ್ರ

ನಟ ವಿಜಯ್ ಸಾರ್ವಜನಿಕ ಸಭೆಗೆ ಅನುಮತಿ ನಿರಾಕರಣೆ



ವಿಜಯ್

ಈರೋಡ್(ತಮಿಳುನಾಡು): ಇಲ್ಲಿ ಡಿಸೆಂಬರ್ 16ರಂದು ಆಯೋಜಿಸಲಾಗಿದ್ದ ಟಿವಿಕೆ ಮುಖ್ಯಸ್ಥ, ನಟ ವಿಜಯ್ ಅವರ ಸಾರ್ವಜನಿಕ ಸಭೆಗೆ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ.

ಸಭೆಗೆ ಅನುಮತಿ ಕೋರಿ ಆಯೋಜಕರಾದ ಮಾಜಿ ಸಚಿವ ಕೆ.ಎ ಸೆಂಗೊಟ್ಟಿಯನ್ ಅವರು ಜಿಲ್ಲಾಡಳಿತ ಮತ್ತು ಪೊಲೀಸರಿಗೆ ಮನವಿ ಸಲ್ಲಿಸಿದ್ದರು. ಸಭೆಗೆ ನಿಗದಿಯಾಗಿದ್ದ ಏಳು ಎಕರೆ ಖಾಸಗಿ ಸ್ಥಳವನ್ನು ಪರಿಶೀಲಿಸಿದ ಪೊಲೀಸ್ ವರಿಷ್ಠಾಧಿಕಾರಿ ಸುಜಾತ ಅವರು ಅನುಮತಿ ನೀಡಲು ನಿರಾಕರಿಸಿದ್ದಾರೆ.

'ಸಭೆಯಲ್ಲಿ 70 ಸಾವಿರ ಜನ ಭಾಗಿಯಾಗುವ ನಿರೀಕ್ಷೆಯಿದೆ ಎಂದು ಆಯೋಜಕರು ತಿಳಿಸಿದ್ದಾರೆ. ನಿಗದಿಪಡಿಸಿರುವ ಸ್ಥಳದಲ್ಲಿ ಅಷ್ಟು ಜನ ಸೇರಲು ಮತ್ತು ಅವರ ವಾಹನಗಳನ್ನು ನಿಲ್ಲಿಸಲು ಸಾಧ್ಯವಿಲ್ಲ. ಹಾಗಾಗಿ ಅನುಮತಿ ನಿರಾಕರಿಸಿದ್ದೇವೆ ಮತ್ತು ಬೇರೆ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿದ್ದೇವೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಏಸು ಕ್ರಿಸ್ತನ ಜನ್ಮಭೂಮಿಯಲ್ಲಿ ದೀಪಾಲಂಕಾರದ ಸೊಬಗು

2 ವರ್ಷದ ಬಳಿಕ ಕ್ರಿಸ್‌ಮಸ್ ಸಂಭ್ರಮ

ಮುಖ್ಯಾಂಶಗಳು
- ಗಾಜಾ ಯುದ್ಧದ ಕಾರಣಕ್ಕೆ ಮಂಕುಕವಿದಿದ್ದ ಪಟ್ಟಣ
- ಕ್ರಿಸ್‌ಮಸ್ ಕಾರಣಕ್ಕೆ ಹೋಟೆಲ್‌ಗಳಲ್ಲಿ ಜನಸ್ತೋಮ
- ಗರಿಗೆದರಿದ ವ್ಯಾಪಾರ, ವಹಿವಾಟು

ಬೆತ್ಲೆಹೆಮ್ (ವೆಸ್ಟ್‌ಬ್ಯಾಂಕ್),(ಎಪಿ): ಗಾಜಾದಲ್ಲಿನ ಯುದ್ಧದಿಂದಾಗಿ ಏಸು ಕ್ರಿಸ್ತನ ಜನ್ಮಭೂಮಿ ಬೆತ್ಲೆಹೆಮ್‌ನಲ್ಲಿ ಕಳೆದ ಎರಡು ವರ್ಷಗಳಿಂದ ಮರೆಯಾಗಿದ್ದ ಕ್ರಿಸ್‌ಮಸ್ ಸಂಭ್ರಮ ಇದೀಗ ಮತ್ತೆ ಮರುಕಳಿಸುತ್ತಿದೆ.

ಜನರಿಲ್ಲದೇ ಬಿಕೋ ಎನ್ನುತ್ತಿದ್ದ ರೆಸ್ಟೋರೆಂಟ್‌ಗಳಲ್ಲಿ ಈ ವರ್ಷ ಮತ್ತೆ ಜನರ ನಗು, ಕುಟುಂಬಗಳ ಸಂತಸ ಕಾಣುವಂತಾಗಿದ್ದು,ದೀಪಾಲಂಕಾರಗಳಿಂದ ಕಂಗೊಳಿಸುತ್ತಿರುವ ರೆಸ್ಟೋರೆಂಟ್‌ಗಳು ಜನರ ಮನಸ್ಸಲ್ಲಿ ಹೊಸ ಆಶಾಭಾವ ಮೂಡಿಸಿವೆ.

ಇಸ್ರೇಲ್ ಆಕ್ರಮಿತ ವೆಸ್ಟ್‌ಬ್ಯಾಂಕ್‌ನ ಬೆತ್ಲೆಹೆಮ್‌ನ ಸ್ಥಳೀಯ ವ್ಯಾಪಾರಿ ಜುಕಾ ಎಂಬವರು ಈ ಬಗ್ಗೆ ಮಾತನಾಡಿ, 'ಯುದ್ಧಕ್ಕೆ ಮುಂಚೆ ಇದ್ದಂಥ ಸ್ಥಿತಿಗೆ ಇನ್ನೂ ಮರಳಿಲ್ಲ. ಆದರೆ, ಸದ್ಯದ ಮಟ್ಟಿಗೆ ಜೀವ ಮರಳಿದಂತಾಗಿದೆ' ಎಂದಿದ್ದಾರೆ.

'10,000ಕ್ಕೂ ಅಧಿಕ ಮಂದಿ ಪ್ರವಾಸಿಗರು, ಯಾತ್ರಾರ್ಥಿಗಳು ಬೆತ್ಲೆಹೆಮ್‌ಗೆ ಭೇಟಿ ನೀಡುತ್ತಿದ್ದರು. ಆ ಸಂದರ್ಭದಲ್ಲಿ ನಗರದ ಎಲ್ಲರಿಗೂ ಕೆಲಸಗಳಿರುತ್ತಿದ್ದವು. ಯುದ್ಧದಿಂದ ಎಲ್ಲವೂ ಬದಲಾಗಿತ್ತು. ನಿರುದ್ಯೋಗದ ಪ್ರಮಾಣ ಶೇ14 ರಿಂದ ಶೇ 65ಕ್ಕೆ ಏರಿಕೆಯಾಗಿ, 4,000ಕ್ಕೂ ಅಧಿಕ ಮಂದಿ ಕೆಲಸ ಅರಸುತ್ತಾ ನಗರ ತೊರೆದಿದ್ದರು. ಇದೀಗ ಮತ್ತೆ ಜೀವನೋತ್ಸಾಹ ಮರುಕಳಿಸುತ್ತಿದೆ' ಎಂದು ಇಲ್ಲಿನ ಮೇಯರ್ ಮಹೇರ್ ನಿಕೋಲಾ ಹೇಳಿದ್ದಾರೆ.

ಜತೆಗೆ 'ಪ್ಯಾಲೆಸ್ಟೀನಿಯರಿಗೆ ಬದುಕಿನ ಪ್ರೀತಿ ಇದೆ, ಶಾಂತಿಯುತ ಪರಿಹಾರಕ್ಕಾಗಿ ನಾವು ಎದುರು ನೋಡುತ್ತಿದ್ದೇವೆ ಎಂಬ ಸಂದೇಶವನ್ನು ಈ ಬಾರಿಯ ಕ್ರಿಸ್‌ಮಸ್ ಆಚರಣೆಯ ಮೂಲಕ ಇಡೀ ಜಗತ್ತಿಗೆ ತಲುಪಿಸಲು ನಾವು ಬಯಸಿದ್ದೇವೆ' ಎಂದೂ ಅವರು ತಿಳಿಸಿದ್ದಾರೆ.



ಕ್ರಿಸ್‌ಮಸ್ ಸಂಭ್ರಮಾಚರಣೆಗೆ ಸಜ್ಜುಗೊಂಡಿರುವ ಬೆತ್ಲೆಹೆಮ್‌ನ ನೇಟಿವಿಟಿ ಸ್ಕ್ವೇರ್‌ನಲ್ಲಿ ವ್ಯಕ್ತಿಯೊಬ್ಬರು ಸಾಂಟಾಕ್ಲಾಸ್ ವೇಷಧಾರಿಯಾಗಿ ಬಲೂನ್‌ಗಳನ್ನು ಮಾರಿದರು —ಎಎಫ್‌ಪಿ ಚಿತ್ರ



ಹೊರಬಂತು 'ಮಾರ್ಕ್' ಟ್ರೇಲರ್

ಸುದೀಪ್ ನಟನೆಯ 'ಮಾರ್ಕ್' ಚಿತ್ರದ ಟ್ರೇಲರ್ ಬಿಡುಗಡೆಗೊಂಡಿದೆ. ವಿಜಯ್ ಕಾರ್ತಿಕೇಯನ್ ನಿರ್ದೇಶನದ ಚಿತ್ರ ಡಿ.25ಕ್ಕೆ ತೆರೆಗೆ ಬರಲಿದೆ. ಆರ್. ಚಂದ್ರು, ಎ.ಪಿ. ಅರ್ಜುನ್, ರಾಕ್‌ಲೈನ್ ವೆಂಕಟೇಶ್, ಜೆಕೆ, ಜೋಗಿ ಪ್ರೇಮ್, ಚಂದನ್, ಅನೂಪ್ ಭಂಡಾರಿ ಮುಂತಾದವರು ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ತಂಡಕ್ಕೆ ಶುಭ ಹಾರೈಸಿದರು.

'ಮ್ಯಾಕ್ಸ್' ಸಿನಿಮಾದ ರೀತಿಯದ್ದೇ ಆ್ಯಕ್ಷನ್ ಕಥೆ ಈ ಚಿತ್ರದಲ್ಲಿಯೂ ಇದೆ. ಮಕ್ಕಳ ಅಪಹರಣದ ಕಥೆಯನ್ನು ಈ ಸಿನಿಮಾ ಹೊಂದಿದೆ. ಮಕ್ಕಳನ್ನು ಅಪಹರಿಸುವ ಖಳರಿಗೆ ಮಾರ್ಕ್ ಹೇಗೆ ಪಾಠ ಕಲಿಸುತ್ತಾನೆ ಎಂಬುದೇ ಒಟ್ಟಾರೆ ಚಿತ್ರಕಥೆ ಎಂಬುದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

'ಇವತ್ತಿನ ಪರಿಸ್ಥಿತಿಯಲ್ಲಿ ಸಿನಿಮಾವನ್ನು ಅಚ್ಚುಕಟ್ಟಾಗಿ, ಅಂದುಕೊಂಡ ಸಮಯದಲ್ಲಿ ಮುಗಿಸುವುದು ಬಹಳ ಮುಖ್ಯ. ನನ್ನ ಸಿನಿಮಾದ ತಾಂತ್ರಿಕ ತಂಡದ ಬೆಂಬಲದಿಂದ ಇದು ಸಾಧ್ಯವಾಗಿದೆ. 107 ದಿನಗಳ ಕಾಲ ಚಿತ್ರೀಕರಣ ಮಾಡಿ, ಮೂರು ತಿಂಗಳಲ್ಲಿ ಪೋಸ್ಟ್ ಪ್ರೊಡಕ್ಷನ್ ಕೆಲಸ ಮುಗಿಸಿದ್ದೇವೆ. ಹಿಂದಿನ ಪಯಣದಿಂದಲೇ ಇವತ್ತಿನ ಕೆಲಸ ಸುಲಭವಾಗಿದೆ. ಡಿ.25ಕ್ಕೆ ಸ್ಟಾರ್‌ಗಳ ಎರಡು ಸಿನಿಮಾಗಳು ಒಟ್ಟಿಗೆ ಬರುತ್ತಿವೆ. 'ಡೆವಿಲ್' ಮೂರು ವಾರಗಳ ಮೊದಲು ಬರುತ್ತಿದೆ. ದೀಪಾವಳಿಗೆ ಎಲ್ಲರ ಮನೆಯಲ್ಲೂ ಹಬ್ಬ ನಡೆಯುತ್ತದೆ. ಆದರೂ ಎಲ್ಲರಿಗೂ ತರಕಾರಿ ದೊರೆಯುತ್ತದೆ. ಅದೇ ರೀತಿ ಡಿಸೆಂಬರ್‌ನಲ್ಲಿ ಸ್ಟಾರ್‌ಗಳ ಸಿನಿಮಾ ಬರುತ್ತವೆ. ಎಲ್ಲರಿಗೂ ಚಿತ್ರಮಂದಿರಗಳು ಸಿಗುತ್ತವೆ. ಪೈಪೋಟಿ ಏನಿಲ್ಲ, ಈ ರೀತಿ ಚಿತ್ರ ಬಿಡುಗಡೆಯಿಂದ ಪ್ರದರ್ಶಕರು ಸಂತಸಗೊಂಡಿದ್ದಾರೆ' ಎಂದರು ಸುದೀಪ್.

'ಪ್ರತಿ ಸಲ ಸಿನಿಮಾ ಮಾಡಿದಾಗ ವಿಭಿನ್ನವಾಗಿರುವುದನ್ನು ಹೇಳಬೇಕು, ಯಾರೂ ನೋಡದ ಪ್ರಪಂಚವನ್ನು ತೋರಿಸಬೇಕು, ಯಾರೂ ಹೇಳದ ಕಥೆಯನ್ನು ಹೇಳಬೇಕು ಎಂದರೆ, ಯಾರಿಗೂ ಸಿನಿಮಾ ಮಾಡಲು ಸಾಧ್ಯವಿಲ್ಲ. ಅಂತಿಮವಾಗಿ ಬೇಕಿರುವುದು ಮನರಂಜನೆ. ಅದು ಈ ಸಿನಿಮಾದಲ್ಲಿದೆ. ಆದರೆ ಹಿಂದೆ ಮಾಡಿರದ ಪಾತ್ರ ಇದರಲ್ಲಿದೆ ಎನ್ನಬಹುದು. 'ಮ್ಯಾಕ್ಸ್' ಸಿನಿಮಾ ಸ್ಫೂರ್ತಿಯಿಂದ 'ಮಾರ್ಕ್' ಹುಟ್ಟಿದ್ದು' ಎಂದು ಅವರು ತಿಳಿಸಿದರು.

'ಸತ್ಯಜ್ಯೋತಿ ಫಿಲ್ಮ್ಸ್' ಮತ್ತು 'ಕಿಚ್ಚ ಕ್ರಿಯೇಷನ್ಸ್' ಮೂಲಕ 'ಮಾರ್ಕ್' ಸಿನಿಮಾ ನಿರ್ಮಾಣಗೊಂಡಿದೆ. ಇದೇ ತಂಡದಿಂದ 'ಮ್ಯಾಕ್ಸ್' ಸಿನಿಮಾ ಕೂಡ 2024ರ ಡಿಸೆಂಬರ್ 25ರಂದು ಬಿಡುಗಡೆಯಾಗಿ ಯಶಸ್ವಿಯಾಗಿತ್ತು.

ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ, ಶೇಖರ್ ಚಂದ್ರ ಅವರ ಛಾಯಾಚಿತ್ರಗ್ರಹಣವಿದೆ. ತಮಿಳು ಚಿತ್ರರಂಗದ ಖ್ಯಾತ ನಟ ಯೋಗಿಬಾಬು, ಮಲಯಾಳದ ಶೈನ್ ಟಾಮ್ ಚಾಕೋ ಸೇರಿದಂತೆ ಹಲವು ಪ್ರಮುಖ ಕಲಾವಿದರು ಚಿತ್ರದಲ್ಲಿದ್ದಾರೆ.



ಆರ್ಯನ್ ತೇಜಸ್, ರಾಧಾ ಭಗವತಿ

ಹೊಸಬರ ನಾನು ಕರುಣಾಕರ

ಬಹುತೇಕ ಹೊಸಬರಿಂದಲೇ ಕೂಡಿರುವ 'ನಾನು ಕರುಣಾಕರ' ಚಿತ್ರ ಫೆ.6ರಂದು ತೆರೆಗೆ ಬರಲಿದೆ. ಆರ್ಯನ್ ತೇಜಸ್ ನಿರ್ದೇಶನದ ಜತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

'ಅಪ್ಪ–ಮಗ ಹಾಗೂ ಗಂಡ–ಹೆಂಡತಿಯ ಬಾಂಧವ್ಯದ ಸುತ್ತ ಸಾಗುವ ಕಥೆ. ಇಡೀ ಕುಟುಂಬ ಕುಳಿತು ನೋಡಿದಾಗ ಇಲ್ಲಿನ ಪಾತ್ರಗಳು ಎಲ್ಲರ ಮನೆಯಲ್ಲೂ ಇರುವುದು ನಮಗೆ ಅರಿವಾಗುತ್ತದೆ. ಕಾಮಿಡಿ ಜಾನರ್‌ನ ಕಥೆಯಿದು' ಎಂದಿದ್ದಾರೆ ನಿರ್ದೇಶಕ.

'ನಮ್ಮ ಪಾಪ್ ಕಾರ್ನ್' ಸಿನಿಮಾ ಪ್ರೊಡಕ್ಷನ್ ಬಂಡವಾಳ ಹೂಡಿದೆ. ರಾಧಾ ಭಗವತಿ ನಾಯಕಿ. ಮಾಸ್ಟರ್ ಭವೀಶ್, ಕರಿಸುಬ್ಬು, ಎಂ.ಕೆ ಮಠ, ಬಿ.ಎಂ. ವೆಂಕಟೇಶ ಮುಂತಾದವರು ಚಿತ್ರದಲ್ಲಿದ್ದಾರೆ.

ಸೆಟ್ಟೇರಿದ ಗುಮ್ಮಡಿ ನರಸಯ್ಯ

ಶಿವರಾಜ್‌ಕುಮಾರ್ ನಟಿಸುತ್ತಿರುವ ತೆಲುಗು ಸಿನಿಮಾ 'ಗುಮ್ಮಡಿ ನರಸಯ್ಯ' ಇತ್ತೀಚೆಗಷ್ಟೇ ಸೆಟ್ಟೇರಿದೆ. ಗೀತಾ ಶಿವರಾಜ್‌ಕುಮಾರ್ ಚಿತ್ರದ ಮೊದಲ ದೃಶ್ಯಕ್ಕೆ ಚಾಲನೆ ನೀಡಿ ತಂಡಕ್ಕೆ ಶುಭ ಹಾರೈಸಿದರು. ಪರಮೇಶ್ವರ್ ಹಿವ್ರಾಳೆ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಐದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರೂ ಸರಳ ಜೀವನ ನಡೆಸುತ್ತಿರುವ ಆಂಧ್ರದ ಮಾಜಿ ಶಾಸಕ ಗುಮ್ಮಡಿ ನರಸಯ್ಯ ಅವರ ಜೀವನಾಧಾರಿತ ಸಿನಿಮಾ ಇದಾಗಿದೆ. ಸ್ವತಃ ಗುಮ್ಮಡಿ ನರಸಯ್ಯ ಅವರೇ ಚಿತ್ರದ ಮುಹೂರ್ತ ಸಮಾರಂಭದಲ್ಲಿ ಭಾಗಿಯಾಗಿದ್ದು ವಿಶೇಷವಾಗಿತ್ತು.

'ಗುಮ್ಮಡಿ ಅವರಂಥ ಉದಾತ್ತ ವ್ಯಕ್ತಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲು ಸಂತೋಷ ಮತ್ತು ಹೆಮ್ಮೆಪಡುತ್ತೇನೆ. ಈ ಅವಕಾಶಕ್ಕಾಗಿ ಪರಮೇಶ್ವರ್ ಮತ್ತು ಎನ್. ಸುರೇಶ್ ರೆಡ್ಡಿ ಅವರಿಗೆ ನನ್ನ ಧನ್ಯವಾದಗಳು. ನನ್ನ ತಂದೆ ಕೂಡ ಗುಮ್ಮಡಿ ನರಸಯ್ಯರಂತೆಯೇ ಜನ ಸೇವೆ ಸಲ್ಲಿಸಿದ್ದಾರೆ. ಅವರು ಯಾವಾಗಲೂ 'ನಿಮಗಾಗಿ ಬದುಕಬೇಡಿ, ಇತರರಿಗಾಗಿ ಬದುಕಿ' ಎಂದು ಹೇಳುತ್ತಿದ್ದರು. ನಾನು ಇತ್ತೀಚೆಗೆ ಗುಮ್ಮಡಿ ನರಸಯ್ಯ ಅವರ ಮನೆಗೆ ಭೇಟಿ ನೀಡಿದಾಗ, ನಾನು ನನ್ನ ತಂದೆಯ ಬಳಿಗೆ ಹಿಂತಿರುಗಿದಂತೆ ಭಾಸವಾಯಿತು. ನಾನು ಈ ಚಿತ್ರಕ್ಕಾಗಿ ತೆಲುಗು ಕಲಿಯುತ್ತಿದ್ದೇನೆ. ಈ ಚಿತ್ರವು ಎಲ್ಲಾ ರಾಜಕೀಯ ನಾಯಕರಿಗೆ ಸ್ಫೂರ್ತಿಯಾಗಲಿದೆ' ಎಂದರು ಶಿವರಾಜ್‌ಕುಮಾರ್.

ಪ್ರವಲ್ಲಿಕಾ ಆರ್ಟ್ಸ್ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಎನ್. ಸುರೇಶ್ ರೆಡ್ಡಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಈಗಾಗಲೇ ಚಿತ್ರದ ಫಸ್ಟ್ ಲುಕ್ ಬಿಡುಗಡೆಗೊಂಡಿದ್ದು, ಶಿವಣ್ಣ ಪಂಚೆ ಉಟ್ಟು, ಶರ್ಟ್ ಮೇಲೆ ಕೆಂಪು ಬಣ್ಣದ ಶಾಲು ಧರಿಸಿ, ಸೈಕಲ್ ತುಳಿಯುತ್ತ ಸರಳ ರಾಜಕಾರಣಿಯಾಗಿ ಕಾಣಿಸಿಕೊಂಡಿದ್ದಾರೆ.



ಶಿವರಾಜ್‌ಕುಮಾರ್, ಗುಮ್ಮಡಿ ನರಸಯ್ಯ

ಡಿಜಿಸಿಎ, ಇಂಡಿಗೊಗೆ ಸಮನ್ಸ್ ಸಾಧ್ಯತೆ

ವಿಮಾನಗಳ ಸಂಚಾರ ವ್ಯತ್ಯಯ: ವಿವರ ಕೋರಲಿರುವ ಸಂಸದೀಯ ಸಮಿತಿ

ನವದೆಹಲಿ: ವಿಮಾನಗಳ ಸಂಚಾರ ವ್ಯತ್ಯಯದಿಂದ ಉಂಟಾಗಿರುವ ಬಿಕ್ಕಟ್ಟು ಬಗ್ಗೆ ವಿವರ ಪಡೆಯಲು ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಇಲಾಖೆಯ ಸಂಸದೀಯ ಸ್ಥಾಯಿ ಸಮಿತಿಯು ಇಂಡಿಗೊ ಮತ್ತು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ(ಡಿಜಿಸಿಎ) ಅಧಿಕಾರಿಗಳಿಗೆ ಸಮನ್ಸ್ ಜಾರಿ ಮಾಡುವ ಸಾಧ್ಯತೆ ಇದೆ.

ಜೆಡಿ(ಯು) ಸಂಸದ ಸಂಜಯ್ ಝಾ ನೇತೃತ್ವದ ಸಮಿತಿಯು, ಇಂಡಿಗೊ ವಿಮಾನಯಾನ ಸಂಸ್ಥೆ ಹಾಗೂ ನಾಗರಿಕ ವಿಮಾನಯಾನ ಸಚಿವಾಲಯ ಮತ್ತು ಡಿಜಿಸಿಎ ಉನ್ನತ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ವಿವರಣೆ ಪಡೆಯಲಿದೆ. ಈ ಬಿಕ್ಕಟ್ಟಿನ ಅವಧಿಯಲ್ಲಿ ವಿಮಾನ ದರಗಳಲ್ಲಿನ ಏರಿಕೆಯ ಬಗ್ಗೆಯೂ ಸಮಿತಿ ವಿವರಣೆಯನ್ನು ಪಡೆಯಲಿದೆ.

ಅಘೋಷಿತವಾಗಿ ಇಂಡಿಗೊ ವಿಮಾನಗಳ ಸಂಚಾರ ರದ್ದತಿ ಮತ್ತು ಅದರಿಂದ ಪ್ರಯಾಣಿಕರಿಗಾದ ಅನನುಕೂಲಗಳನ್ನು ಸರಿಪಡಿಸಲು ಯಾವ ರೀತಿ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ವಿವರಿಸುವಂತೆ ಅಧಿಕಾರಿಗಳನ್ನು ಬಹುಪಕ್ಷೀಯ ಸದಸ್ಯರನ್ನೊಳಗೊಂಡ ಸಂಸದೀಯ ಸ್ಥಾಯಿ ಸಮಿತಿಯು ಕೇಳಲಿದೆ.

ವಿರೋಧ ಪಕ್ಷಗಳು ಸಂಸತ್ತಿನ ಉಭಯಸದನಗಳಲ್ಲಿ ಇಂಡಿಗೊ ವಿಮಾನ ಸಂಚಾರದ ಬಿಕ್ಕಟ್ಟಿನ ವಿಷಯವನ್ನು ಪ್ರಸ್ತಾಪಿಸಿ, ನಾಗರಿಕ ವಿಮಾನಯಾನ ವಲಯದಲ್ಲಿ ಏಕಸ್ವಾಮ್ಯ ಪ್ರವೃತ್ತಿಯಿಂದಲೇ ಇಂಥ ಸಮಸ್ಯೆಗಳು ಉಂಟಾಗುತ್ತಿವೆ' ಎಂದು ಆರೋಪಿಸಿವೆ.

ಈಗಾಗಲೇ, ಡಿಜಿಸಿಎಯು ಇಂಡಿಗೊ ವಿಮಾನ ಕಂಪನಿಯ ಸಿಇಒ ಪೀಟರ್ ಎಲ್ಬರ್ಸ್ ಮತ್ತು ಸಿಒಒ ಮತ್ತು ಅಕೌಂಟೆಬಲ್ ಮ್ಯಾನೇಜರ್ ಪೋರ್ಕ್ವೆರಾಸ್ ಅವರಿಗೆ ವಿವರಣೆಯನ್ನು ಕೋರಿ ನೋಟಿಸ್ ನೀಡಿದೆ.

'ದರ ಮಿತಿ ಮುಂದುವರಿಯಲಿ'

'ನಾಗರಿಕ ವಿಮಾನಯಾನ ವಲಯದಲ್ಲಿ ಏಕಸ್ವಾಮ್ಯ ಹೋಗುವವರೆಗೂ ಪ್ರಯಾಣದ ದರ ಮಿತಿಯನ್ನು ಮುಂದುವರಿಸುವಂತೆ ಕಾಂಗ್ರೆಸ್ ನಾಯಕ ಪಿ.ಚಿದಂಬರಂ ತಿಳಿಸಿದ್ದಾರೆ.

'ವಿಮಾನಯಾನ ವಲಯದಲ್ಲಿ ಏಕಸ್ವಾಮ್ಯ ಇಲ್ಲವಾಗುವವರೆಗೂ ಎಕಾನಮಿ ದರ್ಜೆಯ ಪ್ರಯಾಣ ದರಗಳ ಮೇಲಿನ ಮಿತಿಗಳು ಜಾರಿಯಲ್ಲಿರಬೇಕು. ತೀವ್ರ ಸ್ಪರ್ಧೆಯಿಲ್ಲದಿದ್ದಾಗ, ಸಾರ್ವಜನಿಕ ಹಿತಾಸಕ್ತಿ ರಕ್ಷಿಸಲು ಬೆಲೆ ನಿಯಂತ್ರಣ ಏಕೈಕ ಮಾರ್ಗ. ಇದರ ಮೂಲಕ ಸರ್ಕಾರ ಪ್ರಯಾಣಿಕರನ್ನು ರಕ್ಷಿಸಬೇಕು' ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.



ನವದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಒಂದನೇ ಟರ್ಮಿನಲ್‌ನಲ್ಲಿ ಭಾನುವಾರ ಪ್ರಯಾಣಿಕರು ಇಂಡಿಗೊ ವಿಮಾನಕ್ಕಾಗಿ ಕಾಯುತ್ತಿದ್ದರು —ಪಿಟಿಐ ಚಿತ್ರ

ಬಿಕ್ಕಟ್ಟು ನಿರ್ವಹಣಾ ತಂಡದಿಂದ ನಿರಂತರ ನಿಗಾ

ಮುಂಬೈ (ಪಿಟಿಐ): ಇಂಡಿಗೊದ ಮಾತೃಸಂಸ್ಥೆಯಾದ 'ಇಂಟರ್‌ಗ್ಲೋವ್ ಏವಿಯೇಷನ್' ಬಿಕ್ಕಟ್ಟು ನಿರ್ವಹಣಾ ತಂಡವನ್ನು (ಸಿಎಂಜಿ) ರಚಿಸಿದ್ದು, ಈಗ ಸೃಷ್ಟಿಯಾಗಿರುವ ಸಮಸ್ಯೆಯ ಮೇಲೆ ನಿರಂತರ ನಿಗಾ ವಹಿಸುತ್ತಿದೆ ಎಂದು ಏರ್‌ಲೈನ್ಸ್ ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

'ಗ್ರಾಹಕರು ಎದುರಿಸಿದ ಎಲ್ಲ ಸವಾಲುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕಂಪನಿಯ ನಿರ್ದೇಶಕರು ಶ್ರಮಿಸುತ್ತಿದ್ದು, ಹಣ ಮರುಪಾವತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ' ಎಂದು ತಿಳಿಸಿದೆ.

ಇಂಡಿಗೊ ಸಿಇಒ ಪೀಟರ್ ಎಲ್ಬರ್ಸ್, ಸಿಒಒ ಇಸಿಡ್ರೊ ಪೋರ್ಕೆರಸ್ ಅವರಿಗೆ ಡಿಜಿಸಿಎ ನೋಟಿಸ್ ಜಾರಿಗೊಳಿಸಿದ್ದು, 24 ಗಂಟೆಯ ಒಳಗಾಗಿ ವಿವರಣೆ ನೀಡುವಂತೆ ತಿಳಿಸಿದೆ. ಇದಾದ ಮರುದಿನವೇ, ಸಂಸ್ಥೆಯು ಈ ಹೇಳಿಕೆಯನ್ನು ಬಿಡುಗಡೆಗೊಳಿಸಿದೆ.

'ವಿಮಾನಗಳ ರದ್ದು ಕುರಿತಂತೆ ಆಂತರಿಕ ತನಿಖೆಯ ವರದಿ ಆಧರಿಸಿ, ಇಂಡಿಗೊ ಸಂಸ್ಥೆಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ' ಎಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ವಿಮಾನಗಳ ವಿಳಂಬ ಹಾಗೂ ರದ್ದು ಕುರಿತಂತೆ ಇಂಟರ್‌ಗ್ಲೋಬ್ ಏವಿಯೇಷನ್ ಲಿಮಿಟೆಡ್ (ಇಂಡಿಗೊ) ಸಂಸ್ಥೆಯ ನಿರ್ದೇಶಕರು ಮೊದಲ ಸಭೆ ನಡೆಸಿದರು. ಈ ವೇಳೆ ಸಂಸ್ಥೆಯ ಸದಸ್ಯರು ಬಿಕ್ಕಟ್ಟು ಉದ್ಭವವಾದ ಕುರಿತು ವಿಸ್ತೃತ ಮಾಹಿತಿ ಪಡೆದಿದ್ದಾರೆ.

ಇದರ ಬೆನ್ನಲ್ಲೇ, ಮುಖ್ಯಸ್ಥರಾದ ವಿಕ್ರಮ್ ಸಿಂಗ್ ಮೆಹ್ತಾ, ಬೋರ್ಡ್ ನಿರ್ದೇಶಕರಾದ ಗ್ರೆಗ್ ಸರೆಟ್ಸ್ಕಿ, ಮೈಕ್ ವೈಟಕೆರ್, ಅಮಿತಾಬ್ ಕಾಂತ್ ಹಾಗೂ ಸಿಇಒ ಪೀಟರ್ ಎಲ್ಬರ್ಸ್ ನೇತೃತ್ವದಲ್ಲಿ ಸಿಎಂಜಿ ರಚಿಸಲಾಗಿತ್ತು. ಈ ತಂಡವು ನಿರಂತರ ಸಭೆ ನಡೆಸಿ, ಆಡಳಿತ ಮಂಡಳಿಗೆ ನಿರಂತರವಾಗಿ ಮಾಹಿತಿ ನೀಡುತ್ತಿದ್ದು, ವಿಮಾನಗಳ ಹಾರಾಟವನ್ನು ಸುಗಮಗೊಳಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಅವರು ಹೇಳಿದ್ದಾರೆ.

150 ವಿಮಾನಗಳ ರದ್ದು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಭಾನುವಾರ ದೇಶದ ವಿವಿಧೆಡೆಗೆ ತೆರಳಬೇಕಿದ್ದ 150 ಇಂಡಿಗೊ ವಿಮಾನಗಳ ಹಾರಾಟ ರದ್ದಾಗಿದೆ.

ಬೆಂಗಳೂರಿಗೆ ಬರಬೇಕಿದ್ದ ಒಟ್ಟು 76, ಇಲ್ಲಿಂದ ಹೊರಡಬೇಕಿದ್ದ 74 ವಿಮಾನಗಳ ಕಾರ್ಯಾಚರಣೆ ರದ್ದು ಮಾಡಲಾಗಿದೆ.

ಟಿಕೆಟ್ ಬುಕ್ ಮಾಡಿದ್ದವರು ಗುಂಪು, ಗುಂಪಾಗಿ ಟರ್ಮಿನಲ್‌ನಲ್ಲಿರುವ ಸಹಾಯ ಕೇಂದ್ರದಲ್ಲಿ ಇಂಡಿಗೊ ವಿಮಾನ ಭಾನುವಾರ, ಸೋಮವಾರದ ಕಾರ್ಯಾಚರಣೆಯ ವಿಚಾರಣೆ ನಡೆಸುತ್ತಿದ್ದ ದೃಶ್ಯ ಕಂಡು ಬಂದಿತು.

ವಿಮಾನ ಹಾರಾಟ ರದ್ದುಗೊಂಡಿದ್ದರಿಂದಾಗಿ ಟೂರ್ ಪ್ಯಾಕೇಜ್ ವ್ಯವಸ್ಥೆ ಮಾಡುವ ಟ್ರಾವೆಲ್ ಏಜೆನ್ಸಿಗಳ ವಹಿವಾಟಿಗೂ ತೊಂದರೆಯಾಗಿದೆ. ಎಲ್ಲ ಪ್ರವಾಸಿಗರಿಗೆ ಟಿಕೆಟ್ ಹಾಗೂ ಪ್ರವಾಸ ಮರು ನಿಗದಿ ಮಾಡಬೇಕಿದೆ.

'ಸಾಮಾನ್ಯವಾಗಿ ಡಿಸೆಂಬರ್ ತಿಂಗಳಲ್ಲಿ ಹೆಚ್ಚು ವಹಿವಾಟು ನಡೆಯುತ್ತದೆ. ಈ ಬಾರಿ ಅದಕ್ಕೂ ಕುತ್ತು ಬಂದಿದೆ' ಎಂದು ಏಜೆನ್ಸಿ ಸಿಬ್ಬಂದಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ರಾಜಸ್ಥಾನ ಪ್ರವಾಸೋದ್ಯಮಕ್ಕೆ ಹೊಡೆತ

ಜೈಪುರ(ಪಿಟಿಐ): ಇಂಡಿಗೊ ವಿಮಾನ ಸಂಚಾರದಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದಾಗಿ ಇಲ್ಲಿನ ಪ್ರವಾಸೋದ್ಯಮದ ಮೇಲೆ ತೀವ್ರ ಪರಿಣಾಮ ಬೀರಿದ್ದು, ರಾಜಸ್ಥಾನಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಇಳಿಮುಖ ವಾಗುತ್ತಿದೆ.

ಈ ಬಿಕ್ಕಟ್ಟಿನಿಂದಾಗಿ ಪ್ರಮುಖ ಪ್ರವಾಸಿ ತಾಣಗಳಲ್ಲಿರುವ ಹೋಟೆಲ್‌ಗಳು, ಪ್ರವಾಸ ಆಯೋಜಿಸುವ ಕಂಪನಿಗಳ ನಿರ್ವಾಹಕರ ಮೇಲೆ ಪರಿಣಾಮ ಬೀರಿದೆ ಎಂದು ಸ್ಥಳೀಯ ಟೂರ್ ಆಪರೇಟರ್‌ಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಚಳಿಗಾಲ ರಾಜಸ್ಥಾನದ ಪ್ರವಾಸಿ ತಾಣಗಳಿಗೆ ಭೇಟಿ ನೀಡಲು ಅತ್ಯಂತ ಸೂಕ್ತ ಕಾಲ. ಎರಡು ತಿಂಗಳಿನಿಂದ ಪ್ರವಾಸೋದ್ಯಮ ಚಟುವಟಿಕೆ ಗರಿಗೆದರುತ್ತದೆ. ಡಿಸೆಂಬರ್ 10 ರಿಂದ ಜನವರಿ 5 ರವರೆಗೆ ಇದು ಗರಿಷ್ಠ ಪ್ರಮಾಣಕ್ಕೆ ತಲುಪುತ್ತದೆ. ಈ ದಿನಗಳಲ್ಲಿ ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಆಚರಣೆಗಳೂ ಸೇರ್ಪಡೆಗೊಳ್ಳುತ್ತವೆ. ಈಗಿನ 'ಇಂಡಿಗೊ ಬಿಕ್ಕಟ್ಟು', ಈ ಎಲ್ಲ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಬೀರಿದೆ' ಎಂದು ಜೈಪುರದ ಟೂರ್ ಆಪರೇಟರ್ ಸಂಜಯ್ ಕೌಶಿಕ್ ವಿವರಿಸಿದರು.

'ವಿಮಾನ ರದ್ದಾದರೆ ಪ್ರವಾಸಿಗರಿಗಷ್ಟೇ ನಷ್ಟವಲ್ಲ, ಕ್ರಿಸ್‌ಮಸ್ ಮತ್ತು ಹೊಸ ವರ್ಷಕ್ಕಾಗಿ ಹೋಟೆಲ್, ಸ್ಥಳೀಯ ಸಂಚಾರಕ್ಕಾಗಿ ಬಸ್ ಬುಕ್ ಮಾಡಿದ್ದನ್ನು ಪ್ರವಾಸಿಗರು ರದ್ದು ಮಾಡುತ್ತಿರುವುದಿಂದ ದೊಡ್ಡ ಹಿನ್ನಡೆಯಾಗಿದೆ' ಎಂದು ಅವರು ಹೇಳಿದರು. 'ಈ ಬಿಕ್ಕಟ್ಟು ಮುಂದುವರಿದರೆ, ನಮ್ಮ ಬುಕಿಂಗ್ ವ್ಯರ್ಥವಾಗುತ್ತದೆ ಎಂದು ಜನರು ಆತಂಕದಲ್ಲಿದ್ದಾರೆ. ಹೀಗಾಗಿ ಈಗಾಗಲೇ ಬುಕ್ ಮಾಡಿದ್ದವರು ರದ್ದುಗೊಳಿಸುತ್ತಿದ್ದಾರೆ. ಇನ್ನೊಂದೆಡೆ ಹೊಸ ಬುಕಿಂಗ್‌ಗಳು ಸ್ಥಗಿತಗೊಳ್ಳುತ್ತಿವೆ. ಪ್ರವಾಸಕ್ಕೆ ಸೂಕ್ತವಾಗಿರುವ ಕಾಲದಲ್ಲಿ ಇಂಥ ಬೆಳವಣಿಗೆಗಳು ಪ್ರವಾಸೋದ್ಯಮಕ್ಕೆ ದೊಡ್ಡ ಹೊಡೆತ ಕೊಡುತ್ತವೆ' ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಇಂಡಿಗೊ: ₹610 ಕೋಟಿ ಮರುಪಾವತಿಗೆ ಕ್ರಮ

ಒಂದನೇ ಪುಟದಿಂದ...

ಈ ವೇಳೆ, ಲಗೇಜುಗಳು ಪ್ರತ್ಯೇಕಗೊಂಡಿದ್ದರಿಂದ ಪ್ರಯಾಣಿಕರು ಪರದಾಡಿದ್ದರು. ಇಂತಹ ಲಗೇಜುಗಳನ್ನು ಪತ್ತೆ ಹಚ್ಚಿ, 48 ಗಂಟೆಗಳ ಒಳಗಾಗಿ ಆಯಾ ಪ್ರಯಾಣಿಕರಿಗೆ ತಲುಪಿಸುವಂತೆ ಸಚಿವಾಲಯವು ಇಂಡಿಗೊ ಸಂಸ್ಥೆಗೆ ನಿರ್ದೇಶನ ನೀಡಿತ್ತು.

'ವಿಮಾನ ನಿಲ್ದಾಣಗಳ ಟರ್ಮಿನಲ್‌ಗಳಲ್ಲಿ ಸಹಜಸ್ಥಿತಿ ಕಂಡುಬಂದಿದೆ. ಪ್ರಯಾಣಿಕರ ಚೆಕ್‌ಇನ್, ಭದ್ರತೆ ಹಾಗೂ ಬೋರ್ಡಿಂಗ್ ಪ್ರಕ್ರಿಯೆಗಳು ಕೂಡ ಸುಲಲಿತವಾಗಿ ನಡೆಯುತ್ತಿದ್ದು, ಯಾವುದೇ ದಟ್ಟಣೆ ಕಂಡುಬಂದಿಲ್ಲ ಎಂದು ದೆಹಲಿ, ಮುಂಬೈ, ಬೆಂಗಳೂರು, ಚೆನ್ನೈ, ಹೈದರಾಬಾದ್, ಅಹಮದಾಬಾದ್ ಹಾಗೂ ಗೋವಾ ವಿಮಾನ ನಿಲ್ದಾಣಗಳ ನಿರ್ದೇಶಕರು ಖಚಿತಪಡಿಸಿದ್ದಾರೆ' ಎಂದೂ ಸಚಿವಾಲಯ ತಿಳಿಸಿದೆ.

ಶುಕ್ರವಾರ, ಇಂಡಿಗೊ ಸಂಸ್ಥೆಯ 706 ವಿಮಾನಗಳು ಕಾರ್ಯಾಚರಿಸಿದ್ದವು. ಇವುಗಳ ಸಂಖ್ಯೆ ಶನಿವಾರ 1,565ಕ್ಕೆ ಏರಿಕೆಯಾಗಿತ್ತು. ಭಾನುವಾರ 1,650 ವಿಮಾನಗಳ ಸಂಚಾರಕ್ಕೆ ಸಂಸ್ಥೆ ಕ್ರಮ ಕೈಗೊಂಡಿತ್ತು. ಇತರ ದೇಶೀಯ ವಿಮಾನಸಂಸ್ಥೆಗಳು ಯಾವುದೇ ತೊಂದರೆ ಇಲ್ಲದೆ ಕಾರ್ಯಾಚರಣೆ ಮಾಡುತ್ತಿವೆ ಎಂದು ಹೇಳಿದೆ.

'ಸಾಮಾನ್ಯ ಸ್ಥಿತಿಯತ್ತ ಕಾರ್ಯಾಚರಣೆ'

'ವಿಮಾನಗಳ ಸಂಚಾರವನ್ನು ಹಂತಹಂತವಾಗಿ ಸಾಮಾನ್ಯ ಸ್ಥಿತಿಗೆ ತರಲು ಕ್ರಮಕೈಗೊಂಡಿದ್ದೇವೆ. ಭಾನುವಾರ ಅಂದಾಜು 1,650 ವಿಮಾನಗಳು ಕಾರ್ಯಾಚರಿಸಿವೆ' ಎಂದು ಇಂಡಿಗೊ ಸಿಇಒ ಪೀಟರ್ ಎಲ್ಬರ್ಸ್ ಭಾನುವಾರ ಹೇಳಿದ್ದಾರೆ.

ಈ ಕುರಿತು ಸಂಸ್ಥೆಯ ಸಿಬ್ಬಂದಿಗೆ ವಿಡಿಯೊ ಸಂದೇಶ ಕಳುಹಿಸಿರುವ ಅವರು, ಭಾನುವಾರದಂದು ಸಂಸ್ಥೆಯ 'ಆನ್ ಟೈಮ್ ಪರ್‌ಫಾರ್ಮನ್ಸ್' (ಒಟಿಪಿ) ಶೇ 75ರಷ್ಟಾಗುವ ನಿರೀಕ್ಷೆ ಹೊಂದಿದ್ದಾಗಿ ತಿಳಿಸಿದ್ದಾರೆ.

'ಯಾವುದೇ ವಿಮಾನಗಳ ಸಂಚಾರವನ್ನು ರದ್ದುಗೊಳಿಸುವ ಉದ್ದೇಶವಿದ್ದಲ್ಲಿ, ಈ ಕುರಿತು ಮುಂಚಿತವಾಗಿಯೇ ಮಾಹಿತಿ ನೀಡಲು ಕ್ರಮ ಕೈಗೊಳ್ಳಲಾಗಿದೆ. ಇದರಿಂದ, ಪ್ರಯಾಣಿಕರು ವಿಮಾನ ನಿಲ್ದಾಣಗಳಲ್ಲಿ ಜಮಾಯಿಸಿ, ಗದ್ದಲ ಉಂಟಾಗುವುದನ್ನು ತಪ್ಪಿಸಬಹುದಾಗಿದೆ' ಎಂದೂ ಹೇಳಿದ್ದಾರೆ.

138 ನಗರಗಳ ಪೈಕಿ 137 ನಗರಗಳಿಗೆ ಭಾನುವಾರ ವಿಮಾನಗಳು ಸಂಚರಿಸಿವೆ ಎಂದು ಇಂಡಿಗೊ ತಿಳಿಸಿದೆ.

ಶಬರಿಮಲೆ ದೇಗುಲದಲ್ಲಿ ಬೆಂಕಿ ಅವಘಡ

ಪತ್ತನಂತಿಟ್ಟ (ಪಿಟಿಐ): ಶಬರಿಮಲೆ ಅಯ್ಯಪ್ಪ ದೇವಸ್ಥಾನದ ಆವರಣದಲ್ಲಿ ಭಾನುವಾರ ಸಣ್ಣ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದ್ದು, ಭಕ್ತರಲ್ಲಿ ಆತಂಕ ಮೂಡಿಸಿತ್ತು. ಅಗ್ನಿಶಾಮಕ ಮತ್ತು ರಕ್ಷಣಾ ಸಿಬ್ಬಂದಿ ಬೆಂಕಿಯನ್ನು ತ್ವರಿತವಾಗಿ ನಂದಿಸಿದರು.

'ಸನ್ನಿಧಾನದಲ್ಲಿರುವ (ದೇವಾಲಯ ಸಂಕೀರ್ಣ) ಅಗ್ನಿಕುಂಡದ ಬಳಿಯ ಆಲದ ಮರದ ಮೇಲೆ ಅಳವಡಿಸಿದ್ದ ಎಲ್‌ಇಡಿ ಆಲಂಕಾರಿಕ ದೀಪಗಳಲ್ಲಿ ಶಾರ್ಟ್ ಸರ್ಕಿಟ್ ಉಂಟಾಗಿ ಬೆಳಿಗ್ಗೆ 8.20ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ. ಯಾವುದೇ ಹಾನಿ ಸಂಭವಿಸಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುನ್ನೆಚ್ಚರಿಕೆ ಕ್ರಮವಾಗಿ 18 ಪವಿತ್ರ ಮೆಟ್ಟಿಲುಗಳ ಪ್ರವೇಶವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು. ಪರಿಸ್ಥಿತಿ ನಿಯಂತ್ರಣಕ್ಕೆ ಬಂದ ಬಳಿಕ ಭಕ್ತರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಯಿತು.

ನೈಟ್‌ಕ್ಲಬ್‌ನಲ್ಲಿ ಬೆಂಕಿ, 25 ಮಂದಿ ಸಾವು

ಒಂದನೇ ಪುಟದಿಂದ...

ಘಟನೆಗೆ ಸಂಬಂಧಿಸಿ ನೈಟ್‌ಕ್ಲಬ್‌ನ ನಾಲ್ವರು ಸಿಬ್ಬಂದಿಯನ್ನು ಬಂಧಿಸಲಾಗಿದೆ. ಕ್ಲಬ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ರಾಜೀವ್ ಮೋದಕ್, ಪ್ರಧಾನ ವ್ಯವಸ್ಥಾಪಕ ವಿವೇಕ್ ಸಿಂಗ್, ಬಾರ್ ವ್ಯವಸ್ಥಾಪಕ ರಾಜೀವ್ ಸಿಂಘಾನಿಯಾ ಹಾಗೂ ಗೇಟ್ ವ್ಯವಸ್ಥಾಪಕ ರಿಯಾಂಶು ಠಾಕೂರ್ ಅವರನ್ನು ಬಂಧಿಸಲಾಗಿದೆ ಎಂದು ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದ್ದಾರೆ. ನೈಟ್‌ಕ್ಲಬ್ ಮಾಲೀಕರಾದ ಸೌರಭ್ ಲೂಥ್ರಾ ಹಾಗೂ ಗೌರವ್ ಲೂಥ್ರಾ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದು, ಅವರನ್ನು ಶೀಘ್ರವೇ ಬಂಧಿಸಲಾಗುವುದು' ಎಂದಿದ್ದಾರೆ. ಸಂತ್ರಸ್ತರ ಪೈಕಿ ಹೆಚ್ಚು ಮಂದಿ ಕ್ಲಬ್‌ನ ಮೊದಲ ಮಹಡಿಯಲ್ಲಿ ಸಿಕ್ಕಿಹಾಕಿಕೊಂಡಿದ್ದರು. ಈ ವೇಳೆ, ಉಸಿರುಗಟ್ಟಿ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಅರ್ಪೋರಾ ಗ್ರಾಮವು ಪಣಜಿಯಿಂದ 25 ಕಿ.ಮೀ. ದೂರದಲ್ಲಿದೆ.

ಸರಪಂಚ ವಶಕ್ಕೆ: ಈ ಕ್ಲಬ್‌ಗೆ 2013ರಲ್ಲಿ ಟ್ರೇಡ್ ಲೈಸೆನ್ಸ್ ನೀಡಿದ್ದ ಅರ್ಪೋರಾ–ನಗೋವಾ ಪಂಚಾಯಿತಿ ಸರಪಂಚ ರೋಷನ್ ರೆಡ್ಕರ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ತಪ್ಪಿತಸ್ಥರ ವಿರುದ್ಧ ಕ್ರಮ: 'ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿ, ನೈಟ್ ಕ್ಲಬ್ ನಡೆಸಲಾಗುತ್ತಿತ್ತು ಎನ್ನಲಾಗಿದೆ. ಇದಕ್ಕೆ ಅನುಮತಿ ನೀಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಎಲ್ಲ ಆರು ಜನ ಗಾಯಾಳುಗಳು ಚೇತರಿಸಿಕೊಳ್ಳುತ್ತಿದ್ದು, ಅವರಿಗೆ ಅತ್ಯುತ್ತಮ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದ್ದಾರೆ.

ಶೋಕ: ನೈಟ್‌ಕ್ಲಬ್‌ನಲ್ಲಿ ಅಗ್ನಿ ಅವಘಡದಿಂದಾಗಿ 25 ಮಂದಿ ಮೃತಪಟ್ಟ ಘಟನೆ ಕುರಿತು ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಶೋಕ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿ ಸಾವಂತ್ ಅವರೊಂದಿಗೆ ಮಾತನಾಡಿದ ಪ್ರಧಾನಿ ಮೋದಿ, ದುರ್ಘಟನೆ ಕುರಿತು ಮಾಹಿತಿ ಪಡೆದಿದ್ದಾರೆ. 'ಮೃತರ ಕುಟುಂಬಗಳಿಗೆ ನನ್ನ ಸಾಂತ್ವನಗಳು ಹಾಗೂ ಗಾಯಗೊಂಡವರು ಶೀಘ್ರವೇ ಗುಣಮುಖರಾಗಲಿ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಗೋವಾ ಚರ್ಚ್ ಕೂಡ ಈ ದುರ್ಘಟನೆ ಬಗ್ಗೆ ದಿಗ್ಭ್ರಮೆ ವ್ಯಕ್ತಪಡಿಸಿದ್ದು, ಜನರ ಸಾವಿಗೆ ಸಂತಾಪ ಸೂಚಿಸಿದೆ.

ಪರಿಹಾರ: ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ನೀಡಲಾಗುವುದು ಎಂದು ಪ್ರಧಾನಮಂತ್ರಿ ಕಚೇರಿಯು ಪ್ರತ್ಯೇಕ ಪ್ರಕಟಣೆಯಲ್ಲಿ ತಿಳಿಸಿದೆ. 'ಮೃತರ ಕುಟುಂಬಗಳಿಗೆ ತಲಾ ₹5 ಲಕ್ಷ ಹಾಗೂ ಗಾಯಾಳುಗಳಿಗೆ ತಲಾ ₹50 ಸಾವಿರ ಪರಿಹಾರವನ್ನು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ನಿಧಿಯಿಂದ ನೀಡಲಾಗುವುದು' ಎಂದು ಮುಖ್ಯಮಂತ್ರಿ ಸಾವಂತ್ ಘೋಷಿಸಿದ್ದಾರೆ. 'ಮೃತರ ದೇಹಗಳನ್ನು ಅವರ ಊರುಗಳಿಗೆ ತೆಗೆದುಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಲಾಗುವುದು' ಎಂದು ಹೇಳಿದ್ದಾರೆ

ದಿಢೀರ್ ಬೆಂಕಿ... ಗದ್ದಲ–ನೂಕಾಟ

'ಕ್ಲಬ್‌ನಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡಾಗ ಗದ್ದಲ, ನೂಕಾಟ–ಚೀರಾಟ ಶುರುವಾಯಿತು. ನಾವು ಹೇಗೋ ಪಾರಾಗಿ ಹೊರಗೆ ಬಂದು ನೋಡಿದಾಗ ಇಡೀ ಕಟ್ಟಡಕ್ಕೆ ಬೆಂಕಿ ಆವರಿಸಿಕೊಂಡಿತ್ತು...'

–'ಬರ್ಚ್ ಬೈ ರೋಮಿಯೊ ಲೇನ್' ನೈಟ್‌ಕ್ಲಬ್‌ನಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ಪಾರಾಗಿರುವ, ಹೈದರಾಬಾದ್ ಮೂಲದ ಪ್ರವಾಸಿ ಫಾತಿಮಾ ಶೇಖ್ ಹೇಳುವ ಮಾತಿದು. 'ವಾರಾಂತ್ಯವಾಗಿದ್ದ ಕಾರಣ ಕ್ಲಬ್ ಪ್ರವಾಸಿಗರಿಂದ ತುಂಬಿತ್ತು. ಕನಿಷ್ಠ 100 ಜನರು ಕ್ಲಬ್‌ನ ಮಹಡಿಯೊಂದರಲ್ಲಿ ನೃತ್ಯ ಮಾಡುತ್ತಿದ್ದರು. ಬೆಂಕಿ ಕಾಣಿಸಿಕೊಂಡಾಗ ಎಲ್ಲರೂ ಜೀವ ಉಳಿಸಿಕೊಳ್ಳಲು ಓಡಿದರು. ಕೆಲವರು ಕೆಳಮಹಡಿಯತ್ತ ಓಡಿ, ಅಲ್ಲಿದ್ದ ಅಡುಗೆ ಮನೆ ಸೇರಿದರು. ಅಲ್ಲಿಂದ ಹೊರಬರಲಾಗದೇ, ಸಿಕ್ಕಿಹಾಕಿಕೊಂಡರು' ಎಂದು ಆ ಭೀಕರ ಕ್ಷಣಗಳನ್ನು ಫಾತಿಮಾ ನೆನಪಿಸಿಕೊಂಡರು.

'ತಾತ್ಕಾಲಿಕ ಕಟ್ಟಡದಲ್ಲಿ ಕ್ಲಬ್‌ನ ಚಟುವಟಿಕೆಗಳು ನಡೆಯುತ್ತಿದ್ದವು. ಅಲ್ಲಿ ತಾಳೆ ಮರದ ಗರಿಗಳನ್ನು ಬಳಸಿ ನಿರ್ಮಾಣ ಮಾಡಿದ್ದರಿಂದ, ಆ ಕಟ್ಟಡ ಸುಲಭವಾಗಿ ಬೆಂಕಿಗೆ ಆಹುತಿಯಾಯಿತು' ಎಂದೂ ವಿವರಿಸಿದರು.

'ಕ್ಲಬ್ ನೆಲಸಮಕ್ಕೆ ನೋಟಿಸ್ ನೀಡಲಾಗಿತ್ತು'

'ನಿಯಮ ಉಲ್ಲಂಘಿಸಿದ್ದ ಕಾರಣಕ್ಕೆ ನೈಟ್‌ಕ್ಲಬ್ ಅನ್ನು ನೆಲಸಮಗೊಳಿಸುವಂತೆ ಪಂಚಾಯಿತಿಯಿಂದ ನೋಟಿಸ್ ನೀಡಲಾಗಿತ್ತು. ಆದರೆ, ಅದನ್ನು ನೆಲಸಮಗೊಳಿಸದಂತೆ ಪಂಚಾಯಿತಿಗಳ ನಿರ್ದೇಶನಾಲಯ ಅಧಿಕಾರಿಗಳು ತಡೆ ನೀಡಿದ್ದರು' ಎಂದು ಅರ್ಪೋರಾ–ನಗೋವಾ ಪಂಚಾಯಿತಿ ಸರಪಂಚ ರೋಷನ್ ರೆಡ್ಕರ್ ಹೇಳಿದ್ದಾರೆ.

'ಸೌರವ್ ಲೂಥ್ರಾ ಎಂಬವರು ಈ ಕ್ಲಬ್ ನಡೆಸುತ್ತಿದ್ದಾರೆ. ಸೌರವ್ ಹಾಗೂ ಪಾಲುದಾರನ ಮಧ್ಯೆ ವಿವಾದ ಉಂಟಾಗಿತ್ತು. ಈ ಕಾರಣಕ್ಕೆ ಅವರು ಪರಸ್ಪರರ ವಿರುದ್ಧ ಪಂಚಾಯಿತಿಯಲ್ಲಿ ದೂರು ದಾಖಲಿಸಿದ್ದರು. ಹೀಗಾಗಿ, ನಾವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ, ಕ್ಲಬ್ ನಿರ್ಮಾಣಕ್ಕೆ ಅನುಮತಿಯನ್ನೇ ಪಡೆದಿರಲಿಲ್ಲ ಎಂಬುದು ಗೊತ್ತಾಗಿ, ಅದನ್ನು ನೆಲಸಮಗೊಳಿಸುವುದಕ್ಕೆ ಸೂಚಿಸಲಾಗಿತ್ತು' ಎಂದು ರೆಡ್ಕರ್ ಹೇಳಿದ್ದಾರೆ.

> ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಬರುವ ದಿನಗಳಿವು. ಅಗ್ನಿ ದುರಂತ ಘಟಿಸಿರುವುದು ದುರದೃಷ್ಟಕರ. ಘಟನೆ ಕುರಿತು ಮ್ಯಾಜಿಸ್ಟ್ರೇಟ್ ಅವರಿಂದ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು
> **ಪ್ರಮೋದ್ ಸಾವಂತ್,** ಗೋವಾ ಮುಖ್ಯಮಂತ್ರಿ

> ಆಡಳಿತ ಮತ್ತು ಸುರಕ್ಷತೆ ವಿಚಾರದಲ್ಲಿ ಕ್ರಿಮಿನಲ್ ವೈಫಲ್ಯವಾಗಿದೆ. ಪಾರದರ್ಶಕ ಮತ್ತು ಸಮಗ್ರ ತನಿಖೆ ನಡೆಸಬೇಕು. ಭವಿಷ್ಯದಲ್ಲಿ ಇಂತಹ ದುರಂತಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು
> **ರಾಹುಲ್ ಗಾಂಧಿ,** ಲೋಕಸಭೆಯಲ್ಲಿ ವಿಪಕ್ಷ ನಾಯಕ

> ಗೋವಾದಲ್ಲಿ ಸಂಭವಿಸಿದ ದುರ್ಘಟನೆ ತಪ್ಪಿಸಬಹುದಾಗಿತ್ತು. ತುಂಬಲಾರದ ನಷ್ಟವಾಗಿದ್ದು, ಘಟನೆಯ ಕುರಿತು ಸರ್ಕಾರ ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಉತ್ತರದಾಯಿತ್ವ ನಿಗದಿ ಮಾಡಬೇಕು
> **ಮಲ್ಲಿಕಾರ್ಜುನ ಖರ್ಗೆ,** ರಾಜ್ಯಸಭೆಯಲ್ಲಿ ವಿಪಕ್ಷ ನಾಯಕ

ಸಾಧು–ಸಂತರು ಸೇರಿದಂತೆ 5 ಲಕ್ಷ ಜನರು ಕಾರ್ಯಕ್ರಮದಲ್ಲಿ ಭಾಗಿ

ಕೋಲ್ಕತ್ತ: ಬೃಹತ್ 'ಭಗವದ್ಗೀತೆ ಪಠಣ'

ಕೋಲ್ಕತ್ತ (ಪಿಟಿಐ): ಇಲ್ಲಿನ ಪರೇಡ್ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ಭಗವದ್ಗೀತೆಯ ಬೃಹತ್ ಪಠಣ ಕಾರ್ಯಕ್ರಮದಲ್ಲಿ ಲಕ್ಷಾಂತರ ಭಕ್ತರು ಪಾಲ್ಗೊಂಡಿದ್ದರು.

ಎಲ್ಲೆಡೆಯೂ ಶಂಖನಾದದ ನಡುವೆ ಕೃಷ್ಣ ನಾಮಸ್ಮರಣೆ ಕೇಳಿ ಬರುತ್ತಿತ್ತು. ಸಾಧು–ಸಂತಗಣವೇ ಹರಿದುಬಂದಿತ್ತು. ಪಶ್ಚಿಮ ಬಂಗಾಳ ಮಾತ್ರವಲ್ಲದೆ ಅಕ್ಕಪಕ್ಕದ ರಾಜ್ಯಗಳಿಂದ ಲಕ್ಷಾಂತರ ಭಕ್ತರು ಆಗಮಿಸಿದ್ದರು.

ಸನಾತನ ಸಂಸ್ಕೃತಿ ಸಂಸದ್ ಹಮ್ಮಿಕೊಂಡಿದ್ದ 'ಐದು ಲಕ್ಷ ಧ್ವನಿಗಳಲ್ಲಿ ಗೀತ ಪಠಣ' ಕಾರ್ಯಕ್ರಮದ ನೇತೃತ್ವವನ್ನು ಗೀತಾ ಮನಿಶಿ ಮಹಾಮಂಡಲದ ಜ್ಞಾನಾನಂದ ಮಹಾರಾಜ್ ನೇತೃತ್ವ ವಹಿಸಿದ್ದರು. ವಿವಿಧ ಮಠಗಳ ಸ್ವಾಮೀಜಿಗಳು, ಹಿಂದೂ ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರು, ಆಧ್ಯಾತ್ಮಿಕ ಮುಖಂಡರು ಭಗವದ್ಗೀತೆಯ ಪ್ರತಿಗಳನ್ನು ಹಿಡಿದು ಶ್ಲೋಕಗಳನ್ನು ಪಠಿಸಿದರು.



ಕೋಲ್ಕತ್ತದಲ್ಲಿ ಭಾನುವಾರ ನಡೆದ ಭಗವದ್ಗೀತೆ ಪಠಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ — ಪಿಟಿಐ ಚಿತ್ರ

'ಆಡಳಿತದ ಅಸಹಕಾರ ನಡುವೆಯೂ ಸುಮಾರು ಐದು ಲಕ್ಷ ಜನರು ಪ್ರೀತಿ ಮತ್ತು ಭಕ್ತಿಯಿಂದ ಒಂದೆಡೆ ಸೇರಿ ಭಗವದ್ಗೀತೆಯನ್ನು ಪಠಿಸಿ ಸನಾತನ ಧರ್ಮವನ್ನು ರಕ್ಷಿಸುವ ಮಹತ್ಕಾರ್ಯ ಮಾಡಿದ್ದಾರೆ.

ಭಗವದ್ಗೀತೆ ಹಿಂದೂಗಳಿಗೆ ಮಾತ್ರ ಸೀಮಿತವಲ್ಲ. 140 ಕೋಟಿ ಭಾರತೀಯರದ್ದು' ಎಂದು ಪ್ರದೀಪ್ತಾನಂದ ಸ್ವಾಮೀಜಿ ಅವರು ಹೇಳಿದರು.

2023ರ ಲೋಕಸಭೆ ಚುನಾವಣೆಗೂ ಮುನ್ನ ಇದೇ ರೀತಿ ಒಂದು ಲಕ್ಷ ಜನರಿಂದ ಭಗವದ್ಗೀತೆ ಪಠಣ' ನಡೆದಿತ್ತು.

ಜರ್ಮನಿಗೆ ಮಣಿದ ಭಾರತ ತಂಡ

ಸೆಮಿಫೈನಲ್‌ನಲ್ಲಿ 5–1 ಸುಲಭ ಜಯ
• ಪ್ರಶಸ್ತಿ ಸುತ್ತಿನಲ್ಲಿ ಸ್ಪೇನ್ ಎದುರಾಳಿ



ಗೋಲೊಂದನ್ನು ಗಳಿಸಿದ ನಂತರ ಜರ್ಮನಿ ಆಟಗಾರರ ಸಂಭ್ರಮ... ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಹಾಲಿ ಚಾಂಪಿಯನ್, ಬಲಿಷ್ಠ ಜರ್ಮನಿ ತಂಡ ಭಾನುವಾರ 5–1 ಗೋಲುಗಳಿಂದ ಭಾರತ ತಂಡವನ್ನು ಸುಲಭವಾಗಿ ಸೋಲಿಸಿ ಐಎಚ್‌ಎಫ್ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯ ಫೈನಲ್ ಪ್ರವೇಶಿಸಿತು. ಇದರೊಂದಿಗೆ 9 ವರ್ಷಗಳ ನಂತರ ತವರಿನಲ್ಲಿ ಪ್ರಶಸ್ತಿಯನ್ನು ಮರಳಿ ಪಡೆಯುವ ಆತಿಥೇಯ ತಂಡದ ಕನಸು ನುಚ್ಚುನೂರಾಯಿತು.

ಏಳು ಬಾರಿಯ ಚಾಂಪಿಯನ್ ಆಗಿರುವ ಜರ್ಮನಿ ಇದೇ 10ರಂದು (ಬುಧವಾರ) ನಡೆಯುವ ಫೈನಲ್‌ನಲ್ಲಿ ಸ್ಪೇನ್ ತಂಡವನ್ನು ಎದುರಿಸಲಿದೆ. ಸ್ಪೇನ್ ತಂಡವು ತೀವ್ರ ಹೋರಾಟ ಕಂಡ ಮೊದಲ ಸೆಮಿಫೈನಲ್‌ನಲ್ಲಿ ಎರಡು ಬಾರಿಯ ಚಾಂಪಿಯನ್ ಅರ್ಜೆಂಟೀನಾ ತಂಡವನ್ನು 2–1 ಗೋಲುಗಳಿಂದ ಸೋಲಿಸಿತು. ಸ್ಪೇನ್ ಇದೇ ಮೊದಲ ಬಾರಿಗೆ ಜೂನಿಯರ್ ವಿಶ್ವಕಪ್ ಫೈನಲ್ ಪ್ರವೇಶಿಸಿದೆ.

ಜರ್ಮನಿ ತಂಡದ ಪರ ಲುಕಾಸ್ ಕೊಸೆಲ್ (14 ಮತ್ತು 30ನೇ ನಿಮಿಷ), ಟೈಟಸ್ ವೆಕ್ಸ್ (15ನೇ ನಿಮಿಷ), ಯೋನಾಸ್ ವಾನ್ ಗೆರ್ಸುಮ್ (40ನೇ ನಿಮಿಷ) ಮತ್ತು ಬೆನ್ ಹಾಸ್‌ಬ್ಯಾಚ್ (49ನೇ ನಿಮಿಷ) ಗೋಲುಗಳನ್ನು ಗಳಿಸಿದರು.

ಭಾರತ ತಂಡವು ಕೊನೆಯ ಕ್ವಾರ್ಟರ್‌ನಲ್ಲಿ (51ನೇ ನಿ.) ಅನ್ಮೋಲ್ ಎಕ್ಕಾ ಪೆನಾಲ್ಟಿ ಕಾರ್ನರ್‌ನಲ್ಲಿ ಗಳಿಸಿದ ಗೋಲಿನಿಂದ ಸೋಲಿನ ಅಂತರ ಕಡಿಮೆ ಮಾಡುವಷ್ಟಕ್ಕೇ ತೃಪ್ತಿಪಡಬೇಕಾಯಿತು.

2016ರಲ್ಲಿ ಲಖನೌದಲ್ಲಿ ನಡೆದ ಕೂಟದಲ್ಲಿ ಭಾರತ ಕೊನೆಯ ಬಾರಿ ಚಾಂಪಿಯನ್ ಆಗಿತ್ತು. ಈಗ ಆತಿಥೇಯರು ಬುಧವಾರ ಕಂಚಿನ ಪದಕಕ್ಕಾಗಿ ನಡೆಯುವ ಸೆಣಸಾಟದಲ್ಲಿ ಅರ್ಜೆಂಟೀನಾ ತಂಡವನ್ನು ಎದುರಿಸಲಿದ್ದಾರೆ.

ಭಾರತ ಸಕಾರಾತ್ಮಕವಾಗಿ ಆಟ ಆರಂಭಿಸಿತು. ಆದರೆ ಕೆಲವೇ ನಿಮಿಷಗಳಲ್ಲಿ ಲಯಕಂಡುಕೊಂಡ ಜರ್ಮನಿ ಆಟದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿತು. ಹೀಗಾಗಿ ಜರ್ಮನಿ ತಂಡಕ್ಕೇ ಹೆಚ್ಚಿನ ಅವಕಾಶಗಳು ಒಲಿದವು. 13ನೇ ನಿಮಿಷ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲಿನತ್ತ ಹೊಡೆದ ಚೆಂಡು ಭಾರತದ ರಕ್ಷಣೆ ಆಟಗಾರನಿಗೆ ತಾಗಿತು. ಹೀಗಾಗಿ ದೊರೆತ 'ಸ್ಟ್ರೋಕ್' ಅವಕಾಶವನ್ನು ಲುಕಾಸ್ ಕೊಸೆಲ್ ಗೋಲಾಗಿ ಪರಿವರ್ತಿಸಿದರು.

ಈ ಮುನ್ನಡೆಯಿಂದ ವಿಶ್ವಾಸ ಪಡೆದ ಜರ್ಮನಿ, ಭಾರತ ತಂಡದ ಮೇಲೆ ನಿರಂತರ ಒತ್ತಡ ಹೇರಿತು. ಮೊದಲ ಕ್ವಾರ್ಟರ್ ಇನ್ನೇನು ಮುಗಿಯಿತು ಎನ್ನುವಷ್ಟರಲ್ಲಿ ಜರ್ಮನಿ ಮುನ್ನಡೆ ಹೆಚ್ಚಿಸಿತು. ವಿರಾಮದ ವೇಳೆ ತಂಡ 3–0 ಮುನ್ನಡೆ ಸಂಪಾದಿಸಿತ್ತು.

ಮೊದಲ ಬಾರಿ ಫೈನಲ್‌ಗೆ ಸ್ಪೇನ್

ಮೊದಲ ಸೆಮಿಫೈನಲ್‌ನಲ್ಲಿ ಸ್ಪೇನ್ ತಂಡದ ಪರ ಮಾರಿಯೊ ಮೆನಾ (7ನೇ ನಿ.), ಆಲ್ಬರ್ಟ್ ಸೆರ್ರಾಹಿಮಾ (56ನೇ ನಿ.) ಅವರು ಗೋಲು ಗಳಿಸಿದರೆ, ಜುವಾನ್ ಫರ್ನಾಂಡಿಸ್ (21ನೇ ನಿ.) ಅವರು ಅರ್ಜೆಂಟೀನಾ ತಂಡಕ್ಕೆ ಏಕೈಕ ಗೋಲನ್ನು ತಂದಿತ್ತರು. ಬೆಲ್ಜಿಯಂ ತಂಡ 3–2 ಗೋಲುಗಳಿಂದ ಫ್ರಾನ್ಸ್ ತಂಡವನ್ನು ಸೋಲಿಸಿ ಐದು–ಆರನೇ ಸ್ಥಾನಕ್ಕೆ ನಡೆಯುವ ಕ್ಲಾಸಿಫಿಕೇಷನ್ ಪಂದ್ಯದಲ್ಲಿ ಆಡುವ ಅರ್ಹತೆ ಪಡೆಯಿತು. ನ್ಯೂಜಿಲೆಂಡ್ ತಂಡ 7–8ನೇ ಸ್ಥಾನಕ್ಕೆ ನಡೆಯುವ ಪಂದ್ಯದಲ್ಲಿ ಫ್ರಾನ್ಸ್ ತಂಡವನ್ನು ಎದುರಿಸಲಿದೆ.

ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗಂಭೀರ್
'ರೋ–ಕೊ ಅನುಭವ ಮಹತ್ವದ್ದು'



ಅರ್ಷದೀಪ್ ಸಿಂಗ್ ಮತ್ತು ವಿರಾಟ್ ಕೊಹ್ಲಿ

ವಿಶಾಖಪಟ್ಟಣಂ (ಪಿಟಿಐ): ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ಅನುಭವ ನಮ್ಮ ಬಳಗಕ್ಕೆ ಮಹತ್ವದ್ದು. ಅವರು ವಿಶ್ವದರ್ಜೆ ಆಟಗಾರರಾಗಿದ್ದಾರೆ. ಬಹಳ ಸಮಯದಿಂದ ಅವರು ಉಪಯುಕ್ತ ಕಾಣಿಕೆ ನೀಡಿ ತಂಡವನ್ನು ಗೆಲ್ಲಿಸಿದ್ದಾರೆ. ಭವಿಷ್ಯದಲ್ಲಿಯೂ ಅವರ ಶ್ರೇಷ್ಠ ಆಟ ಮುಂದುವರಿಯುವ ನಿರೀಕ್ಷೆ ಇದೆ ಎಂದು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಹೇಳಿದ್ದಾರೆ.

ದಕ್ಷಿಣ ಆಫ್ರಿಕಾ ಎದುರು ಭಾರತ ತಂಡವು ಶನಿವಾರ 2–1ರಿಂದ ಸರಣಿ ಜಯಿಸಿದ ನಂತರ ಗಂಭೀರ್ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಫಿಫ್ಟಿ–50 ಮಾದರಿ ಕ್ರಿಕೆಟ್‌ನಲ್ಲಿ ರೋಹಿತ್ ಮತ್ತು ಕೊಹ್ಲಿ ಅವರ ಆಟವು ಮಹತ್ವದ್ದಾಗಿದೆ. ಅವರಿಬ್ಬರೂ ಈ ಮಾದರಿಯ ಅತ್ಯಂತ ಅನುಭವಿ ಮತ್ತು ಯಶಸ್ವಿ ಆಟಗಾರರು' ಎಂದು ಶ್ಲಾಘಿಸಿದರು.

ವೇಗಿಗಳಾದ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರ ಗೈರು, ಬ್ಯಾಟರ್ ಶುಭಮನ್ ಗಿಲ್ ಮತ್ತು ಹಾರ್ದಿಕ್ ಪಾಂಡ್ಯ ಅವರು ಗಾಯದಿಂದ ವಿಶ್ರಾಂತಿಯಲ್ಲಿದ್ದ ಕಾರಣ ಉದಯೋನ್ಮುಖ ಆಟಗಾರರಿಗೆ ಅವಕಾಶ ನೀಡಲಾಯಿತು. ಅದರಲ್ಲಿ ಹರ್ಷಿತ್ ರಾಣಾ ಕೂಡ ಒಬ್ಬರು.

'ಹರ್ಷಿತ್ ಅವರಿಗೆ ಅವಕಾಶ ನೀಡುತ್ತಿರುವುದರ ಹಿಂದೆ ಮುಖ್ಯ ಕಾರಣವೆಂದರೆ ಎಂಟನೇ ಕ್ರಮಾಂಕದಲಲ್ಲಿ ಬ್ಯಾಟರ್ ಒಬ್ಬರನ್ನು ಬೆಳೆಸುವುದಾಗಿದೆ. ಏಕೆಂದರೆ ಇನ್ನೆರಡು ವರ್ಷಗಳ ನಂತರ ನಾವು ದಕ್ಷಿಣ ಆಫ್ರಿಕಾದಲ್ಲಿ (2027ರ ಏಕದಿನ ವಿಶ್ವಕಪ್) ಆಡಬೇಕಿದೆ' ಎಂದು ಗಂಭೀರ್ ಹೇಳಿದರು.

'ಈ ಸರಣಿಯಲ್ಲಿ ಅರ್ಷದೀಪ್, ಪ್ರಸಿದ್ಧ ಮತ್ತು ಹರ್ಷಿತ್ ಅವರು ಅಮೋಘವಾಗಿ ಆಡಿದ್ದಾರೆ. ಈ ಮೂವರಿಗೂ ಹೆಚ್ಚು ಅನುಭವ ಇಲ್ಲ. ಆದರೆ ಒತ್ತಡವನ್ನು ನಿಭಾಯಿಸಿ ಉತ್ತಮವಾಗಿ ಆಡಿದ್ದಾರೆ' ಎಂದು ಗಂಭೀರ್ ಶ್ಲಾಘಿಸಿದರು.

ಕೆಎಸ್‌ಸಿಎಗೆ ವೆಂಕಟೇಶ್ ಪ್ರಸಾದ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ



ಬೆಂಗಳೂರಿನಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ವೆಂಕಟೇಶ್ ಪ್ರಸಾದ್ (ಮಧ್ಯದಲ್ಲಿ), ಸಂತೋಷ್ ಮೆನನ್ (ಕಾರ್ಯದರ್ಶಿ), ವಿನಯ್ ಮೃತ್ಯುಂಜಯ ಮತ್ತು ಸುಜಿತ್ ಸೋಮಸುಂದರ್ (ಉಪಾಧ್ಯಕ್ಷ) ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಭಾರತ ತಂಡದ ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಆಯ್ಕೆಯಾದರು.

ಭಾನುವಾರ ನಡೆದ ಚುನಾವಣೆಯಲ್ಲಿ ಒಟ್ಟು 1307 ಮತಗಳು ಚಲಾವಣೆ ಆದವು. ಐವರು ಪದಾಧಿಕಾರಿಗಳು ಮತ್ತು ಆಡಳಿತ ಸಮಿತಿಯ 11 ಸದಸ್ಯರ ಆಯ್ಕೆ ನಡೆಯಿತು.

ಟೀಮ್ ಗೇಮ್ ಚೇಂಜರ್ಸ್ ಬಣದ ವೆಂಕಟೇಶ್ ಪ್ರಸಾದ್ ಅವರು 749 ಹಾಗೂ ಅವರ ಪ್ರತಿಸ್ಪರ್ಧಿ ಟೀಮ್ ಬ್ರಿಜೇಶ್ ಬಣದಿಂದ ಕಣಕ್ಕಿಳಿದಿದ್ದ ಕೆ.ಎನ್. ಶಾಂತಕುಮಾರ್ ಅವರು 558 ಮತಗಳಿಸಿದರು.

ಪ್ರಸಾದ್ ಬಣದಿಂದ ಉಪಾಧ್ಯಕ್ಷ ಸ್ಥಾನಕ್ಕೆ ಮಾಜಿ ಕ್ರಿಕೆಟಿಗ ಸುಜಿತ್ ಸೋಮಸುಂದರ್ (719) ಅವರು ವಿನೋದ್ ಶಿವಪ್ಪ (588) ಎದುರು ಮೇಲುಗೈ ಸಾಧಿಸಿದರು. ಕಾರ್ಯದರ್ಶಿ ಸ್ಥಾನಕ್ಕೆ ಸಂತೋಷ್ ಮೆನನ್ (675) ಅವರು ಇ.ಎಸ್. ಜಯರಾಮ್ (632) ವಿರುದ್ಧ ಗೆದ್ದರು. ಬಿ.ಎನ್. ಮಧುಕರ್ (736) ಅವರು ಎಂ.ಎಸ್. ವಿನಯ್ (571) ಎದುರು ಜಯಿಸಿ, ಖಜಾಂಚಿ ಸ್ಥಾನ ಪಡೆದರು.

ಬ್ರಿಜೇಶ್ ಬಣದಿಂದ ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಬಿ.ಕೆ. ರವಿ (669) ಅವರು ಎ.ವಿ. ಶಶಿಧರ್ (638) ಎದುರು ಜಯಿಸಿದರು. ಆಡಳಿತ ಸಮಿತಿಯಲ್ಲಿಯೂ ಬ್ರಿಜೇಶ್ ಬಣದ ವೀರಣ್ಣ ಸವಡಿ (ಧಾರವಾಡ ವಲಯ), ಡಿ.ಎಸ್. ಅರುಣ್ (ಶಿವಮೊಗ್ಗ), ಕುಶಾಲ್ ಪಾಟೀಲ ಗಡಗಿ (ರಾಯಚೂರು) ಚುನಾಯಿತರಾದರು. ಮಂಗಳೂರು ವಲಯದ ಶೇಖರ್ ಶೆಟ್ಟಿ ಅವಿರೋಧ ಆಯ್ಕೆಯಾದರು.

ಉಳಿದಂತೆ ಪ್ರಸಾದ್ ತಂಡದಿಂದ ವಿ.ಎಂ. ಮಂಜುನಾಥ್, ಶೈಲೇಶ್ ಪೋಳ್ (ಇಬ್ಬರೂ ಆಜೀವ ಸದಸ್ಯರ ವಿಭಾಗ), ಕಲ್ಪನಾ ವೆಂಕಟಾಚಾರ್, ಆಶಿಶ್ ಅಮರಲಾಲ್, ಅವಿನಾಶ್ ವೈದ್ಯ (ಬೆಂಗಳೂರು ವಲಯ), ಶ್ರೀನಿವಾಸ್ ಪ್ರಸಾದ್ (ಮೈಸೂರು) ಹಾಗೂ ಸಿ.ಆರ್. ಹರೀಶ್ (ತುಮಕೂರು) ಆಯ್ಕೆಯಾದರು.

'ಸಂಸ್ಥೆಯ ಸದಸ್ಯರು ನಮಗೆ ಅವಕಾಶ ಕೊಟ್ಟಿದ್ದಾರೆ. ಇದು ಕ್ರಿಕೆಟ್‌ಗೆ ಒಲಿದ ಗೆಲುವು. ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಮಾಡಿರುವ ವಾಗ್ದಾನಗಳನ್ನು ಈಡೇರಿಸಲು ಬದ್ಧರಾಗಿದ್ದೇವೆ' ಎಂದು ಫಲಿತಾಂಶ ಪ್ರಕಟವಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವೆಂಕಟೇಶ್ ಪ್ರಸಾದ್ ಹೇಳಿದರು.

ಖ್ಯಾತನಾಮರಿಂದ ಮತದಾನ: ಭಾನುವಾರ ಮಧ್ಯಾಹ್ನ ಚುರುಕು ಬಿಸಿಲು ಇತ್ತು. ಇದೇ ಅವಧಿಯಲ್ಲಿ ಮತದಾನವೂ ಚುರುಕಾಯಿತು. ನಾಡಿನ ದಿಗ್ಗಜ ಕ್ರಿಕೆಟಿಗರಾದ ಜಿ.ಆರ್. ವಿಶ್ವನಾಥ್, ಬಿ.ಎಸ್. ಚಂದ್ರಶೇಖರ್, ರೋಜರ್ ಬಿನ್ನಿ, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್ ಸೇರಿ ಹಲವರು ಮತ ಚಲಾಯಿಸಿದರು.

ಟೆನಿಸ್: ದಿಗ್ವಿಜಯ್ ಪ್ರತಾಪ್‌ಗೆ ಕಿರೀಟ

ಬೆಂಗಳೂರು: ಭಾರತದ ದಿಗ್ವಿಜಯ್ ಪ್ರತಾಪ್ ಸಿಂಗ್ ಅವರು ಗ್ವಾಲಿಯರ್ ಚಂಬಲ್ ಟೆನಿಸ್ ಅಸೋಸಿಯೇಷನ್ ಕೋರ್ಟ್‌ನಲ್ಲಿ ನಡೆದ ರೌಂಡ್‌ಗ್ಲಾಸ್ ಐಟಿಎಫ್ ಪುರುಷರ ವಿಶ್ವ ಟೆನಿಸ್ ಟೂರ್ ಎಂ15 ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

ಮೊದಲ ಸೆಟ್ ಅನ್ನು 6–2ರಿಂದ ಗೆದ್ದಿದ್ದ ದಿಗ್ವಿಜಯ್, ಎರಡನೇ ಸೆಟ್‌ನಲ್ಲಿ 4–0 ಮುನ್ನಡೆಯಲ್ಲಿದ್ದಾಗ ಎದುರಾಳಿ ಆಟಗಾರ ಮಾನ್ ಕೇಶರ್ವಾನಿ ಸ್ಪರ್ಧೆಯಿಂದ ಹಿಂದೆ ಸರಿದರು.

ದಿಗ್ವಿಜಯ್ ಅವರು ಸೆಮಿಫೈನಲ್‌ನಲ್ಲಿ 4-6, 6-3, 7-6ರಿಂದ ಅಗ್ರಶ್ರೇಯಾಂಕದ ಆರ್ಯನ್ ಶಾ ಅವರಿಗೆ ಆಘಾತ ನೀಡಿದ್ದರು. ಕ್ವಾರ್ಟರ್ ಫೈನಲ್‌ನಲ್ಲಿ 7-6, 6-2 ಸೆಟ್‌ಗಳಿಂದ ನಾಲ್ಕನೇ ಶ್ರೇಯಾಂಕದ ಕಜಾಕಸ್ತಾನದ ಗ್ರಿಗೊರಿ ಲೊಮಾಕಿನ್ ಅವರನ್ನು ಸೋಲಿಸಿದ್ದರು.

ಕಳೆದ ತಿಂಗಳು ಭೋಪಾಲ್‌ನಲ್ಲಿ ನಡೆದ ಎಂ25 ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ ಗ್ವಾಲಿಯರ್‌ನ ದಿಗ್ವಿಜಯ್ ಅವರಿಗೆ ಇದು ಎರಡನೇ ಪ್ರಶಸ್ತಿಯಾಗಿದೆ. ಅವರು ಭುವನೇಶ್ವರದಲ್ಲಿ ನಡೆದ ಎಂ15 ಟೂರ್ನಿಯಲ್ಲಿ ಫೈನಲ್‌ಗೆ ತಲುಪಿದ್ದರು. ಪ್ರಶಸ್ತಿ ಸುತ್ತಿನಲ್ಲಿ ಎಸ್.ಡಿ. ಪ್ರಜ್ವಲ್ ದೇವ್ ವಿರುದ್ಧ ಸೋತಿದ್ದರು.

ಹಾಕಿ: ನೈಋತ್ಯ ರೈಲ್ವೆ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಋತ್ಯ ರೈಲ್ವೆ– ಹುಬ್ಬಳ್ಳಿ ತಂಡವು 'ಹಾಕಿ ಕರ್ನಾಟಕ' ಆಯೋಜಿಸಿರುವ ನಾಮಧಾರಿ ಕಪ್ ಟೂರ್ನಿಯ ಪಂದ್ಯದಲ್ಲಿ ಭಾನುವಾರ 7–2ರಿಂದ ಬಳ್ಳಾರಿ ತಂಡವನ್ನು ಸುಲಭವಾಗಿ ಮಣಿಸಿತು.

ನೈಋತ್ಯ ರೈಲ್ವೆ ತಂಡದ ಚೇತನ್ ಎಂ.ಕೆ. (1ನೇ ನಿ. ಹಾಗೂ 59ನೇ ನಿ.) ಹಾಗೂ ಪವನ್ ಮಡಿವಾಳರ್ (40ನೇ ನಿ. ಹಾಗೂ 50ನೇ ನಿ.) ತಲಾ ಎರಡು ಗೋಲು ಹೊಡೆದರೆ, ಪುನೀತ್ ಆರ್. (36ನೇ ನಿ.), ಕುಮಾರ್ ಎನ್. (52ನೇ ನಿ.) ಮತ್ತು ಜಯವಂತ್ ಪಿ. (56ನೇ ನಿ.) ಅವರು ತಲಾ ಒಮ್ಮೆ ಚೆಂಡನ್ನು ಗೋಲು ಪೆಟ್ಟಿಗೆಗೆ ಸೇರಿಸಿದರು. ಬಳ್ಳಾರಿ ತಂಡದ ಅರ್ಜುನ್ ಹಾಲಪ್ಪ (44ನೇ ನಿ.) ಹಾಗೂ ವಿಕ್ರಂ ಕಾಂತ್ (50ನೇ ನಿ.) ತಲಾ ಒಂದು ಗೋಲು ಹೊಡೆದರು.

ವಿಶ್ವಕಪ್ ಶೂಟಿಂಗ್ 50 ಮೀ. ರೈಫಲ್ ತ್ರೀ ಪೊಸಿಷನ್: ಐಶ್ವರಿ ಪ್ರಸಾದ್‌ಗೆ ಬೆಳ್ಳಿ
ಸಿಮ್ರನ್‌ಪ್ರೀತ್ ಕೌರ್‌ಗೆ ಪಿಸ್ತೂಲ್ ಚಿನ್ನ





ಸಿಮ್ರನ್‌ಪ್ರೀತ್ ಕೌರ್ ಬ್ರಾರ್(ಎಡ) ಹಾಗೂ ಐಶ್ವರಿ ಪ್ರಸಾದ್ ಸಿಂಗ್ ತೋಮಾರ್ ಪಿಟಿಐ ಸಂಗ್ರಹ ಚಿತ್ರ

ದೋಹಾ (ಪಿಟಿಐ): ಯುವ ಪ್ರತಿಭೆ ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಅವರು ಐಎಸ್‌ಎಸ್‌ಎಫ್ ವಿಶ್ವಕಪ್ ಟೂರ್ನಿಯ ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಭಾನುವಾರ ಪ್ರಬಲ ಕಣದ ಸವಾಲನ್ನು ಎದುರಿಸಿ ಚಿನ್ನದ ಪದಕ ಗೆದ್ದುಕೊಂಡರು. ಪುರುಷರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಐಶ್ವರಿ ಪ್ರಸಾದ್ ಸಿಂಗ್ ತೋಮಾರ್ ಅವರು ಪದಾರ್ಪಣೆಯಲ್ಲೇ ಬೆಳ್ಳಿ ಪದಕ ಕೊರಳಿಗೇರಿಸಿಕೊಂಡರು.

21 ವರ್ಷ ವಯಸ್ಸಿನ ಸಿಮ್ರನ್‌ಪ್ರೀತ್ ಅವರು ಫೈನಲ್‌ನಲ್ಲಿ ಅಮೋಘ 41 ಸ್ಕೋರ್ ಶೂಟ್ ಮಾಡಿ ತಮ್ಮ ವೃತ್ತಿ ಬದುಕಿನ ಅತಿ ದೊಡ್ಡ ಸಾಧನೆ ದಾಖಲಿಸಿದರು. ಆ ಹಾದಿಯಲ್ಲಿ, ಒಲಿಂಪಿಕ್ ಚಾಂಪಿಯನ್, ಕೊರಿಯಾದ ಯಾಂಗ್ ಜಿ ಇನ್ ಹೆಸರಿನಲ್ಲಿದ್ದ ವಿಶ್ವ ಜೂನಿಯರ್ ದಾಖಲೆ ಸರಿಗಟ್ಟಿ ಪೋಷಕರಿಗೆ ಹೆಮ್ಮೆ ಮೂಡಿಸಿದರು. ಸಿಮ್ರನ್ ಅವರಿಗೆ ಬೆಂಬಲ ನೀಡಲು ತಂದೆ ಸರ್ಕಾರಿ ನೌಕರಿಯನ್ನು ತ್ಯಜಿಸಿದ್ದರು.

ಚೀನಾದ ಯಾವೊ ಕ್ಸಿಯಾನ್‌ಕ್ಸುನ್ (36 ಸ್ಕೋರ್) ಬೆಳ್ಳಿ ಮತ್ತು ಜರ್ಮನಿಯ ದೊರೀನ್ ವೆನ್ನೆಕಾಂಪ್ (30) ಅವರು ಕಂಚಿನ ಪದಕ ಪಡೆದರು. ಅನುಭವಿ ಯಾವೊ ಅವರು 10 ಮೀ. ಏರ್ ಪಿಸ್ತೂಲ್‌ನಲ್ಲಿ ಹಾಲಿ ವಿಶ್ವ ಚಾಂಪಿಯನ್ ಆಗಿದ್ದಾರೆ.

ಫೈನಲ್‌ಗೆ ಅರ್ಹತೆ ಪಡೆದ ಭಾರತದ ಮತ್ತೋರ್ವ ಶೂಟರ್ ಇಶಾ ಸಿಂಗ್ ಅವರು ಏಳನೇ ಸ್ಥಾನ ಪಡೆದರು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅವಳಿ ಪದಕ ಪಡೆದಿದ್ದ ಮನು ಭಾಕರ್ (581 ಪಾಯಿಂಟ್) ಅವರು ಅರ್ಹತಾ ಸುತ್ತಿನಲ್ಲಿ ಒಂಬತ್ತನೇ ಸ್ಥಾನಗಳಿಸಿದ್ದರು.

ಈ ವರ್ಷದ ಏಪ್ರಿಲ್‌ನಲ್ಲಿ ಲಿಮಾದಲ್ಲಿ (ಪೆರು) ನಡೆದಿದ್ದ ವಿಶ್ವಕಪ್‌ನಲ್ಲಿ ಬೆಳ್ಳಿ ಗೆದ್ದಿದ್ದ ಸಿಮ್ರನ್‌ಪ್ರೀತ್ ಭಾನುವಾರ ಕ್ವಾಲಿಫಿಕೇಷನ್‌ನಲ್ಲಿ 584 ಪಾಯಿಂಟ್ಸ್ ಸ್ಕೋರ್ ಮಾಡಿ ಐದನೇ ಹಾಗೂ ಇಶಾ 585 ಸ್ಕೋರ್‌ನೊಡನೆ ನಾಲ್ಕನೇ ಸ್ಥಾನ ಗಳಿಸಿ ಫೈನಲ್‌ಗೇರಿದ್ದರು.

ಐಶ್ವರಿಗೆ ಬೆಳ್ಳಿ: ಇದಕ್ಕ ಮೊದಲು, ಪುರುಷರ ರೈಫಲ್ ತ್ರೀ ಪೊಸಿಷನ್ ಸ್ಪರ್ಧೆಯ ಫೈನಲ್‌ನಲ್ಲಿ ಝೆಕ್ ಗಣರಾಜ್ಯದ ಜಿರಿ ಪ್ರಿವ್ರಾಟ್‌ಸ್ಕಿ 414.2 ಪಾಯಿಂಟ್ಸ್ ಸ್ಕೋರ್ ಮಾಡಿ ಚಿನ್ನ ಗೆದ್ದುಕೊಂಡಿದ್ದರು. ಐಶ್ವರಿ ಅವರಿಗಿಂತ ಕೇವಲ 09.9 ಪಾಯಿಂಟ್ ಅಂತರದಿಂದ ಹಿಂದೆಬಿದ್ದು ಎರಡನೇ ಸ್ಥಾನಕ್ಕೆ ಸರಿದರು. ಒಲಿಂಪಿಕ್ ಚಾಂಪಿಯನ್, ಚೀನಾದ ಲಿಯು ಯುಕುನ್ ಕಂಚಿನ ಪದಕ ಗಳಿಸಿದರು.

ಆ ಮೂಲಕ ಐಶ್ವರಿ ವಿಶ್ವ ಮತ್ತು ಏಷ್ಯಾ ಮಟ್ಟದ ಎಲ್ಲಾ ಸ್ಪರ್ಧೆಗಳಲ್ಲಿ ಐಶ್ವರಿ ಪ್ರಸಾದ್ ಪದಕ ಗೆದ್ದಂತಾಯಿತು. ಎರಡು ಬಾರಿಯ ಒಲಿಂಪಿಯನ್ ಆಗಿರುವ ಐಶ್ವರಿ ಮಾಜಿ ವಿಶ್ವ ಜೂನಿಯರ್ ಚಾಂಪಿಯನ್ ಆಗಿದ್ದಾರೆ. ಹಾಲಿ ಏಷ್ಯನ್ ಚಾಂಪಿಯನ್ ಆಗಿರುವ ಅವರು ಅಕ್ಟೋಬರ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು.

ಅರ್ಹತಾ ಸುತ್ತಿನಲ್ಲಿ ಅವರು 595 ಪಾಯಿಂಟ್ ಸ್ಕೋರ್ ಮಾಡಿ ಎರಡನೇ ಸ್ಥಾನ ಗಳಿಸಿದ್ದರು. ಈ ಸುತ್ತಿನಲ್ಲಿ ಅಮೋಘ ಪ್ರದರ್ಶನ ನೀಡಿದ ಚೀನಾದ ಟಿಯಾನ್ ಜಿಯಾಮಿಂಗ್ ಅವರು ವಿಶ್ವದಾಖಲೆಯ 598 ಸ್ಕೋರ್‌ನೊಡನೆ ಅಗ್ರಸ್ಥಾನ ಪಡೆದಿದ್ದರು. ಅಂತಿಮ ಎಂಟರಲ್ಲಿ ಚೀನಾದ ಮೂವರ ಜೊತೆ, ವರ್ಷದ ಅಥ್ಲೀಟ್ ಜಾನ್–ಹೆರ್ಮನ್ ಹೆಗ್ (ನಾರ್ವೆ) ಮತ್ತು ಇಸ್ತವಾನ್ ಪೆನಿ (ಹಂಗೆರಿ) ಅವರೂ ಸ್ಥಾನ ಪಡೆದಿದ್ದರು.

ಮಂಡಿಯೂರಿ ಶೂಟ್ ಮಾಡುವ ಸ್ಪರ್ಧೆಯ 10 ಶಾಟ್‌ಗಳ ನಂತರ ಐಶ್ವರಿ 102.8 ಸ್ಕೋರ್‌ನೊಡನೆ ನಾಲ್ಕನೇ ಸ್ಥಾನದಲ್ಲಿದ್ದರು. ಪ್ರೋನ್ (ಅಂಗಾತ ಸ್ಥಿತಿಯಲ್ಲಿ ಶೂಟ್ ಮಾಡುವ) ಪೊಸಿಷನ್ ನಂತರ ಅವರು ಎರಡನೇ ಸ್ಥಾನಕ್ಕೇರಿದರು. ಜಿರಿ ಪ್ರಿವ್ರಾಟ್‌ಸ್ಕಿ ಆಗ ಐಶ್ವರಿ ಅವರಿಗಿಂತ 3.3 ಪಾಯಿಂಟ್ ಮುಂದಿದ್ದರು. ಲಿಯು ಮೂರನೇ ಸ್ಥಾನದಲ್ಲಿದ್ದರು.

ಮಹಿಳೆಯರ ರೈಫಲ್ ತ್ರೀ ಪೊಸಿಷನ್‌ನಲ್ಲಿ ಸಿಫ್ಟ್ ಕೌರ್ ಸಮ್ರಾ, ಮಹಿಳೆಯರ 25 ಮೀ.ಪಿಸ್ತೂಲ್ ಫೈನಲ್‌ನಲ್ಲಿ ಮನು ಭಾಕರ್ ಅವರು ಅವರು ಅರ್ಹತಾ ಸುತ್ತಿಗಿಂತ ಮೇಲೇರಲು ವಿಫಲರಾದರು.

ಅರ್ಹತಾ ಸುತ್ತಿನಲ್ಲಿ ಸಿಫ್ಟ್ 584 ಸ್ಕೋರ್‌ನೊಡನೆ ಹತ್ತನೇ ಸ್ಥಾನ ಪಡೆದರೆ, ಮನು 581 ಸ್ಕೋರ್‌ನೊಡನೆ 9ನೇ ಸ್ಥಾನ ಪಡೆದರು.

ಐಪಿಎಲ್ ಸ್ಥಳಾಂತರವಾಗಲು ಬಿಡಲ್ಲ: ಡಿಕೆಶಿ

ಬೆಂಗಳೂರು: 'ಚಿನ್ನಸ್ವಾಮಿ ಕ್ರೀಡಾಂಗಣದಿಂದ ಐಪಿಎಲ್ ಪಂದ್ಯಗಳು ಸ್ಥಳಾಂತರವಾಗಲು ಬಿಡುವುದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು. ಕೆಎಸ್‌ಸಿಎ ಚುನಾವಣೆಯಲ್ಲಿ ಭಾನುವಾರ ಮತದಾನ ಮಾಡಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಆರ್‌ಸಿಬಿ ಸಂಭ್ರಮಾಚರಣೆ ವೇಳೆ ನಡೆದ ಅವಘಡದ ನಂತರ ಈ ಕ್ರೀಡಾಂಗಣದಿಂದ ಪಂದ್ಯಗಳು ಸ್ಥಳಾಂತರವಾಗುತ್ತವೆಯೇ ಎಂಬ ಬಗ್ಗೆ ಚರ್ಚೆಯಾಗುತ್ತಿದೆ. ಇದು ಕರ್ನಾಟಕ ಮತ್ತು ಬೆಂಗಳೂರಿನ ಗೌರವದ ಪ್ರಶ್ನೆ. ಪಂದ್ಯಗಳು ಸ್ಥಳಾಂತರವಾಗಲು ಅವಕಾಶ ನೀಡುವುದಿಲ್ಲ' ಎಂದರು.

'ನಾನು ಕ್ರಿಕೆಟ್ ಅಭಿಮಾನಿ. ಜೂನ್‌ನಲ್ಲಿ ಆಗಿರುವ ಅನಾಹುತ ಮುಂದೆ ಮರುಕಳಿಸದ ಹಾಗೆ ಎಚ್ಚರ ವಹಿಸುತ್ತೇವೆ. ಕಾನೂನಿನ ಚೌಕಟ್ಟಿನಲ್ಲಿಯೇ ಜನದಟ್ಟಣೆ ನಿಭಾಯಿಸಿಕೊಂಡು ಪಂದ್ಯಗಳನ್ನು ನಡೆಸಲಾಗುವುದು. ಇದರ ಜತೆಗೆ ದೊಡ್ಡ ಕ್ರೀಡಾಂಗಣವನ್ನೂ ನಿರ್ಮಾಣ ಮಾಡುತ್ತೇವೆ' ಎಂದರು.

ನರೇಶ್, ಬರ್ಮನ್ ಚಾಂಪಿಯನ್




ಬಿಜೋಯ ಬರ್ಮನ್

ಬೆಂಗಳೂರು: ನರೇಶ್ ಥಾಪಾ ಮತ್ತು ಬಿಜೋಯ ಬರ್ಮನ್ ಅವರು ನಗರದಲ್ಲಿ ಶನಿವಾರ ರಾತ್ರಿ ನಡೆದ ಬೆಂಗಳೂರು ಮಿಡ್‌ನೈಟ್ ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆದರು.

ರೋಟರಿ ಬೆಂಗಳೂರು ಐಟಿ ಕಾರಿಡಾರ್ ವತಿಯಿಂದ ವೈಟ್‌ಫೀಲ್ಡ್‌ನ ಕೆಟಿಪಿಒ ಆವರಣದಲ್ಲಿ ನಡೆದ 18ನೇ ಆವೃತ್ತಿಯ ಸ್ಪರ್ಧೆಯಲ್ಲಿ ಚಳಿಯನ್ನೂ ಲೆಕ್ಕಿಸದೆ 10 ಸಾವಿರಕ್ಕೂ ಅಧಿಕ ಓಟಗಾರರು ಉತ್ಸಾಹದಿಂದ ಭಾಗವಹಿಸಿದರು. ಮಹದೇವಪುರ ಶಾಸಕಿ ಮಂಜುಳಾ ಲಿಂಬಾವಳಿ ಮತ್ತು ಮೇಜರ್ ಜನರಲ್ ವಿ.ಟಿ. ಮ್ಯಾಥ್ಯೂ ಅವರು ಮ್ಯಾರಥಾನ್‌ಗೆ ಚಾಲನೆ ನೀಡಿದರು.

ಭಾರತೀಯ ನೌಕಾಪಡೆಯ ನರೇಶ್ ಥಾಪಾ ಅವರು 42.195 ಕಿಲೋ ಮೀಟರ್ ದೂರವನ್ನು 3 ಗಂಟೆ 41 ನಿಮಿಷ 08 ಸೆಕೆಂಡ್‌ಗಳಲ್ಲಿ ತಲುಪಿದರು. ನವೀನ್ ಕುಮಾರ್ (3:46.14), ಡಕಿನ್ಮಾವ್ಲಾಂಗ್ ವಾರ್ಜ್ರಿ (3:48.31) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಮಹಿಳೆಯರ ವಿಭಾಗದಲ್ಲಿ ಬರ್ಮನ್ ಅವರು 3 ಗಂಟೆ 35 ನಿಮಿಷ 34 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಮುರಿದ ಸಂಬಂಧ: ಮಂದಾನ ಸ್ಪಷ್ಟನೆ



ಸ್ಮೃತಿ ಮಂದಾನ



ಪಲಾಶ್

ನವದೆಹಲಿ (ಪಿಟಿಐ): ಪಲಾಶ್ ಮುಚ್ಛಲ್ ಜೊತೆ ತಮ್ಮ ವಿವಾಹ ರದ್ದಾಗಿದೆ ಎಂದು ಭಾರತ ಕ್ರಿಕೆಟ್ ತಂಡದ ಉಪನಾಯಕಿ ಸ್ಮೃತಿ ಮಂದಾನ ಅವರು ಸ್ಪಷ್ಟಪಡಿಸಿದ್ದಾರೆ. ಈ ಕುರಿತ ವದಂತಿಗಳಿಗೆ ಕೊನೆಹಾಡುವಂತೆ ಅಭಿಮಾನಿಗಳು ಮತ್ತು ಮಾಧ್ಯಮಗಳಿಗೆ ಅವರು ಮನವಿ ಮಾಡಿದ್ದಾರೆ.

'ಈ ಸಂಬಂಧದಿಂದ ಹೊರನಡೆಯುತ್ತಿರುವುದಾಗಿ' ಸಂಗೀತ ನಿರ್ದೇಶಕ ಪಲಾಶ್ ಮುಚ್ಛಲ್ ಅವರೂ ಖಚಿತಪಡಿಸಿದ್ದಾರೆ. ಮಾನಹಾನಿಕರ ವದಂತಿ ಹರಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿಯೂ ಮುಚ್ಛಲ್ ಎಚ್ಚರಿಕೆ ನೀಡಿದ್ದಾರೆ.

ಒಂದು ತಿಂಗಳಿಂದ ವಿವಾಹ ಕುರಿತು ಹರಿದಾಡುತ್ತಿದ್ದ ವದಂತಿಗಳಿಗೆ ಸಂಬಂಧಿಸಿ, ಭಾರತ ತಂಡದ ಸ್ಟಾರ್ ಬ್ಯಾಟರ್ ಮಂದಾನ ಇದೇ ಮೊದಲ ಬಾರಿ ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದಾರೆ. ನವೆಂಬರ್ 23ರಂದು ವಿವಾಹ ನಡೆಯಬೇಕಾಗಿತ್ತು. ಆದರೆ ಒಂದು ದಿನ ಮೊದಲು ಮಂದಾನ ಅವರ ತಂದೆ ಶ್ರೀನಿವಾಸ್ ಅವರಿಗೆ ಹೃದಯಬೇನೆ ಕಾಣಿಸಿಕೊಂಡು ಆಸ್ಪತ್ರೆಗೆ ದಾಖಲಾಗಿದ್ದ ಕಾರಣ ವಿವಾಹ ಮುಂದಕ್ಕೆ ಹೋಗಿತ್ತು.

'ವಿವಾಹ ರದ್ದಾಗಿದೆ. ಈ ವಿಷಯವನ್ನು ಇಲ್ಲಿಗೇ ಕೊನೆಗೊಳಿಸುತ್ತಿದ್ದೇನೆ' ಎಂದು 28 ವರ್ಷ ವಯಸ್ಸಿನ ಆಟಗಾರ್ತಿ ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ.

'ಕಳೆದ ಕೆಲವಾರಗಳಿಂದ ನನ್ನ ಜೀವನಕ್ಕೆ ಸಂಬಂಧಿಸಿ ಸಾಕಷ್ಟು ವದಂತಿ ಹರಡಿದ್ದವು. ಈ ಸನ್ನಿವೇಶದಲ್ಲಿ ಮಾತನಾಡುವುದು ಮುಖ್ಯವೆಂದು ನನಗೆ ಅನಿಸಿತು' ಎಂದು ಮಂದಾನ ಹೇಳಿದ್ದಾರೆ. 'ಎರಡೂ ಕುಟುಂಬಗಳ ಖಾಸಗಿತನವನ್ನು ಗೌರವಿಸುವಂತೆ' ಅವರು ಅಭಿಮಾನಿಗಳಿಗೆ ಮತ್ತು ಸಾರ್ವಜನಿಕರಿಗೆ ವಿನಂತಿಸಿದ್ದಾರೆ.

ಭಾರತ ತಂಡದ ಮುಂಬರುವ ಅಂತರ ರಾಷ್ಟ್ರೀಯ ಕ್ರಿಕೆಟ್ ಋತುವಿಗೆ ಸಿದ್ಧತೆ ನಡೆಸುತ್ತಿರುವ ಸ್ಮೃತಿ ಅವರು, 'ತಮ್ಮ ಗಮನ ಕ್ರಿಕೆಟ್ ಮೇಲೆ ಇರಲಿದೆ' ಎಂದು ಹೇಳಿದ್ದಾರೆ.

ಮಂದಾನ ಹೇಳಿಕೆ ಹೊರಬಿದ್ದ ಕೆಲವೇ ಗಂಟೆಗಳ ನಂತರ ಪಲಾಶ್ ಮುಚ್ಛಲ್ ಸಹ ಹೇಳಿಕೆ ಬಿಡುಗಡೆ ಮಾಡಿ 'ಸಂಬಂಧದಿಂದ ಹೊರನಡೆಯುತ್ತಿದ್ದೇನೆ' ಎಂದು ಹೇಳಿದ್ದು, ಆನ್‌ಲೈನ್‌ನಲ್ಲಿ ನಡೆಯುತ್ತಿರುವ ಆಧಾರರಹಿತ ಚರ್ಚೆಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ನನ್ನ ಬದುಕು ಎಂದಿನಂತೆ ಮುಂದುವರಿಯಲಿದೆ. ಆಧಾರರಹಿತ ವದಂತಿಗಳ ಬಗ್ಗೆ ಜನರು ಪ್ರತಿಕ್ರಿಯಿಸುವ ರೀತಿಯನ್ನು ಸಹಿಸಲು ಆಗುತ್ತಿಲ್ಲ. ತಮ್ಮ ಕಾನೂನು ತಂಡ ಮಾನಹಾನಿಕರ ವದಂತಿ ಹರಡುವವರ ವಿರುದ್ಧ ಕ್ರಮ ಕೈಗೊಳ್ಳಲಿದೆ' ಎಂದು ಎಚ್ಚರಿಸಿದ್ದಾರೆ.

ಪಿಂಕ್‌ಬಾಲ್ ಟೆಸ್ಟ್: ಇಂಗ್ಲೆಂಡ್‌ಗೆ 8 ವಿಕೆಟ್‌ಗಳ ಸೋಲು
ಆಸ್ಟ್ರೇಲಿಯಾ ತಂಡಕ್ಕೆ 2–0 ಮುನ್ನಡೆ



ಐದು ವಿಕೆಟ್ ಗೊಂಚಲು ಪಡೆದ ಆಸ್ಟ್ರೇಲಿಯಾದ ಮೈಕೆಲ್ ನೆಸೆರ್

ಬ್ರಿಸ್ಬೇನ್ (ಎಎಫ್‌ಪಿ): ಹಗಲು–ರಾತ್ರಿಯಾಗಿ ನಡೆದ ಆ್ಯಷಸ್ ಸರಣಿಯ ಎರಡನೇ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಭಾನುವಾರ ಎಂಟು ವಿಕೆಟ್‌ಗಳಿಂದ ಇಂಗ್ಲೆಂಡ್ ತಂಡವನ್ನು ಸೋಲಿಸಿತು. ಸರಣಿಯಲ್ಲಿ 2–0 ಮುನ್ನಡೆ ಪಡೆಯಿತು.

ನಾಲ್ಕನೇ ದಿನ ಗೆಲುವಿಗೆ 65 ರನ್‌ಗಳ ಗುರಿ ಎದುರಿಸಿದ್ದ ಆಸ್ಟ್ರೇಲಿಯಾ ಅದನ್ನು 10 ಓವರುಗಳಲ್ಲಿ ಪೂರೈಸಿತು. ವೇಗದ ಬೌಲರ್ ಗಸ್ ಅಟ್ಕಿನ್ಸನ್ ಬೌಲಿಂಗ್‌ನಲ್ಲಿ ಸ್ಕ್ವೇರ್‌ಲೆಗ್ ಮೇಲೆ ಸಿಕ್ಸರ್ ಎತ್ತುವ ಮೂಲಕ ನಾಯಕ ಸ್ಟೀವ್ ಸ್ಮಿತ್ (ಔಟಾಗದೇ 23, 9ಎ, 4x2, 6x2) ಗೆಲುವಿನ ಔಪಚಾರಿಕತೆ ಪೂರೈಸಿದರು.

ಪರ್ತ್‌ನಲ್ಲಿ ಎರಡೇ ದಿನಗಳಲ್ಲಿ ಮುಗಿದ ಮೊದಲ ಟೆಸ್ಟ್‌ನ ರೀತಿಯಲ್ಲಿ ಇಂಗ್ಲೆಂಡ್‌ಗೆ ಇಲ್ಲಿ ಮುಖಭಂಗವಾಗಲಿಲ್ಲ. ಆದರೆ ಪಿಂಕ್‌ಬಾಲ್ ಟೆಸ್ಟ್‌ನಲ್ಲೂ ಆತಿಥೇಯರು ಎಲ್ಲ ವಿಭಾಗಗಳಲ್ಲಿ ಇಂಗ್ಲೆಂಡ್ ತಂಡವನ್ನು ಮೀರಿಸಿದರು. ಇನ್ನು ಮೂರು ಟೆಸ್ಟ್‌ಗಳು (ಅಡಿಲೇಡ್, ಮೆಲ್ಬರ್ನ್ ಮತ್ತು ಸಿಡ್ನಿ) ಉಳಿದಿರುವಂತೆ ಆಸ್ಟ್ರೇಲಿಯಾ ಸರಣಿ ಗೆಲ್ಲುವ ನೆಚ್ಚಿನ ತಂಡವೆನಿಸಿದೆ.

ನಾಯಕ ಬೆನ್ ಸ್ಟೋಕ್ಸ್ ಮತ್ತು ವಿಲ್ ಜಾಕ್ಸ್ ಎರಡನೇ ಇನಿಂಗ್ಸ್‌ನಲ್ಲಿ ಸ್ವಲ್ಪ ಹೋರಾಟ ತೋರಿದರು. ಆದರೆ ಗ್ಯಾಬಾದ ಬೌನ್ಸಿ ಪಿಚ್‌ನಲ್ಲಿ ಇಬ್ಬರೂ ಕೆಟ್ಟ ಹೊಡೆತಗಳಿಂದ ವಿಕೆಟ್‌ಗಳನ್ನು ಕಳೆದುಕೊಂಡರು.

ಒಂದೆಡೆ, ಇಂಗ್ಲೆಂಡ್ ಬೌಲಿಂಗ್ ಕಳಪೆಯಾಗಿತ್ತು. ಬೌಲರ್‌ಗಳು ಅತಿಯಾಗಿ ಶಾರ್ಟ್‌ಪಿಚ್ ಎಸೆತಗಳನ್ನು ಪ್ರಯೋಗಿಸಿದರು. ಇನ್ನೊಂದು ಕಡೆ ಪ್ಯಾಟ್ ಕಮಿನ್ಸ್ ಮತ್ತು ಜೋಶ್ ಹ್ಯಾಜಲ್‌ವುಡ್ ಗೈರಿನಲ್ಲೂ ಆಸ್ಟ್ರೇಲಿಯಾ ಬೌಲಿಂಗ್ ಪರಿಣಾಮಕಾರಿಯಾಗಿತ್ತು. ಇದೂ ಸಾಲದೆಂಬಂತೆ ಇಂಗ್ಲೆಂಡ್ ಫೀಲ್ಡರ್‌ಗಳು ಮೊದಲ ಇನಿಂಗ್ಸ್‌ನಲ್ಲಿ ಐದು ಕ್ಯಾಚ್‌ಗಳನ್ನು ಬಿಟ್ಟರು. ಆದರೆ ಆಸ್ಟ್ರೇಲಿಯಾದವರು ಪಾಲಿಗೆ ಬಂದ ಅವಕಾಶಗಳನ್ನು ಬಿಡಲಿಲ್ಲ. ಮೊದಲ ಇನಿಂಗ್ಸ್‌ನಲ್ಲಿ ಸ್ಟೋಕ್ಸ್ ಅವರನ್ನು ಜೋಶ್ ಇಂಗ್ಲಿಸ್ ಅಮೋಘ ರೀತಿಯಲ್ಲಿ ರನೌಟ್ ಮಾಡಿದ್ದು ಪಂದ್ಯಕ್ಕೆ ತಿರುವು ನೀಡಿತು.

ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ 177 ರನ್‌ಗಳ ಮುನ್ನಡೆ ಪಡೆದಿತ್ತು. ಮೂರನೇ ದಿನದಾಟದ ಕೊನೆಗೆ 6 ವಿಕೆಟ್‌ಗೆ 134 ರನ್ ಗಳಿಸಿದ್ದ ಪ್ರವಾಸಿ ತಂಡ ಸೋಲು ತಪ್ಪಿಸಲು ಇನ್ನೂ 43 ರನ್ ಗಳಿಸಬೇಕಿತ್ತು. ಇಂಗ್ಲೆಂಡ್ ಸುಲಭವಾಗಿ ಶರಣಾಗಬಹುದೆಂಬ ನಿರೀಕ್ಷೆಯಿತ್ತು. ಆದರೆ ಸ್ಟೋಕ್ಸ್ ಮತ್ತು ಜಾಕ್ಸ್ ಏಳನೇ ವಿಕೆಟ್‌ಗೆ 96 ರನ್ ಸೇರಿಸಿದ್ದರಿಂದ ಆಸ್ಟ್ರೇಲಿಯಾ ಮತ್ತೊಮ್ಮೆ ಬ್ಯಾಟಿಂಗ್ ಮಾಡಬೇಕಾಯಿತು. ಅಂತಿಮವಾಗಿ ಇಂಗ್ಲೆಂಡ್ ಎರಡನೇ ಇನಿಂಗ್ಸ್‌ನಲ್ಲಿ 241 ರನ್‌ಗಳಿಗೆ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 334; ಆಸ್ಟ್ರೇಲಿಯಾ: 511; ಎರಡನೇ ಇನಿಂಗ್ಸ್: ಇಂಗ್ಲೆಂಡ್: 75.2 ಓವರುಗಳಲ್ಲಿ 241 (ಬೆನ್ ಸ್ಟೋಕ್ಸ್ 50, ವಿಲ್ ಜಾಕ್ಸ್ 41, ಮಿಚೆಲ್ ಸ್ಟಾರ್ಕ್ 64ಕ್ಕೆ2, ಮೈಕೆಲ್ ನೆಸೆರ್ 42ಕ್ಕೆ5); ಆಸ್ಟ್ರೇಲಿಯಾ: 10 ಓವರುಗಳಲ್ಲಿ 2 ವಿಕೆಟ್‌ಗೆ 69 (ಸ್ಟೀವ್ ಸ್ಮಿತ್ ಔಟಾಗದೇ 23; ಗಸ್ ಅಟ್ಕಿನ್ಸನ್ 37ಕ್ಕೆ2).

ಪಂದ್ಯದ ಆಟಗಾರ: ಮಿಚೆಲ್ ಸ್ಟಾರ್ಕ್ (75ಕ್ಕೆ6, 77 ಮತ್ತು 64ಕ್ಕೆ2).

ಗೌರವ ಹಂಚಿಕೊಂಡ ಕರ್ನಾಟಕ, ಮಧ್ಯಪ್ರದೇಶ

ಬೆಂಗಳೂರು: ಮಧ್ಯಪ್ರದೇಶ ತಂಡವು ರಾಯಪುರದ ಶಹೀದ್ ವೀರ ನಾರಾಯಣ ಸಿಂಗ್ ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ ವಿಜಯ್ ಮರ್ಚೆಂಟ್ ಟ್ರೋಫಿ (16 ವರ್ಷದೊಳಗಿನವರ) ಎಲೀಟ್ ಗುಂಪಿನ ಪಂದ್ಯದಲ್ಲಿ ಕರ್ನಾಟಕ ವಿರುದ್ಧ 86 ಓವರುಗಳಲ್ಲಿ 6 ವಿಕೆಟ್‌ಗೆ 269 ರನ್ ಗಳಿಸಿತು. ಮೊದಲ ದಿನ ಎರಡೂ ತಂಡಗಳು ಗೌರವ ಹಂಚಿಕೊಂಡವು.

ಕರ್ನಾಟಕದ ಪರ ದಾಳಿ ಆರಂಭಿಸಿದ ವಿಕ್ರಮ್ (77ಕ್ಕೆ2) ಮತ್ತು ಸಮರ್ಥ ಕುಲಕರ್ಣಿ (34ಕ್ಕೆ2) ಅವರು ನಿಯಮಿತವಾಗಿ ವಿಕೆಟ್‌ಗಳನ್ನು ಪಡೆದರು. ಮಧ್ಯಪ್ರದೇಶ ತಂಡಕ್ಕೆ ಆರ್ಣವ್ ಜಿ. (71, 135ಎ, 4x11), ಅಥರ್ವ ಪಟೇಲ್ (ಅಜೇಯ 67) ಮತ್ತು ಕುಶಾಗ್ರ ನಗರ್ (62) ಅವರು ಅರ್ಧ ಶತಕಗಳ ಮೂಲಕ ಆಸರೆಯಾದರು.

ಮಧ್ಯಪ್ರದೇಶ ತಂಡವು ಒಂದು ಹಂತದಲ್ಲಿ 101 ರನ್‌ಗಳಾಗುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡಿತ್ತು. ಆರ್ಣವ್ ಮತ್ತು ಅಥರ್ವ ಐದನೇ ವಿಕೆಟ್‌ಗೆ 92 ರನ್ ಸೇರಿಸಿ ಗಮನಾರ್ಹ ಚೇತರಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮಧ್ಯಪ್ರದೇಶ: 86 ಓವರುಗಳಲ್ಲಿ 6ಕ್ಕೆ 269 (ಕುಶಾಗ್ರ ನಗರ್ 62, ಆರ್ಣವ್ ಫೋಡಗಾಂವಕರ 71, ಅಥರ್ವ್ ಔಟಾಗದೇ 67; ವಿಕ್ರಮ್ 77ಕ್ಕೆ2, ಸಮರ್ಥ್ ಎಂ.ಕುಲಕರ್ಣಿ 34ಕ್ಕೆ2) ವಿರುದ್ಧ ಕರ್ನಾಟಕ.

ಬ್ಯಾಡ್ಮಿಂಟನ್: ಕನ್ನಡಿಗ ಮಿಥುನ್ ಮಂಜುನಾಥ್‌ಗೆ ಫೈನಲ್‌ನಲ್ಲಿ ಸೋಲು
ಗುವಾಹಟಿ ಮಾಸ್ಟರ್ಸ್: ಸಾರಸ್ವತ್‌ಗೆ ಕಿರೀಟ



ಸಂಸ್ಕಾರ್ ಸಾರಸ್ವತ್ ಆಟದ ವೈಖರಿ ಬಿಎಐ ಚಿತ್ರ

ಗುವಾಹಟಿ (ಪಿಟಿಐ): ಭಾರತದ ಆಟಗಾರರ ವ್ಯವಹಾರವಾಗಿದ್ದ ಫೈನಲ್‌ನಲ್ಲಿ ರಾಜಸ್ಥಾನದ ಸಂಸ್ಕಾರ್ ಸಾರಸ್ವತ್ ಅವರು ಮೂರು ಗೇಮ್‌ಗಳ ಸೆಣಸಾಟದ ನಂತರ ಮಿಥುನ್ ಮಂಜುನಾಥ್ ಅವರನ್ನು ಸೋಲಿಸಿ ಗುವಾಹಟಿ ಮಾಸ್ಟರ್ಸ್ ಪ್ರಶಸ್ತಿ ಗೆದ್ದುಕೊಂಡರು. ಇದು ಸಾರಸ್ವತ್ ಅವರಿಗೆ ಮೊದಲ ಸೂಪರ್ 100 ಪ್ರಶಸ್ತಿಯಾಗಿದೆ.

ಭಾನುವಾರ 50 ನಿಮಿಷಗಳವರೆಗೆ ನಡೆದ ಫೈನಲ್‌ನಲ್ಲಿ ಜೋಧಪುರದ ಸಾರಸ್ವತ್ 21–11, 17–21, 21–13 ರಿಂದ ಮಾಜಿ ರಾಷ್ಟ್ರೀಯ ಚಾಂಪಿಯನ್, ಕರ್ನಾಟಕದ ಮಿಥುನ್ ಅವರನ್ನು ಸೋಲಿಸಿದರು.

ಗುವಾಹಟಿಯ ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ ಸಾರಸ್ವತ್, ದೇಶಿ ಟೂರ್ನಿಯಲ್ಲಿ ಈಗಾಗಲೇ ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಕಳೆದ ವರ್ಷ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಸೀನಿಯರ್ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್‌ನಲ್ಲಿ ಅರ್ಷ್ ಮೊಹಮ್ಮದ್ ಜೊತೆಗೂಡಿ ಪ್ರಶಸ್ತಿ ಗೆದ್ದುಕೊಂಡಿದ್ದರು. ಇದಕ್ಕೆ ಮೊದಲು ಜೂನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಸಿಂಗಲ್ಸ್ ಕಿರೀಟ ಧರಿಸಿದ್ದರು.

ಬಲಗಾಲಿಗೆ ದೊಡ್ಡ ಪಟ್ಟಿಕಟ್ಟಿಕೊಂಡಿದ್ದ ಸಾರಸ್ವತ್ ಮೊದಲ ಗೇಮ್‌ನಲ್ಲಿ 7–7ರಲ್ಲಿ ಸಮ ಮಾಡಿಕೊಂಡಿದ್ದರು. ನಂತರ, 19 ವರ್ಷ ವಯಸ್ಸಿನ ಸಾರಸ್ವತ್ 11–9, 14–10ರಲ್ಲಿ ಮುನ್ನಡೆ ಪಡೆದರು. ಬಳಿಕ ಅವರು ಗೇಮ್ ಪಡೆಯಲು ಕಷ್ಟಪಡಲಿಲ್ಲ.

ಎರಡನೇ ಗೇಮ್‌ನಲ್ಲಿ ಸಾರಸ್ವತ್ ಆಕ್ರಮಣಕಾರಿ ಆಟ ಮುಂದುವರಿಸಿದರು. ಒಂದು ಹಂತದಲ್ಲಿ 8–2ರಲ್ಲಿ ಮುನ್ನಡೆ ಸಹ ಪಡೆದಿದ್ದರು. ದೀರ್ಘ ಸ್ಮಾಶ್‌ಗಳ ಮೂಲಕ ಅವರು ಮಿಥುನ್ ಅವರನ್ನು ಒತ್ತಡಕ್ಕೆ ಗುರಿಪಡಿಸಿದರು. ಆದರೆ ಕರ್ನಾಟಕ ಆಟಗಾರ ಚೇತರಿಸಿಕೊಂಡರು. ಒಂದು ಹಂತದಲ್ಲಂತೂ ಸತತ ಐದು ಪಾಯಿಂಟ್ ಪಡೆದು 11–10ರಲ್ಲಿ ಮುನ್ನಡೆ ಸಾಧಿಸಿದರು. ನಂತರ ಹಿಡಿತ ಮಿಥುನ್ ಕಡೆ ವಾಲಿತು. 18–16ರಲ್ಲಿ ಮುನ್ನಡೆದ ಅವರು ಗೇಮ್ ಗೆದ್ದರು. ಆ ಮೂಲಕ ಪಂದ್ಯವನ್ನು ನಿರ್ಣಾಯಕ ಗೇಮ್‌ಗೆ ಒಯ್ದರು.

ಮೂರನೇ ಗೇಮ್‌ನಲ್ಲಿ ಬಿರುಸಿನಿಂದ ಆಡಿದ ಸಾರಸ್ವತ್ 7–0 ಮುನ್ನಡೆ ಪಡೆದರಲ್ಲದೇ, ವಿರಾಮದ ವೇಳೆಗೆ 11–5 ಲೀಡ್ ಪಡೆದರು. ಈ ಹಂತದಲ್ಲಿ ಅವರು ಪಂದ್ಯದಲ್ಲಿ ಹಿಡಿತ ಸಾಧಿಸಿದರು.